# ಅಖಿಲ ಭಾರತ ಪತ್ರಿಕೆ

**ಸಂಪಾದಕರು, ಧಾರವಾಡ**
ಡಾ|| ಕೆ. ಎಸ್. ಆಮೂರ
ಎಂ. ಎಸ್ಸಿ, ಪಿಎಚ್‌ಡಿ
ಶಿವಗಿರಿ, ಧಾರವಾಡ – 580 007.
Ph : 0836 - 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ|| ಗುರುಲಿಂಗ ಕಾಪಸೆ
ಡಾ|| ಪಾರ್ವತಿ ನಾರಾಯಣರಾವ್
ಡಾ|| ಸುಶೀಲಾ ಬಳುಂಡಗಿ

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್
ಜೆ. ಪಿ. ನಗರ, ಬೆಂಗಳೂರು – 78.

**ಆಫ್ ಸೆಟ್ ಮುದ್ರಣ :**
ಮಿರಾಂಬಿಕಾ ಮುದ್ರಣಾಲಯ
ಶ್ರೀಅರವಿಂದೋಸಂಕೀರ್ಣಟ್ರಸ್ಟ್
ಜೆ. ಪಿ. ನಗರ, ಬೆಂಗಳೂರು – 78.
Ph : 080 - 26655766

**ಪ್ರಕಾಶಕರು :**
ಶ್ರೀ ಅಜಿತ್ ಎಸ್. ಸಬ್ನೀಸ್
ಶ್ರೀ ಅರವಿಂದೋ ಸೊಸೈಟಿ
ರಾಜ್ಯ ಸಮಿತಿ, ಕರ್ನಾಟಕ
ಶ್ರೀ ಅರವಿಂದ ಮಾರ್ಗ
ಜೆ. ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 78.
Ph : 080 - 26642239


ಪರಿವಿಡಿ

''ಹೊಸ ಜನ್ಮ''


| | ಪುಟ |
|---|---|
| **ಅನು : ಡಾ. ಕೆ.ಎಸ್. ಆಮೂರ** | |
| ಶ್ರೀಮಾತೆಯವರಿಂದ ನಮ್ಮ ಹೊಸ ಜನ್ಮ | 02 |
| ದಿವ್ಯಾತ್ಮನಲ್ಲಿ ಹೊಸ ಜನ್ಮ | 02 |
| ಹೊಸ ಜನ್ಮ ತಾಳುವ ಸಾಧ್ಯತೆ ಮನುಷ್ಯನ ಎದುರಿಗಿದೆ | 05 |
| ಅರ್ಧ ಪ್ರಜ್ಞೆಯ ಸ್ಥಿತಿಯಿಂದ ಪುಟಿದೇಳಿರಿ | 07 |
| ಚೈತ್ತ್ಯಾತ್ಮಿಕ ಹೊಸ ಜನ್ಮ | 10 |
| ನಿರ್ಧಾರಕ ಹೆಜ್ಜೆಯನ್ನಿರಿಸಿರಿ | 11 |
| ಅಹಂಕಾರದ ಸ್ಥಾನದಲ್ಲಿ ದೈವೀ ಪ್ರಜ್ಞೆಯನ್ನಿರಿಸುವುದು | 13 |
| ಮನುಷ್ಯ ತಾನಿದ್ದ ಸೆರೆಮನೆಯಿಂದ ಸಿಡಿದು-ಹೊರಬರುವುದು | 14 |
| ಹೊಸ ಜನ್ಮದೆಡೆಗೆ ಮಾರ್ಗ | 16 |
| ಎಲ್ಲ ಯೋಗವು ಅದರ ಸ್ವರೂಪದಲ್ಲಿ ಹೊಸಜನ್ಮವಾಗಿದೆ | 18 |
| ದಿವ್ಯಾತ್ಮದ ಜನ್ಮಗಳು | 20 |
| ಹೊಸ ಜನ್ಮಕ್ಕೆ ಎರಡು ಹಂತಗಳಿವೆ | 21 |
| ಇದನ್ನು ಇಂದು ಹೊಸ ಜನ್ಮವೆಂದು ಸ್ವೀಕರಿಸಿರಿ | 22 |
| ಶ್ರೀ ಅರವಿಂದರ ಸಂದೇಶ | 27 |
| **ಅನು : ದಿ. ಶಂಕರ ಜೋಶಿ** | |
| ಗೀತಾ ಪ್ರಬಂಧಗಳು | |
| ಅಧ್ಯಾಯ 14 : ದಿವ್ಯಕರ್ಮದ ಮೂಲತತ್ವ | 28 |
| ವಾರ್ತಾಪತ್ರ | 43 |


(25/176) ನೀನು ಶ್ರೀಮಾತೆಯವರ ಮಗು, ತಮ್ಮ ಮಕ್ಕಳಿಗಾಗಿ ಶ್ರೀಮಾತೆಯವರ ಪ್ರೇಮ ಅಮಿತವಾದದ್ದು ಮತ್ತು ಅವರು ತಾಳ್ಮೆಯಿಂದ ಮಕ್ಕಳ ಸ್ವಭಾವದಲ್ಲಿರುವ ದೋಷಗಳನ್ನು ಸಹಿಸಿಕೊಳ್ಳುತ್ತಾರೆ. ಶ್ರೀಮಾತೆಯವರ ನಿಜವಾದ ಮಗುವಾಗಲು ಪ್ರಯತ್ನಿಸು. ಅವರ ಪ್ರೇಮ ನಿನ್ನ ಅಂತರಂಗದಲ್ಲಿದೆ, ಆದರೆ ನಿನ್ನ ಬಾಹ್ಯ ಮನಸ್ಸು ಚಿಕ್ಕಪುಟ್ಟ ವ್ಯರ್ಥ ವಿಷಯಗಳಲ್ಲಿ ಹಾಗೂ ಬಹಳಷ್ಟು ಸಲ ಅವುಗಳನ್ನು ಕುರಿತು ಹಿಂಸಾತ್ಮಕ ಹಾಗೂ ಕಾತರದ ಚಟುವಟಿಕೆಯಲ್ಲಿ ಮಗ್ನವಾಗಿರುತ್ತದೆ.

– ಶ್ರೀ ಅರವಿಂದರು.

★ ★ ★



## ಶ್ರೀಮಾತೆಯವರಿಂದ ನಮ್ಮ ಹೊಸ ಜನ್ಮ

(26/482) ಅತ್ಯಂತ ಸುಲಭವಾಗಿ ಕಂಡುಬರುವ ವ್ಯತ್ಯಾಸಗಳನ್ನು ಹಾಗೂ ಸರಳವಾದ ಸತ್ಯಗಳನ್ನು ತಿಳಿದುಕೊಳ್ಳಲು ಅಸಾಮರ್ಥ್ಯ ಸೂಚಿಸುವ ನಿನ್ನ ಪತ್ರವು ಆಶ್ಚರ್ಯಕರವಾಗಿದೆ, ಭೌತಿಕ ದೇಹಕ್ಕೆ ಜನ್ಮ ಕೊಡುವ ಒಬ್ಬಳು ಉಪಕರಣ- ರೂಪದವಳಾಗಿರುತ್ತಾಳೆ ಮತ್ತು ಅವಳ ಜೀವನ ಕಾಲದಲ್ಲಿ ಲೌಕಿಕ ತಾಯಿಯಾಗಿರುತ್ತಾಳೆ, ಆದರೆ ಇಲ್ಲಿ (ಆಶ್ರಮದಲ್ಲಿ)ರುವ ಶ್ರೀಮಾತೆ ಮತ್ತು 'ಕ್ಷ'ರ (ಶ್ರೀಮಾತೆಯವರ ಹಾಗೂ ಅವರನ್ನು ಮಾತೆಯೆಂದು ಒಪ್ಪಿಕೊಂಡ ಎಲ್ಲರ) ನಡುವೆ ಅಸ್ತಿತ್ವದಲ್ಲಿರುವ ಸಂಬಂಧ ಚೈತ್ತ್ಯಾತ್ಮಿಕ ಹಾಗೂ ಆಧ್ಯಾತ್ಮಿಕ ತಾಯ್ತನದ್ದಾಗಿರುತ್ತದೆ. ಈ ಸಂಬಂಧ ಭೌತಿಕ ತಾಯಿ ಹಾಗೂ ಅವಳ ಮಗು ಇವರ ನಡುವಿನ ಸಂಬಂಧಕ್ಕಿಂತ ಬಹಳ ಶ್ರೇಷ್ಠವಾಗಿರುತ್ತದೆ. ಅದು ಮಾನವ ತಾಯಿ ಕೊಡಬಹುದಾದುದೆಲ್ಲವನ್ನೂ ಬಹಳ ಉನ್ನತ ಮಟ್ಟದಲ್ಲಿ ಕೊಡುತ್ತದೆ ಮತ್ತು ಅದರಲ್ಲಿ ಅನಂತಪಟ್ಟು ಇರುವುದನ್ನು ಒಳಗೊಂಡಿರುತ್ತದೆ. ಅದು ಶ್ರೇಷ್ಠತರ ಹಾಗೂ ಹೆಚ್ಚು ಸಂಪೂರ್ಣವಾಗಿರುವುದರಿಂದ ಭೌತಿಕ ಸಂಬಂಧದ ಸ್ಥಳವನ್ನು ಒಟ್ಟಿನಲ್ಲಿ ಆಕ್ರಮಿಸಬಹುದು ಮತ್ತು ಅದನ್ನು ಆಂತರಿಕ ಹಾಗೂ ಬಾಹ್ಯ ಜೀವನದಲ್ಲಿ ಇರಿಸಬಹುದು. ಇಲ್ಲಿ ಸಾಮಾನ್ಯ ಜ್ಞಾನವಿರುವ ಮತ್ತು ಸರಳ ಬುದ್ಧಿಯಿರುವ ಯಾರನ್ನಾದರೂ ಗೊಂದಲಕ್ಕೀಡು ಮಾಡುವಂತಹದು ಏನೂ ಇಲ್ಲ. ಭೌತಿಕ ವಾಸ್ತವತೆ ಶ್ರೇಷ್ಠತರ ಚೈತ್ತ್ಯಾತ್ಮಿಕ ಹಾಗೂ ಆಧ್ಯಾತ್ಮಿಕ ಸತ್ಯದ ದಾರಿಯಲ್ಲಿ ಕಿಂಚಿತ್ತೂ ಅಡ್ಡಬರಲಾರದು ಮತ್ತು ಆ ಸತ್ಯ ನಿಜವಾಗಿರುವುದನ್ನು ತಡೆಯಲಾರದು. 'ಕ್ಷ'ನು ಶ್ರೀಮಾತೆಯವರು ತನ್ನ ತಾಯಿ ಎಂದು ಹೇಳಿದಾಗ ಅವನು ಸಂಪೂರ್ಣವಾಗಿ ಸರಿಯಾದುದನ್ನೇ ಹೇಳಿದ್ದಾನೆ, ಏಕೆಂದರೆ ಅವರು ಅವನಿಗೆ ಆಂತರಿಕ ಜೀವನದಲ್ಲಿ ಹೊಸ ಜನ್ಮ ಕೊಟ್ಟಿದ್ದಾರೆ ಮತ್ತು ಅವನಲ್ಲಿ ಹೆಚ್ಚು ದೈವಿಕವಾದ ಅಸ್ತಿತ್ವ ಬರಲೆಂದು ಅವನನ್ನು ಹೊಸದಾಗಿ ಸೃಷ್ಟಿಸುತ್ತಿದ್ದಾರೆ.

– ಶ್ರೀ ಅರವಿಂದರು.

★

## ದಿವ್ಯಾತ್ಮನಲ್ಲಿ ಹೊಸ ಜನ್ಮ

(9/430-31) ''ಹೊಸ ಜನ್ಮ'' ಎಂದು ನಾವು ಕರೆಯುವುದು ಆಧ್ಯಾತ್ಮಿಕ ಜೀವನದಲ್ಲಿ ಹಾಗೂ ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಜನ್ಮತಾಳುವುದಾಗಿದೆ. ಅದು ಮನುಷ್ಯ ತನ್ನಲ್ಲಿ ದಿವ್ಯಾತ್ಮದ

ಏನೋ ಒಂದನ್ನು ಕೊಂಡೊಯ್ಯುವುದಾಗಿದೆ, ಆ ಏನೋ ಒಂದು ವೈಯಕ್ತಿಕವಾಗಿ ಆತ್ಮದ ಮೂಲಕ ಜೀವನವನ್ನು ಆಳಲು ಪ್ರಾರಂಭಿಸಬಲ್ಲದು ಮತ್ತು ಅಸ್ತಿತ್ವದ ಪ್ರಭುವಾಗುವುದು. ಆದರೆ ಅತಿಮಾನಸ ಜಗತ್ತಿನಲ್ಲಿ ಆತ್ಮವು ಪ್ರಜ್ಞಾಪೂರ್ವಕವಾಗಿ, ಸ್ವಯಂ ಪ್ರೇರಣೆಯಿಂದ ಹಾಗೂ ಸ್ವಾಭಾವಿಕವಾಗಿ ಇಡೀ ಜಗತ್ತಿನ ಹಾಗೂ ಅದರ ಎಲ್ಲ ಪ್ರಕಟಣೆಯ, ಎಲ್ಲ ಅಭಿವ್ಯಕ್ತಿಯ ಪ್ರಭುವಾಗುವುದು.

ವೈಯಕ್ತಿಕ ಜೀವನದಲ್ಲಿ ಎಲ್ಲ ವ್ಯತ್ಯಾಸ ಅದರಿಂದಲೇ ಉಂಟಾಗುವುದು. ಎಲ್ಲಿಯವರೆಗೆ ಮನುಷ್ಯ ಆತ್ಮ ಕುರಿತು ಕೇವಲ ಮಾತನಾಡುವನೋ, ಅದನ್ನು ಕುರಿತು ಓದಿಕೊಂಡಿರುವನೋ, ಅದರ ಅಸ್ತಿತ್ವದ ಬಗ್ಗೆ ಅಸ್ಪಷ್ಟವಾಗಿ ಅರಿತುಕೊಂಡಿರುವನೋ, ಆದರೆ ಅದು ಬಹಳ ಮೂರ್ತ ಸ್ವರೂಪದ ನೈಜತೆಯೆಂದು ಅವನ ಪ್ರಜ್ಞೆಗೆ ಇನ್ನೂ ಕಂಡುಬಂದಿರುವುದಿಲ್ಲವೋ ಅಲ್ಲಿಯವರೆಗೆ ಅವನು ಆತ್ಮನಲ್ಲಿ ಜನ್ಮ ತಾಳಿಲ್ಲ ಎಂದು ಅರ್ಥ ಮಾಡಿಕೊಳ್ಳಬೇಕು. ಮನುಷ್ಯ ಆತ್ಮನಲ್ಲಿ ಜನ್ಮ ತಾಳಿದಾಗ ಅದು ಅವನಿಗೆ ಇಡೀ ಭೌತಿಕ ಪ್ರಪಂಚಕ್ಕಿಂತ ಅತಿ ಹೆಚ್ಚು ಮೂರ್ತಸ್ವರೂಪದ್ದು, ಹೆಚ್ಚು ಜೀವಂತವಿರುವಂತಹದು, ಹೆಚ್ಚು ಸ್ಪರ್ಶವೇದ್ಯವಾಗುವಂತಹದು ಆಗುತ್ತದೆ. ಇದೇ ಸತ್ತೆಗಳ ನಡುವೆ ಸಾರಭೂತ ವ್ಯತ್ಯಾಸವನ್ನು ಮಾಡುವುದು. ಅದು (ಆತ್ಮ) ಸ್ವಯಂ ಪ್ರೇರಣೆಯಿಂದ ನೈಜವಾದದ್ದು ಆದಾಗ-ಸತ್ಯವಾದದ್ದು , ಮೂರ್ತಸ್ವರೂಪದಲ್ಲಿ ಅಸ್ತಿತ್ವವಿರುವಂತಹದು, ಮನುಷ್ಯ ಮುಕ್ತವಾಗಿ ಉಸಿರಾಡಿಸಲು ಸಾಧ್ಯವಾಗಿಸುವ ವಾತಾವರಣದಲ್ಲಿ ಇರುವಂತಹದು ಆದಾಗ ಅವನು ಇನ್ನೊಂದು ಬದಿಗೆ ದಾಟಿ ಹೋಗಿರುವೆನೆಂದು ತಿಳಿದುಕೊಳ್ಳುತ್ತಾನೆ. ಆದರೆ ಎಲ್ಲಿಯವರೆಗೆ ಅದಿನ್ನೂ ಮಬ್ಬುಗವಿದ ಹಾಗೂ ಅಸ್ಪಷ್ಟ ವಿಷಯವಾಗಿರುವುದೋ-ನೀವು ಅದರ ಬಗ್ಗೆ ಕೇಳಿರುತ್ತೀರಿ, ಅದು ಅಸ್ತಿತ್ವದಲ್ಲಿದೆ ಎಂದು ನಿಮಗೆ ತಿಳಿದಿರುತ್ತದೆ, ಆದರೆ ಅದರ ಬಗ್ಗೆ ಮೂರ್ತಸ್ವರೂಪದ ಅರಿವಿರುವುದಿಲ್ಲ-ಸರಿ, ಅಲ್ಲಿಯವರೆಗೆ ಅದರರ್ಥ ಹೊಸಜನ್ಮ ಇನ್ನೂ ಸಂಭವಿಸಿಲ್ಲ ಎಂದಾಗುತ್ತದೆ. ಎಲ್ಲಿಯವರೆಗೆ ನಿಮಗೆ ನೀವೇ ''ಹೌದು, ನಾನಿದನ್ನು ನೋಡಬಲ್ಲೆ, ಇದನ್ನು ಸ್ಪರ್ಶಿಸಬಲ್ಲೆ, ನೋವಿನಿಂದ ವೇದನೆಗೊಳಗಾಗುವೆ, ಹಸಿವೆ ನನ್ನನ್ನು ವಿಪರೀತ ಪೀಡಿಸುತ್ತದೆ, ಭಾರವೆನಿಸುವ ನಿದ್ದೆ ನನಗೆ ಬರುತ್ತದೆ, ಇದು ನಿಜವಾದದ್ದು , ಇದು ಮೂರ್ತಸ್ವರೂಪದ್ದು'' (ಶ್ರೀಮಾತೆಯವರು ನಗುತ್ತಾರೆ) ಎಂದು ಹೇಳುತ್ತಿರುವವರೆಗೆ ಅದರರ್ಥ ನೀವು ಇನ್ನೊಂದು ಬದಿಗೆ ದಾಟಿ ಹೋಗಿಲ್ಲ , ಆತ್ಮದಲ್ಲಿ ಜನ್ಮ ತಾಳಿಲ್ಲ ಎಂದಾಗುತ್ತದೆ.



## (ಮೌನ)

ಮನುಷ್ಯರಲ್ಲಿ ಹೆಚ್ಚಿನವರು, ವಾಸ್ತವದಲ್ಲಿ , ಕೈದಿಗಳ ಹಾಗಿರುತ್ತಾರೆ, ಅವರ ಸುತ್ತ ಎಲ್ಲ ಬಾಗಿಲುಗಳು, ಕಿಟಕಿಗಳು ಮುಚ್ಚಿಕೊಂಡಿರುತ್ತವೆ, ಹಾಗಾಗಿ ಅವರಿಗೆ ಉಸಿರುಗಟ್ಟಿದಂತಾಗುತ್ತದೆ, ಅದು ಬಹಳ ಸಹಜವಾದದ್ದು ಆದರೆ ಅವರ ಬಳಿ ಆ ಬಾಗಿಲುಗಳನ್ನು , ಕಿಟಕಿಗಳನ್ನು ತೆರೆಯಲು ಬೀಗದ ಕೈ ಇರುತ್ತದೆ ಮತ್ತು ಅವರು ಅದನ್ನು ಉಪಯೋಗಿಸುವುದಿಲ್ಲ. ಒಂದು ಸಮಯವಿರುತ್ತದೆ, ಆಗ ಅವರು ತಮ್ಮ ಬಳಿ ಕೀಲಿಕೈ ಇರುವುದನ್ನು ತಿಳಿದುಕೊಂಡಿರುತ್ತಾರೆ. ಅವರಿಗೆ ಅದರ ಬಗ್ಗೆ ಹೇಳಿ ದೀರ್ಘಕಾಲ ಕಳೆದ ನಂತರವೂ ಅವರು ಅದನ್ನು ಉಪಯೋಗಿಸಲು ಹಿಂದೆ ಮುಂದೆ ನೋಡುತ್ತಾರೆ, ಅದಕ್ಕೆ ಬಾಗಿಲುಗಳನ್ನು ತೆರೆಯುವ ಸಾಮರ್ಥ್ಯ ಇದೆಯೋ ಇಲ್ಲವೋ, ಇಲ್ಲವೆ ಅವುಗಳನ್ನು ತೆರೆಯುವುದರಿಂದ ಒಳ್ಳೆಯದಾಗುವುದೋ ಇಲ್ಲವೋ ಎಂಬ ಸಂಶಯ ಅವರನ್ನು ಕಾಡುತ್ತದೆ. ''ಆದರೂ ಅದು ಒಳ್ಳೆಯದಾಗಿರಬಹುದು'' ಎಂಬ ಭಾವನೆ ಬಂದ ನಂತರವೂ ಕೂಡ ''ಈ ಎಲ್ಲ ಬಾಗಿಲುಗಳನ್ನು ಹಾಗೂ ಕಿಟಕಿಗಳನ್ನು ತೆರೆದ ನಂತರ ಏನಾಗಬಹುದು?'' ಎಂಬ ಸ್ವಲ್ಪ ಭಯ ಉಳಿದುಕೊಂಡಿರುತ್ತದೆ. ಆ ಪ್ರಕಾಶದಲ್ಲಿ ಹಾಗೂ ಸ್ವಾತಂತ್ರ್ಯದಲ್ಲಿ ತಮ್ಮನ್ನು ಕಳೆದುಕೊಂಡುಬಿಡುವ ಭಯ ಅವರಿಗಿರುತ್ತದೆ. ''ಸ್ವತಃ ನಾವೇ'' ಎಂದು ತಮ್ಮನ್ನು ಕರೆದುಕೊಳ್ಳುವ ರೀತಿಯಲ್ಲಿ ಅವರು ಹಾಗೆಯೇ ಉಳಿದುಕೊಳ್ಳಲು ಬಯಸುತ್ತಾರೆ. ತಮ್ಮ ಮಿಥ್ಯಾಚಾರವನ್ನು , ಬಂಧನವನ್ನು ಅವರು ಇಷ್ಟಪಡುತ್ತಾರೆ. ಅವರಲ್ಲಿರುವ ಏನೋ ಒಂದು ಅದನ್ನು ಇಷ್ಟಪಡುತ್ತದೆ ಹಾಗೂ ಅದಕ್ಕೆ ಅಂಟಿಕೊಳ್ಳುತ್ತ ಹೋಗುತ್ತದೆ. ತಮ್ಮ ಮಿತಿಗಳಿಲ್ಲದೆ ಹೋದಾಗ ತಾವು ಅಸ್ತಿತ್ವದಲ್ಲಿರಲು ಸಾಧ್ಯವಾಗುವುದಿಲ್ಲ ಎಂಬ ಅನಿಸಿಕೆ ಅವರಿಗಿರುತ್ತದೆ.

ಆ ಕಾರಣದಿಂದಾಗಿಯೆ ಪ್ರಯಾಣ ಅಷ್ಟೊಂದು ದೀರ್ಘವಾಗಿದೆ ಹಾಗೂ ಕಠಿಣವಾಗಿದೆ. ಏಕೆಂದರೆ ಮನುಷ್ಯ ನಿಜವಾಗಿಯೂ ಅಸ್ತಿತ್ವದಲ್ಲಿರುವುದು ನಿಂತು ಹೋಗುವುದಕ್ಕೆ ಒಪ್ಪಿಗೆ ಕೊಟ್ಟರೆ ಎಲ್ಲವೂ ಎಷ್ಟೊಂದು ಸುಲಭವಾಗುವುದು, ತೀವ್ರಗತಿಯದಾಗುವುದು, ಪ್ರಕಾಶಮಾನವಾದದ್ದಾಗುವುದು, ಎಷ್ಟೊಂದು ಸಂತೋಷಕರವಾಗುವುದು-ಆದರೆ ಅದು ಬಹುಶಃ ಮನುಷ್ಯರು ತಿಳಿದುಕೊಂಡ ರೀತಿಯ ಸಂತೋಷ, ಸಮಾಧಾನಗಳಂತಲ್ಲ. ಸತ್ಯ ಹೇಳುವುದಾದರೆ ಹೋರಾಟದಲ್ಲಿ ಸಂತೋಷ ಕಂಡುಕೊಳ್ಳದೆ ಇರುವ ಜನರ ಸಂಖ್ಯೆ ತೀರ ಕಡಿಮೆ. ರಾತ್ರಿಯು ಇಲ್ಲದೆ ಇರುವುದನ್ನು

ಒಪ್ಪಿಕೊಳ್ಳುವ ಜನರ ಸಂಖ್ಯೆ ಕಡಿಮೆ, ಅಂಧಕಾರದ ವಿರುದ್ಧ ಸ್ಥಿತಿಯೆಂದು ಮಾತ್ರ ಬೆಳಕನ್ನು ತಿಳಿದುಕೊಳ್ಳುವುದರ ಹೊರತಾಗಿ ಬೇರೆ ರೀತಿಯಲ್ಲಿ ಅದನ್ನು ಕಲ್ಪಿಸಿಕೊಳ್ಳುವ ಜನರು ಕಡಿಮೆ. ''ನೆರಳುಗಳ ಸಹಾಯವಿಲ್ಲದೆ ವರ್ಣಚಿತ್ರವನ್ನು ರಚಿಸಲಾಗದು, ಹೋರಾಟವಿಲ್ಲದೆ ಜಯ ದೊರಕಲಾರದು, ವೇದನೆಯ ಅನುಭವವಿಲ್ಲದೆ ಸಂತೋಷವಿರಲಾರದು '' ಈ ರೀತಿ ಜನರು ಯೋಚಿಸುತ್ತಾರೆ, ಎಲ್ಲಿಯವರೆಗೆ ಮನುಷ್ಯ ಈ ರೀತಿ ಯೋಚಿಸುವನೋ ಅಲ್ಲಿಯವರೆಗೆ ಅವನು ಆತ್ಮದಲ್ಲಿ ಜನ್ಮ ತಳೆದಿರುವುದಿಲ್ಲ.

- ಶ್ರೀಮಾತೆ.

⋆

## ಹೊಸ ಜನ್ಮ ತಾಳುವ ಸಾಧ್ಯತೆ ಮನುಷ್ಯನ ಎದುರಿಗಿದೆ

**(20/82-83)** ನಿಶ್ಚಲನೀರವತೆಯಲ್ಲಿರುವ, ಇಲ್ಲವೆ ಉಚ್ಚ ಹಾಗೂ ಮೇಲಕ್ಕೆತ್ತಿ ಹಿಡಿದಿರುವ, ಆತ್ಮಾನಂದದ ಆಚೆಗಿರುವ ದೂರದ ಜೀವನ ಮಾತ್ರ ನಮ್ಮ ಯೋಗದ ಗುರಿಯಲ್ಲ , ಪೃಥ್ವಿಯ ಮೇಲಿನ ಜೀವನವೂ ನಮ್ಮ ಗುರಿಯ ಭಾಗವಾಗಿದೆ. ನಮ್ಮ ಮೇಲ್ಮೈಯಲ್ಲಿರುವ, ಸಂಕುಚಿತ ಮತ್ತು ವಿಚ್ಛಿದ್ರಗೊಂಡ, ಮಾನವ ರೀತಿಯಲ್ಲಿ ಯೋಚಿಸುವ, ಕಾಣುವ, ಭಾವಿಸುವ ಹಾಗೂ ಇರುವ ಎಲ್ಲವನ್ನು ಆಳವಾದ, ವಿಸ್ತಾರವಾದ ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಮತ್ತು ಏಕೀಕರಿಸಿದ ಆಂತರಿಕ ಹಾಗೂ ಬಾಹ್ಯ ಅಸ್ತಿತ್ವದಲ್ಲಿ ಪರಿವರ್ತಿಸುವುದು, ಹಾಗೆಯೇ ನಮ್ಮ ಸಾಮಾನ್ಯ ಮಾನವ ಜೀವನವನ್ನು ದೈವಿಕವಾದುದರಲ್ಲಿ ಪರಿವರ್ತಿಸುವುದು, ನಮ್ಮ ಯೋಗದ ಪ್ರಧಾನ ಉದ್ದೇಶವಾಗಿರಬೇಕು...

ಸಾಮಾನ್ಯ ರೀತಿಯಲ್ಲಿ ಜೀವಿಸುವ ಮಾನವ ಪ್ರಾಣಿಯ ಜೀವನವು ಬಹಳ ಅಪರಿಪೂರ್ಣವಾಗಿ ಅಂಕೆಯಲ್ಲಿಟ್ಟುಕೊಂಡ ಯೋಚನೆಗಳು, ಗ್ರಹಿಕೆಗಳು, ಸಂವೇದನೆಗಳು, ಭಾವನೆಗಳು, ಆಸೆಗಳು, ಸಂತೋಷಪಡುವಿಕೆಗಳು, ಕ್ರಿಯೆಗಳು-ಅವುಗಳಲ್ಲಿ ಬಹಳಷ್ಟು ರೂಢಿಯಿಂದ ಬಂದವುಗಳು ಮತ್ತು ತಮ್ಮಲ್ಲೆ ಪುನರಾವರ್ತನೆಗೆ ಒಳಗೊಳ್ಳುವಂತಹವುಗಳು, ಭಾಗಶಃ ಕ್ರಿಯಾಶೀಲವಾದವುಗಳು ಹಾಗೂ ಅಭಿವೃದ್ಧಿ ಹೊಂದುತ್ತಿರುವಂತಹವು ಇವೆಲ್ಲವುಗಳಿಂದ ಕೂಡಿದ ಅರ್ಧ ಸ್ಥಿರ ಹಾಗೂ ಅರ್ಧ ದ್ರವರೂಪದ ಮೊತ್ತವಾಗಿರುತ್ತದೆ, ಆದರೆ ಅದೆಲ್ಲವೂ ಅಹಂಕಾರದ



ಕೇಂದ್ರವನ್ನು ಸುತ್ತುವರಿದಿರುತ್ತದೆ. ಈ ಚಟುವಟಿಕೆಗಳ ಚಲನೆಯ ಮೊತ್ತ ಸಮಗ್ರ ಬೆಳವಣಿಗೆಯಾಗಿ ಪರಿಣಮಿಸುತ್ತದೆ, ಆ ಬೆಳವಣಿಗೆಯ ಒಂದು ಭಾಗ ಈ ಜೀವನದಲ್ಲಿ ಗೋಚರವಾಗುವಂತಹದು ಹಾಗೂ ಕಾರ್ಯಗತವಾಗುವಂತಹದು ಇರುತ್ತದೆ ; ಇನ್ನೊಂದು ಭಾಗ ಇನ್ನು ನಂತರ ಬರುವ ಜೀವನಗಳಲ್ಲಿ ಪ್ರಗತಿಯ ಬೀಜರೂಪದಲ್ಲಿರುತ್ತದೆ. ಪ್ರಜ್ಞಾಪೂರ್ಣ ಸತ್ತೆಯ ಈ ಬೆಳವಣಿಗೆ, ವಿಸ್ತರಣೆ, ಹೆಚ್ಚುತ್ತಿರುವ ಸ್ವ-ಅಭಿವ್ಯಕ್ತಿ, ಹೆಚ್ಚಿನ ಸಾಮರಸ್ಯದಿಂದ ಅಭಿವೃದ್ಧಿ ಪಡೆದ ಅವನ ಅಂಗಗಳು ಇದೆಲ್ಲವೂ ಮಾನವ ಅಸ್ತಿತ್ವದ ಅರ್ಥ ಹಾಗೂ ಸಾರವಾಗಿರುತ್ತದೆ. ಯೋಚನೆ, ಸಂಕಲ್ಪ, ಕ್ರಿಯೆ ಮತ್ತು ಅನುಭವ ಇವುಗಳ ಮೂಲಕ ಅರ್ಥಪೂರ್ಣ ಪ್ರಜ್ಞೆಯ ಅಭಿವೃದ್ಧಿಗಾಗಿ ಹಾಗೂ ಕೊನೆಯಲ್ಲಿ ಪರಮೋಚ್ಚ ದೈವೀ ಆತ್ಮ-ಶೋಧಕ್ಕಾಗಿ ಮನೋಜೀವಿಯಾದ ಮನುಷ್ಯ ಭೌತಿಕ ದೇಹವನ್ನು ಪ್ರವೇಶಿಸಿದ್ದಾನೆ. ಉಳಿದದ್ದೆಲ್ಲ ಸಹಾಯಕವಾಗುವಂತಹದು ಮತ್ತು ಗೌಣವಾದದ್ದು ಇಲ್ಲವೆ ಆಕಸ್ಮಿಕವಾದದ್ದು ಮತ್ತು ನಿರುಪಯುಕ್ತವಾದದ್ದು ಆಗಿರುತ್ತದೆ, ಯಾವುದು ಅವನ ಸ್ವಭಾವದ ಉತ್ಕ್ರಾಂತಿಗೆ ಮತ್ತು ಬೆಳವಣಿಗೆಗೆ ಇಲ್ಲವೆ ಅದಕ್ಕೂ ಹೆಚ್ಚಾಗಿ ಪ್ರಗತಿಪರವಾಗಿ ತೆರೆದುಕೊಳ್ಳುವಿಕೆಗೆ ಮತ್ತು ತನ್ನ ಆತ್ಮದ ಹಾಗೂ ದಿವ್ಯಾತ್ಮದ ಶೋಧಕ್ಕೆ ಪೋಷಕವಾಗುವುದೋ ಹಾಗೂ ಸಹಾಯಕವಾಗುವುದೋ ಅದು ಬಹಳ ಮಹತ್ವದ್ದಾಗಿರುತ್ತದೆ.

ನಮ್ಮ ಯೋಗ ಇರಿಸಿಕೊಂಡ ಗುರಿಯು ಇಲ್ಲಿ ನಮ್ಮ ಅಸ್ತಿತ್ವದ ಪರಮೋಚ್ಚ ಉದ್ದೇಶದ ಈಡೇರಿಕೆಯನ್ನು ತ್ವರಿತಗೊಳಿಸುವುದಕ್ಕಿಂತ ಕಡಿಮೆಯಾದುದೇನಲ್ಲ. ಅದರ ವಿಧಾನವು ಸಾಮಾನ್ಯ ಪ್ರಕೃತಿಯ ಉತ್ಕ್ರಾಂತಿಯ ಮೂಲಕ ಆಗುವ ಮಂದಗತಿಯ ಮತ್ತು ನಿಧಾನವಾದ ಹಾಗೂ ಗೊಂದಲಕ್ಕೀಡಾದ ಪದ್ಧತಿಯನ್ನು ಹಿಂದೆ ಉಳಿಸುತ್ತದೆ. ಏಕೆಂದರೆ ಸ್ವಾಭಾವಿಕವಾದ ಉತ್ಕ್ರಾಂತಿಯು, ಅದರ ಅತ್ಯುಚ್ಚ ಮಟ್ಟದಲ್ಲಿ, ಮುಸುಕಿನ ಹಿಂದೆ ಆಗುವ ಅನಿಶ್ಚಿತ ಬೆಳವಣಿಗೆ, ಅದು ಭಾಗಶಃ ಪರಿಸರದ ಒತ್ತಡದಿಂದ ಹಾಗೂ ಭಾಗಶಃ ತಡಕಾಡುವ ಶಿಕ್ಷಣ ಹಾಗೂ ಸರಿಯಾದ ಪ್ರಕಾಶವಿಲ್ಲದ ಉದ್ದೇಶಪೂರ್ವಕ ಪ್ರಯತ್ನದಿಂದ, ಭಾಗಶಃ ಅರ್ಧ ಜ್ಞಾನೋದಯ ಪಡೆದುಕೊಂಡು ಹಾಗೂ ಅರ್ಧ-ಸ್ವಯಂ ಪ್ರೇರಣೆಗೆ ಒಳಗಾಗಿ, ಹಲವಾರು ಪ್ರಮಾದಗಳು, ಅಚಾತುರ್ಯಗಳು ಹಾಗೂ ಅವುಗಳ ಮರುಕಳಿಕೆ ಇವುಗಳಿಗೆ ಒಳಗಾಗಿ ಉಪಯೋಗಿಸಿಕೊಂಡ ಅವಕಾಶಗಳಿಂದ ಕೂಡಿರುತ್ತದೆ ; ಅದರ ಹೆಚ್ಚಿನ ಭಾಗ ತೋರಿಕೆಯ ಆಕಸ್ಮಿಕಗಳಿಂದ, ಪರಿಸ್ಥಿತಿಗಳಿಂದ ಮತ್ತು ಬದಲಾವಣೆಗಳಿಂದ

ಕೂಡಿರುತ್ತದೆ-ಆದಾಗ್ಯೂ ಅದು ರಹಸ್ಯ ದೈವೀ ಮಧ್ಯಸ್ಥಿಕೆಯನ್ನು ಮತ್ತು ಮಾರ್ಗದರ್ಶನವನ್ನು ಪರದೆಯ ಹಿಂದಿರಿಸುತ್ತದೆ. ಯೋಗದಲ್ಲಿ ಈ ಗೊಂದಲಕ್ಕೀಡಾದ, ವಕ್ರವಾದ, ಆಮೆಗತಿಯ ಚಲನೆಯ ಸ್ಥಾನದಲ್ಲಿ ತೀವ್ರಗತಿಯ, ಪ್ರಜ್ಞಾಪೂರ್ಣ ಮತ್ತು ಸ್ವ-ನಿರ್ದೇಶಿತವಾದ ಉತ್ಕ್ರಾಂತಿಯನ್ನು ತರುತ್ತೇವೆ, ನಾವು ಮುಂದಿರಿಸಿಕೊಂಡ ಗುರಿಯತ್ತ, ಸರಳ ಮಾರ್ಗದಲ್ಲಿ ಸಾಧ್ಯವಿದ್ದಷ್ಟು ದೂರ ಕೊಂಡೊಯ್ಯುವಂತೆ ಆ ಉತ್ಕ್ರಾಂತಿಯನ್ನು ಯೋಜಿಸಲಾಗಿದೆ. ನಾವು ಮುಂದಿರಿಸಿಕೊಂಡ ಗುರಿಯು, ಸರಳ ದಾರಿಯಲ್ಲಿರುವ ಪ್ರಗತಿಪರ ಮಾರ್ಗದಲ್ಲಿ ಎಲ್ಲಾದರೂ ಇರುವುದೆಂದು ಹೇಳುವುದು ತಪ್ಪಾದೀತು, ಅಂತಹ ಗುರಿಗಳು ಅನೇಕವಾಗಿವೆ. ಆದಾಗ್ಯೂ ಸದ್ಯ ನಾವು ಸಾಧಿಸಿರುವುದರಾಚೆ ಕೊನೆಯದೆಂದು, ಮನುಷ್ಯನ ಆತ್ಮ ಅದಕ್ಕಾಗಿ ಅಭೀಪ್ಸೆಪಡಬಹುದೆಂದು ಹತ್ತಿರದ ಗುರಿಯೊಂದರ ಬಗ್ಗೆ ಕಲ್ಪನೆ ಮಾಡಿಕೊಳ್ಳಬಹುದು. ಅವನ ಎದುರಿಗೆ ಹೊಸ ಜನ್ಮದ ಸಾಧ್ಯತೆಯಿರುತ್ತದೆ ಮತ್ತು ಆ ಸ್ತರದ ಅವರೋಹಣವು ಅವನ ಅಂಗಗಳನ್ನು ಪರಿವರ್ತನೆಗೆ ಒಳಪಡಿಸಬಹುದು. ಮನುಷ್ಯನನ್ನು ಮುಕ್ತಗೊಂಡ ಆತ್ಮ ಹಾಗೂ ಪರಿಪೂರ್ಣ ಶಕ್ತಿ ಎಂದಾಗಿ ಮಾಡಬಲ್ಲ ಭವ್ಯ ಮತ್ತು ಜ್ಞಾನೋದಯ ಪಡೆದ ಪ್ರಜ್ಞೆಯಿರುವ ಸಾಧ್ಯತೆಯಿದೆ-ವ್ಯಕ್ತಿಯಾಚೆ ಪಸರಿಸಿದರೆ ಅದು ದೈವೀ ಮಾನವತೆಯನ್ನು ರೂಪಿಸಬಹುದು, ಇಲ್ಲವೆ ಹೊಸ ಅತಿಮಾನಸದ ಅತಿಮಾನಸ ಕುಲವೊಂದನ್ನು ಸ್ಥಾಪಿಸಬಹುದು. ಈ ಹೊಸ ಜನ್ಮವನ್ನೇ ನಮ್ಮ ಗುರಿಯನ್ನಾಗಿ ಮಾಡಿಕೊಳ್ಳುತ್ತೇವೆ : ದೈವೀ ಪ್ರಜ್ಞೆಯಲ್ಲಾಗುವ ಬೆಳವಣಿಗೆಯು ನಮ್ಮ ಯೋಗದ ಪೂರ್ಣ ಅರ್ಥವಾಗಿದೆ, ಅದು ದೈವಿಕತೆಯಲ್ಲಿ ಆತ್ಮದ ಸಮಗ್ರ ಬದಲಾವಣೆಯನ್ನಷ್ಟೇ ಅಲ್ಲ, ಆದರೆ ನಮ್ಮ ಸ್ವಭಾವದ ಎಲ್ಲ ಭಾಗಗಳ ಬದಲಾವಣೆಯನ್ನು ಮಾಡುವುದೂ ಆಗಿದೆ.

- ಶ್ರೀ ಅರವಿಂದರು.

## ಅರ್ಧ ಪ್ರಜ್ಞೆಯ ಸ್ಥಿತಿಯಿಂದ ಪುಟಿದೇಳಿರಿ

**(9/15-19)** ಸರಿ, ಮನುಷ್ಯ ನಿಜವಾಗಿ ಏನಾಗಿದ್ದಾನೆ, ಪೃಥ್ವಿಯ ಮೇಲೆ ಏಕಿದ್ದಾನೆ, ಭೌತಿಕ ಅಸ್ತಿತ್ವದ ಪೃಥ್ವಿಯ ಮೇಲಿನ ಈ ಸಾನ್ನಿಧ್ಯದ, ಅದರ ರೂಪಗೊಳ್ಳುವಿಕೆಯ ಉದ್ದೇಶವೇನು? ಬಹಳಷ್ಟು ಜನರು ಈ ಪ್ರಶ್ನೆಯನ್ನು ಒಮ್ಮೆಯಾದರೂ ತಮಗೆ ಕೇಳಿಕೊಳ್ಳದೆ ಜೀವಿಸುತ್ತಾರೆ ! ಗಣ್ಯರ ಗುಂಪಿನ ಒಂದು ಚಿಕ್ಕ ಭಾಗ ಮಾತ್ರ ಈ ಪ್ರಶ್ನೆಯನ್ನು ಕುತೂಹಲದಿಂದ ತಮಗೆ ಕೇಳಿಕೊಳ್ಳುತ್ತದೆ, ಅದರಲ್ಲಿ ಇನ್ನೂ ಕಡಿಮೆ ಭಾಗ ಉತ್ತರವನ್ನು ಹುಡುಕಲು ಪ್ರಾರಂಭಿಸುತ್ತದೆ. ಏಕೆಂದರೆ ಈ ವಿಷಯದ ಬಗ್ಗೆ ತಿಳಿದುಕೊಂಡ



ಯಾರೊಬ್ಬರನ್ನು ಭೇಟಿ ಮಾಡದೆ ಹೋದ ಸಂದರ್ಭದಲ್ಲಿ ಅದನ್ನು ಕಂಡುಕೊಳ್ಳುವುದು ಅಷ್ಟು ಸುಲಭವಲ್ಲ. ಉದಾಹರಣೆಗೆ ಶ್ರೀ ಅರವಿಂದರ ಅಥವಾ ತಮ್ಮ ಜೀವನವನ್ನು ಇದರ ಶೋಧಕ್ಕಾಗಿ ಮುಡಿಪಾಗಿರಿಸಿಕೊಂಡ ಇತರ ಲೇಖಕರ ಇಲ್ಲವೆ ತತ್ವಜ್ಞಾನಿಗಳ ಇಲ್ಲವೆ ಋಷಿಗಳ ಒಂದು ಪುಸ್ತಕ ನಿಮ್ಮ ಕೈಗೆ ಸಿಕ್ಕಿಲ್ಲವೆಂದು ಭಾವಿಸಿರಿ, ಕೋಟ್ಯಾನುಗಟ್ಟಲೆ ಜನರಿರುವಂತೆ ನೀವು ಸಾಮಾನ್ಯ ಜಗತ್ತಿನಲ್ಲಿದ್ದರೆ, ಕೆಲವೊಂದು ಅಪರೂಪದ ಸಮಯಗಳಲ್ಲಿ ಕೆಲವು ದೇವರುಗಳ ಬಗ್ಗೆ , ನಂಬಿಕೆಯಿರುವುದಕ್ಕಿಂತ ರೂಢಿಯಲ್ಲಿ ಬಂದಿರುವ ಧರ್ಮಗಳ ಬಗ್ಗೆ ನೀವು ಕೇಳಿದ್ದರೆ, ಅವು ಅಪರೂಪಕ್ಕೆ ನೀವು ಪೃಥ್ವಿಯ ಮೇಲೆ ಏಕಿದ್ದೀರಿ ಎಂಬುದನ್ನು ನಿಮಗೆ ತಿಳಿಸಿಕೊಡಬಹುದು-ಇಂತಹವು ಈ ದಿನಗಳಲ್ಲಿ ಯಾವಾಗಲೂ ಕೇಳಿಬರುವುದಿಲ್ಲ , ಅಪರೂಪಕ್ಕೂ ನೀವು ಅವನ್ನು ಕೇಳಿರುವುದಿಲ್ಲ ... ಆಗ ಇಂತಹದನ್ನು ಕುರಿತು ಮನುಷ್ಯರಿಗೆ ಯೋಚನೆಯೂ ಬರುವುದಿಲ್ಲ. ಮನುಷ್ಯ ದಿನದಿಂದ ದಿನಕ್ಕೆ ಸಂಭವಿಸುವ ಘಟನೆಗಳಲ್ಲಿ ಜೀವಿಸುತ್ತಾನೆ. ಮನುಷ್ಯ ಬಾಲಕನಾಗಿದ್ದಾಗ ಆಟವಾಡುವುದನ್ನು , ತಿನ್ನುವುದನ್ನು ಕುರಿತು ಯೋಚಿಸುತ್ತಾನೆ, ನಂತರ ಕಲಿಯುವುದರತ್ತ ಲಕ್ಷ್ಯಗೊಡುತ್ತಾನೆ, ಆ ಮೇಲೆ ಜೀವನದ ಎಲ್ಲ ಪರಿಸ್ಥಿತಿಗಳನ್ನು ಕುರಿತು ಯೋಚಿಸುತ್ತಾನೆ. ಆದರೆ ಈ ಪ್ರಶ್ನೆಯನ್ನು ಮನುಷ್ಯ ತನಗೇ ಕೇಳಿಕೊಳ್ಳುವುದು ಮತ್ತು ''ಆದರೆ ಒಟ್ಟಿನಲ್ಲಿ ನಾನು ಇಲ್ಲಿ ಏಕಿದ್ದೇನೆ '' ಎಂದು ಕೇಳಿಕೊಂಡು ಅದನ್ನು ಎದುರಿಸುವುದು-ಎಷ್ಟು ಜನರು ಅದನ್ನು ಮಾಡುತ್ತಾರೆ?

ಅದೂ ಕೂಡ ವಿಶೇಷ ಸಂದರ್ಭಗಳಲ್ಲಿ ಮಾತ್ರ ಬರುತ್ತದೆ ಮತ್ತು ದುರ್ದೈವವಶಾತ್, ಬಹಳಷ್ಟು ಸಲ, ಈ ಪರಿಸ್ಥಿತಿಗಳು ವೇದನೆಯಿಂದ ಕೂಡಿರುತ್ತವೆ, ಹಾಗಿಲ್ಲದಿದ್ದರೆ ಮನುಷ್ಯ ಯೋಚಿಸದೆ ಜೀವಿಸುತ್ತ ಹೋಗುತ್ತಾನೆ. ಮನುಷ್ಯನ ಆಳಗಳಲ್ಲಿ ಚೈತ್ಯಸತ್ತೆಯದೆ, ಅದು ಪ್ರಜ್ಞೆಯನ್ನು ಎಚ್ಚರಿಸಲು ಮತ್ತು ಏಕತೆಯನ್ನು ಪುನಃ ಸ್ಥಾಪಿಸಲು ಸದಾ ಅರಸುತ್ತಿರುತ್ತದೆ. ಮನುಷ್ಯನಿಗೆ ಅದರ ಬಗ್ಗೆ ಏನೂ ತಿಳಿದಿರುವುದಿಲ್ಲ.

ಏನೋ ಒಂದರ, ಒಂದು ಶಕ್ತಿಯ, ಚಲನೆಯ, ಪ್ರಚೋದನೆಯ, ಆಕರ್ಷಣೆಯ, ಜೀವನವನ್ನು ಮುಂದುವರಿಸಿಕೊಂಡು ಹೋಗುವ ಏನೋ ಒಂದರ ಬಗೆಗೆ ಅಸ್ಪಷ್ಟ ಹಾಗೂ ಹಿಂದು ಮುಂದು ನೋಡುವ ಭಾವನೆ ಇರುವುದು-ಅದಿನ್ನೂ ಬಹಳ ಅಸ್ಪಷ್ಟ , ಅನಿಶ್ಚಿತ ಹಾಗೂ ಮಸುಕಾದದ್ದು-ಮತ್ತು ಸ್ಪಷ್ಟ ದರ್ಶನ, ನಿಖರವಾದ ಗ್ರಹಿಕೆ, ಮಾನವ ಜೀವನದ ಅರ್ಥ ಕುರಿತು ಸಂಪೂರ್ಣ ತಿಳಿವಳಿಕೆ ಹೊಂದಿರುವುದು ಇವೆರಡರ ನಡುವೆ ದೊಡ್ಡ

ವ್ಯತ್ಯಾಸವಿದೆ. ಸ್ಪಷ್ಟ ಗ್ರಹಿಕೆ ಪಡೆದ ನಂತರ ಮಾತ್ರ ಮನುಷ್ಯ ತನ್ನ ಅದೃಷ್ಟದ ಎಳೆಯನ್ನು ಅನುಸರಿಸುತ್ತಾನೆ ಮತ್ತು ಗುರಿಯನ್ನು ಹಾಗೂ ಅದನ್ನು ತಲುಪುವ ಮಾರ್ಗವನ್ನು ಸ್ಪಷ್ಟವಾಗಿ ನೋಡುತ್ತಾನೆ. ಆದರೆ ಅದು ಸಂಭವಿಸುವುದು ಕ್ರಮಶಃ ಬರುವ ಆಂತರಿಕ ಎಚ್ಚೆತ್ತುಕೊಳ್ಳುವಿಕೆಗಳ ಮೂಲಕ, ಅವು ಹೊಸ ಕ್ಷಿತಿಜಗಳ ಮೇಲೆ ತೆರೆದುಕೊಳ್ಳುವ ದ್ವಾರಗಳಿದ್ದಂತೆ ಇರುತ್ತವೆ-ಈ ಎಚ್ಚೆತ್ತುಕೊಳ್ಳುವಿಕೆಗಳ ಮೂಲಕ ಹೆಚ್ಚು ನಿಜವಾದ, ಆಳಾತಿಆಳದ, ಹೆಚ್ಚು ಕಾಲ ಉಳಿದುಕೊಳ್ಳುವ ಪ್ರಜ್ಞೆಯಲ್ಲಿ ಹೊಸಜನ್ಮ ಕಾಣಿಸಿಕೊಳ್ಳುತ್ತದೆ.

ಅಲ್ಲಿಯವರೆಗೆ ನೀವು ಅಸ್ಪಷ್ಟತೆಯಲ್ಲಿ ತಡಕಾಡುತ್ತ, ಅದೃಷ್ಟದ ಭಾರದಲ್ಲಿ ಜೀವಿಸುತ್ತೀರಿ. ಈ ಅದೃಷ್ಟವು ಕೆಲವೊಮ್ಮೆ ನಿಮ್ಮನ್ನು ತುಳಿದು ಹಾಕುತ್ತದೆ, ನಿಮ್ಮನ್ನು ಒಂದು ಬಗೆಯ ಸತ್ತೆಯನ್ನಾಗಿ ಮಾಡಲಾಗಿದೆ, ನೀವು ಅದರ ಬಗ್ಗೆ ಏನೂ ಮಾಡಲಾರಿರಿ ಎಂಬ ಭಾವನೆ ತಂದುಕೊಡುತ್ತದೆ. ನೀವು ಅಸ್ತಿತ್ವದ ಭಾರದಡಿಯಲ್ಲಿ ಇರುತ್ತೀರಿ, ಅದು ನಿಮ್ಮ ಮೇಲೆ ಹೊರೆಯಾಗಿದೆ, ಮೇಲಕ್ಕೆದ್ದು , ಎಲ್ಲ ಎಳೆಗಳನ್ನು ನೋಡಿ ಅವುಗಳಿಗೆ ಮಾರ್ಗದರ್ಶನ ಮಾಡುವುದರ ಬದಲಾಗಿ ನೆಲದ ಮೇಲೆ ಅಂಬೆಗಾಲಿಡುವಂತೆ ಮಾಡುತ್ತದೆ. ಈ ಎಳೆಗಳು ವಿಭಿನ್ನ ವಿಷಯಗಳನ್ನು ಒಂದು ಸ್ಪಷ್ಟವಾಗಿ ಬೆಳೆಯುವ ಸಿದ್ಧಿಯ ಪ್ರಗತಿಪರ ಚಲನೆಯಲ್ಲಿ ಕಟ್ಟಿ ಹಾಕುವಂತಿರುತ್ತವೆ.

ಸಾಮಾನ್ಯವಾಗಿ ಬಹಳ ಸ್ವಾಭಾವಿಕವೆಂದು ಈ ಅರ್ಧಪ್ರಜ್ಞೆಯ ಸ್ಥಿತಿಯಿಂದ ಮನುಷ್ಯ ಹೊರಗೆ ಜಿಗಿಯಬೇಕು-ಇದು ನೀವು ಇರುವ 'ಸಾಮಾನ್ಯ' ರೀತಿ, ಮತ್ತು ನೀವು ಈ ಅನಿಶ್ಚಿತತೆಯನ್ನು , ನಿಖರತೆಯ ಕೊರತೆಯನ್ನು ನೋಡಲು ಸಾಧ್ಯವಾಗುವುದಕ್ಕೆ ಅದರಿಂದ ಸಾಕಷ್ಟು ಹಿಂದೆ ಸರಿದು ನಿಂತುಕೊಳ್ಳುವುದಿಲ್ಲ, ಅದನ್ನು ನೋಡಿ ಆಶ್ಚರ್ಯಪಡುವುದಿಲ್ಲ. ಅದು ಹೀಗಿರುವಾಗ ಅದಕ್ಕೆ ತದ್ವಿರುದ್ಧವಾಗಿ ಮನುಷ್ಯ ಅರಸುತ್ತಿರುವುದನ್ನು ತಿಳಿದುಕೊಳ್ಳುವುದು ; ಪ್ರಜ್ಞಾಪೂರ್ವಕವಾಗಿ, ಉದ್ದೇಶಪೂರ್ವಕವಾಗಿ, ಏಕಪ್ರಕಾಶವಾಗಿ ಮತ್ತು ವಿಧಿಪೂರ್ವಕವಾಗಿ ಅರಸುವುದು ಅಪರೂಪವಾದದ್ದು , ಬಹುಮಟ್ಟಿಗೆ ಅಸಾಮಾನ್ಯ ಸ್ಥಿತಿ, ಆದಾಗ್ಯೂ ಈ ರೀತಿಯಲ್ಲಿ ಮನುಷ್ಯ ನಿಜವಾಗಿ ಬದುಕಲು ಪ್ರಾರಂಭಿಸುತ್ತಾನೆ.

- ಶ್ರೀಮಾತೆ.

★



## ಚೈತ್ಯಾತ್ಮಿಕ ಹೊಸ ಜನ್ಮ

**(24/1095-96)** ಆತ್ಮ ಅಂದರೆ ಚೈತ್ಯಾತ್ಮಿಕ ಸತ್ತೆ ದೈವೀ ಸತ್ಯದೊಡನೆ ನೇರ ಸಂಪರ್ಕ ಹೊಂದಿರುತ್ತದೆ, ಆದರೆ ಮನುಷ್ಯನಲ್ಲಿ ಅದನ್ನು ಮನಸ್ಸು , ಪ್ರಾಣಿಕ ಸತ್ತೆ ಹಾಗೂ ಭೌತಿಕ ಸತ್ತೆಗಳು ಗುಪ್ತವಾಗಿರಿಸಿರುತ್ತವೆ. ಯೋಗಾಚರಣೆಯ ಮೂಲಕ ಅವನು ಮನಸ್ಸಿನಲ್ಲಿ , ತರ್ಕದಲ್ಲಿ ಜ್ಞಾನೋದಯ ಪಡೆಯಬಹುದು, ಸಾಮರ್ಥ್ಯವನ್ನು ಗೆದ್ದುಕೊಳ್ಳಬಹುದು ಮತ್ತು ಪ್ರಾಣಿಕದ ಎಲ್ಲ ಬಗೆಯ ಸುಖಾನುಭವಗಳಲ್ಲಿ ಲೋಲಾಡಬಹುದು, ಆಶ್ಚರ್ಯಕರವಾದ ಭೌತಿಕ ಸಿದ್ಧಿಗಳನ್ನು ತನ್ನಲ್ಲಿ ಸ್ಥಾಪಿಸಿಕೊಳ್ಳಬಹುದು, ಆದರೆ ನಿಜವಾದ ಆತ್ಮ-ಸಾಮರ್ಥ್ಯ ಪ್ರಕಟವಾಗದಿದ್ದರೆ, ಚೈತ್ಯಾತ್ಮಿಕ ಸ್ವಭಾವ ಮುಂಭಾಗಕ್ಕೆ ಬರದಿದ್ದರೆ ಯಥಾರ್ಥವಾದ ಏನನ್ನೂ ಸಾಧಿಸಲಾಗಿರುವುದಿಲ್ಲ. ಈ ಯೋಗದಲ್ಲಿ ಚೈತ್ಯಸತ್ತೆಯು ಉಳಿದೆಲ್ಲ ಸ್ವಭಾವವನ್ನು ನಿಜವಾದ ಅತಿಮಾನಸದ ಪ್ರಕಾಶಕ್ಕೆ ಮತ್ತು ಕೊನೆಗೆ ಅತಿಮಾನಸದ ಆನಂದಕ್ಕೆ ತೆರೆದಿರಿಸುತ್ತದೆ. ಮನಸ್ಸು ತಾನೇ ಸ್ವತಃ ಉಚ್ಚತರ ಎತ್ತರಗಳಿಗೆ ತೆರೆದಿರಿಸಿಕೊಳ್ಳಬಹುದು, ಅವೈಯಕ್ತಿಕವಾದುದರಲ್ಲಿ ತನ್ನನ್ನು ನಿಶ್ಚಲಗೊಳಿಸಿಕೊಳ್ಳಬಹುದು ಹಾಗೂ ವಿಸ್ತರಿಸಿಕೊಳ್ಳಬಹುದು, ನಿರ್ವಾಣದಲ್ಲಿ ಅಥವಾ ಸ್ಥಿರವಾದ ವಿಮೋಚನೆಯಲ್ಲಿ ತನ್ನನ್ನು ಆಧ್ಯಾತ್ಮೀಕರಣಕ್ಕೆ ಒಳಪಡಿಸಿಕೊಳ್ಳಬಹುದು, ಆದರೆ ಅತಿಮಾನಸವು ಕೇವಲ ಆಧ್ಯಾತ್ಮೀಕರಣಗೊಂಡ ಮನಸ್ಸಿನಲ್ಲಿ ಆಧಾರ ಪಡೆಯಲಾರದು. ಆದರೆ ಆಳಾತಿಆಳದ ಆತ್ಮವು ಎಚ್ಚೆತ್ತುಕೊಳ್ಳುವಂತೆ ಮಾಡಿದರೆ, ಚೈತ್ಯ ಪ್ರಜ್ಞೆಯಲ್ಲಿ ಕೇವಲ ಮಾನಸಿಕ, ಪ್ರಾಣಿಕ ಹಾಗೂ ಭೌತಿಕವಾದದ್ದು ಹೊಸಜನ್ಮ ತಾಳಿದರೆ, ಆಗ ಈ ಯೋಗವನ್ನು ಕೈಕೊಳ್ಳಬಹುದು. ಹಾಗಿಲ್ಲದಿದ್ದರೆ (ಕೇವಲ ಮನಸ್ಸಿನ ಅಥವಾ ಇನ್ನಾವುದೇ ಭಾಗದ ಶಕ್ತಿಯಿಂದ) ಅದು ಅಸಾಧ್ಯವಾಗುತ್ತದೆ. ಬೌದ್ಧಿಕ ಜ್ಞಾನದಲ್ಲಿ , ಇಲ್ಲವೆ ಮಾನಸಿಕ ವಿಚಾರಗಳಲ್ಲಿ ಇಲ್ಲವೆ ಯಾವುದೋ ಪ್ರಾಣಿಕ ಆಸೆಯಲ್ಲಿ ಆಸಕ್ತಿಯನ್ನಿಟ್ಟುಕೊಂಡ ಕಾರಣದಿಂದಾಗಿ ಚೈತ್ಯಾತ್ಮಿಕ ಹೊಸಜನ್ಮ ತಾಳುವುದನ್ನು ತಿರಸ್ಕರಿಸಿದರೆ, ಶ್ರೀಮಾತೆಯವರಿಂದ ಹೊಸ ಮಗುವಾಗುವುದನ್ನು ತಿರಸ್ಕರಿಸಿದರೆ ಸಾಧನೆಯಲ್ಲಿ ವಿಫಲತೆ ಕಂಡುಬರುವುದು.

- ಶ್ರೀ ಅರವಿಂದರು.

★

# ನಿರ್ಧಾರಕ ಹೆಜ್ಜೆಯನ್ನಿರಿಸಿರಿ

**(9/336-38)** ಸಂಶಯ ಹಾಗೂ ಹಿಂದುಮುಂದು ನೋಡುವಿಕೆಗಳು ಉಳಿದಿರುವವರೆಗೆ, ಸನಾತನ ಆತ್ಮವನ್ನು ತನ್ನಲ್ಲಿ ಸಿದ್ಧಿಸಿಕೊಂಡಿದ್ದೇನೆಯೋ ಇಲ್ಲವೋ ಎಂದು ಮನುಷ್ಯ ತನ್ನನ್ನು ಕೇಳಿಕೊಳ್ಳದಿರುವವರೆಗೆ ಆತ್ಮದ ನಿಜವಾದ ಸಂಪರ್ಕ ಇನ್ನೂ ಆಗಿಲ್ಲ ಎಂಬುದು ಖಚಿತವಾಗಿರುತ್ತದೆ. ಏಕೆಂದರೆ ಅದು ಸಾಕ್ಷಾತ್ತಾಗಿ ಗ್ರಹಿಕೆಗೆ ಬರುವ ವಿಷಯವಾದಾಗ ಎಷ್ಟೊಂದು ಹೊಸತಾದದ್ದು , ನಿಶ್ಚಿತವಾದದ್ದು ಇರುತ್ತದೆಂದರೆ, ಸಂಶಯವಾಗಲಿ, ಪ್ರಶ್ನಿಸುವುದಾಗಲಿ ಆ ನಂತರ ಸಾಧ್ಯವಾಗುವುದಿಲ್ಲ ,ಅದು ಆ ಪದಗುಚ್ಛದ ಸರಿಯಾದ ಅರ್ಥದಲ್ಲಿ ಹೊಸಜನ್ಮವಾಗಿರುತ್ತದೆ.

ನೀವು ಹೊಸ ವ್ಯಕ್ತಿಯಾಗುತ್ತೀರಿ, ಮಾರ್ಗ ಯಾವುದೇ ಇರಲಿ, ಆ ಮಾರ್ಗದಲ್ಲಿ ತೊಂದರೆಗಳೇನೇ ಇರಲಿ, ಆ ಭಾವನೆ ನಿಮ್ಮನ್ನು ಎಂದಿಗೂ ತೊರೆದು ಹೋಗುವುದಿಲ್ಲ , ಬಾಹ್ಯದಲ್ಲಿ ಒಂದು ಬಗೆಯ ಅಸ್ಪಷ್ಟ ನೆನಪನ್ನು ಉಳಿಸಿ, ಅದಕ್ಕೆ ಅಂಟಿಕೊಳ್ಳುವುದು ಕಷ್ಟಕರವಾಗುವಂತೆ ಮಾಡಿ, ನೆನಪನ್ನು ಮಸುಕಾಗುವಂತೆ ಮಾಡುವ ಇನ್ನುಳಿದ ಅನುಭವಗಳ ಹಾಗೆ ಈ ಅನುಭವ ಹಿಂದೆಗೆಯುವುದಿಲ್ಲ , ಹಿಂಭಾಗಕ್ಕೆ ಸರಿದು ಹೋಗುವುದಿಲ್ಲ, ಅದು ಅಂತಹದಲ್ಲ. ನೀವು ನಿಶ್ಚಿತವಾಗಿ ಹೊಸ ಮನುಷ್ಯರಾಗಿರುತ್ತೀರಿ. ಮನಸ್ಸಿನಲ್ಲಿ ಯಾವುದೇ ಬಗೆಯ ಅಸಾಮರ್ಥ್ಯವಿರಲಿ, ಪ್ರಾಣಿಕದಲ್ಲಿ ಎಲ್ಲ ತೊಂದರೆಗಳು ಕಾಣಿಸಿಕೊಂಡಿರಲಿ, ಭೌತಿಕದ ಜಡತ್ವವಿರಲಿ, ಅವು ಈ ಹೊಸ ಸ್ಥಿತಿಯನ್ನು ಬದಲಾಯಿಸಲಾರವು-ಹೊಸ ಸ್ಥಿತಿಯು ಪ್ರಜ್ಞೆಯ ಜೀವನದಲ್ಲಿ ನಿರ್ಣಾಯಕ ಅಂತರವನ್ನು ಉಂಟುಮಾಡುವುದು. ಮೊದಲಿದ್ದ ಸತ್ತೆ ಮತ್ತು ನಂತರದ ಸತ್ತೆ ಇವು ಆ ಮೇಲೆ ಒಂದೇ ಆಗಿರುವುದಿಲ್ಲ. ವಿಶ್ವದಲ್ಲಿ ಹಾಗೂ ವಿಶ್ವಕ್ಕೆ ಸಂಬಂಧಿಸಿರುವುದರಲ್ಲಿ ಮನುಷ್ಯನ ಸ್ಥಾನ, ಜೀವನದಲ್ಲಿ ಹಾಗೂ ಜೀವನಕ್ಕೆ ಸಂಬಂಧಿಸಿರುವುದರಲ್ಲಿ ಅವನ ಸ್ಥಾನ, ತಿಳಿವಳಿಕೆ ಹಾಗೂ ತಿಳಿವಳಿಕೆಗೆ ಸಂಬಂಧಿಸಿದಿರುವುದರಲ್ಲಿ ಅವನ ಸ್ಥಾನ ಇವು ಇನ್ನು ಮುಂದೆ ಒಂದೇ ಆಗಿರುವುದಿಲ್ಲ , ಅದು ನಿಜವಾದ ಹಿಮ್ಮೊಗವಾಗುವಿಕೆ ಆಗಿದ್ದು ಅದನ್ನು ಮತ್ತೆ ಮೊದಲಿನಂತೆ ಮಾಡಲಾಗುವುದಿಲ್ಲ. ಆ ಕಾರಣದಿಂದಾಗಿ ಜನರು ನನಗೆ ''ನನ್ನ ಆತ್ಮದೊಂದಿಗೆ ನಾನು ಸಂಪರ್ಕ ಪಡೆದಿದ್ದೇನೆಯೇ?'' ಎಂದು ಕೇಳಿದಾಗ ''ನೀವು ಆ ಪ್ರಶ್ನೆಯನ್ನು ಕೇಳಿದರೆ ಅದು ಆ ಸಂಪರ್ಕ ನಿಮಗಾಗಿಲ್ಲ ಎಂಬುದನ್ನು ತೋರಿಸಿಕೊಡುತ್ತದೆ. ಆ ಪ್ರಶ್ನೆಗೆ ಉತ್ತರ ಕೊಡುವ ಆವಶ್ಯಕತೆ ಇರುವುದಿಲ್ಲ , ಉತ್ತರವನ್ನು ನೀವೇ



ಕಂಡುಕೊಳ್ಳುತ್ತೀರಿ'' ಎಂದು ನಾನು ಹೇಳುತ್ತೇನೆ. ಆ ರೀತಿಯದಾದಾಗ ಅದು ಅದೇ, ಪೂರ್ತಿಗೊಂಡ ವಿಷಯ, ನಂತರ ಅದು ಬೇರೆ ರೀತಿಯದಾಗುವುದಿಲ್ಲ ...

ಮಾರ್ಗದಲ್ಲಿ ಮುಂದುವರಿಯಬೇಕಾದರೆ, ಮೊದಲು ನೀವು ಬಹಳ ನಮ್ರತೆಯಿಂದ ಹೊಸಜನ್ಮದತ್ತ ನಿಮ್ಮ ಪಯಣವನ್ನು ಪ್ರಾರಂಭಿಸಬೇಕು, ಅತಿಮಾನಸದ ಅನುಭವವನ್ನು ಪಡೆಯುವ ಭ್ರಮೆಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಕ್ಕಿಂತ ಮೊದಲು ಹೊಸ ಜನ್ಮ ಪಡೆಯಬೇಕು.

(ಆಶ್ರಮದ ಮಕ್ಕಳನ್ನು ಕುರಿತು) ನಿಮ್ಮನ್ನು ಸಮಾಧಾನಪಡಿಸಲು ನಾನು ಹೇಳಬಹುದಾದುದು ಹೀಗಿದೆ : ನೀವು ಈ ಸಮಯದಲ್ಲಿ ಪೃಥ್ವಿಯ ಮೇಲೆ ಜೀವಿಸುತ್ತಿರುವಿರಿ ಎಂಬ ವಾಸ್ತವತೆಯಿಂದ ನೀವು ಉಸಿರಾಡಿಸಲು ಒಳಗೆ ಎಳೆದುಕೊಳ್ಳುವ ಗಾಳಿಯೊಂದಿಗೆ ಅತಿಮಾನಸ ದ್ರವ್ಯವನ್ನು ಒಳಗೆ ಎಳೆದುಕೊಳ್ಳುತ್ತಿದ್ದೀರಿ-ಅದರ ಬಗ್ಗೆ ನೀವು ಪ್ರಜ್ಞೆಯುಳ್ಳವರಾಗಿರಲಿ, ಬಿಡಲಿ, ಅದು ನಿಮಗೆ ಬೇಕಾಗಿರಲಿ ಇಲ್ಲವೆ ಬಿಡಲಿ-ಅದು ಈಗ ಪೃಥ್ವಿಯ ವಾತಾವರಣದಲ್ಲಿ ಹರಡಿಕೊಳ್ಳುತ್ತಿದೆ. ಅದು ನಿಮ್ಮಲ್ಲಿ ವಿಷಯಗಳನ್ನು ತಯಾರು ಮಾಡುತ್ತಿದೆ, ನೀವು ನಿರ್ಧಾರಕ ಹೆಜ್ಜೆಯನ್ನಿರಿಸಿದ ಕೂಡಲೆ ಅವು ಒಮ್ಮೆಲೆ ಪ್ರಕಟವಾಗುವವು. ನೀವು ನಿರ್ಧಾರಕ ಹೆಜ್ಜೆಯನ್ನು ಇರಿಸುತ್ತೀರೋ ಇಲ್ಲವೋ ಎಂಬುದು ಇನ್ನೊಂದು ಪ್ರಶ್ನೆ : ... ಸದ್ಯದ ಕ್ಷಣದಲ್ಲಿ ಈ ವಿಷಯಗಳನ್ನು ನೆಚ್ಚಿಕೊಳ್ಳದೆ ಇರುವುದು ಹಾಗೂ ಆಧ್ಯಾತ್ಮಿಕ ಜೀವನದಲ್ಲಿ ಜನ್ಮ ತಳೆಯುವುದನ್ನು , ಸರಳ ರೀತಿಯಲ್ಲಿ , ಪ್ರಾರಂಭಿಸುವುದು ಹೆಚ್ಚು ಒಳ್ಳೆಯದು.

ಏನೇ ಆಗಲಿ, ಜೀವನ ಕುರಿತು ನಿಮ್ಮ ಮನೋಭಾವ ಎಷ್ಟೊಂದು ಭಿನ್ನವಾಗುವುದೆಂದರೆ, ಆಧ್ಯಾತ್ಮಿಕ ಜೀವನವೆಂದರೇನು ಎಂಬುದನ್ನು ನೀವು ತಿಳಿದುಕೊಳ್ಳುವಿರಿ, ಮತ್ತು ಆ ಕ್ಷಣದಲ್ಲಿ ಒಂದು ಶ್ರೇಷ್ಠ ವಿಷಯದ ಬಗ್ಗೆ ತಿಳಿದುಕೊಳ್ಳುವಿರಿ, ಅದು ನಿಜವಾಗಿಯೂ ಬಹಳ ಶ್ರೇಷ್ಠವಾದ ವಿಷಯ, ಅಹಂಕಾರವಿಲ್ಲದೆ ಜೀವಿಸುವುದು ಹೇಗೆ ಎಂಬುದೇ ಆ ವಿಷಯವಾಗಿದೆ.

ಅಲ್ಲಿಯವರೆಗೆ ನೀವಿದನ್ನು ತಿಳಿದುಕೊಳ್ಳಲಾರಿರಿ. ಇಡೀ ಜೀವನ ಅಹಂಕಾರದ ಮೇಲೆ ಎಷ್ಟೊಂದು ಅವಲಂಬಿಸಿದೆ ಎಂದರೆ ಅಹಂಕಾರವಿಲ್ಲದೆ, ಅಹಂಕಾರದ ಮೂಲಕವಲ್ಲದೆ ಜೀವಿಸುವುದು, ಕಾರ್ಯಮಾಡುವುದು ಅಸಾಧ್ಯವೆಂದು ತೋರಿಬರುತ್ತದೆ. ಈ ಹೊಸಜನ್ಮ ಪಡೆದ ನಂತರ ನೀವು ಅಹಂಕಾರದತ್ತ ನೋಡಿ,

ಮುಗುಳ್ನಕ್ಕು ''ನನ್ನ ಮಿತ್ರನೆ, ನನಗೆ ಇನ್ನು ನಿನ್ನ ಆವಶ್ಯಕತೆ ಇಲ್ಲ'' ಎಂದು ಅದಕ್ಕೆ ಹೇಳುವಿರಿ.

ವಿಮೋಚನೆಯ ನಿರ್ಧಾರಕ ಭಾವನೆಯನ್ನು ತಂದುಕೊಡುವ ಪರಿಣಾಮಗಳಲ್ಲಿ ಇದೂ ಒಂದು.

- ಶ್ರೀಮಾತೆ.

★

## ಅಹಂಕಾರದ ಸ್ಥಾನದಲ್ಲಿ ದೈವೀ ಪ್ರಜ್ಞೆಯನ್ನಿರಿಸುವುದು

**(11/307)** ಹಲವಾರು ಶತಮಾನಗಳ ಕಾಲದಿಂದ ಮಾನವತೆ ಈ ಸಮಯಕ್ಕಾಗಿ ಕಾದುಕೊಂಡಿತ್ತು. ಅದು ಬಂದಿದೆ. ಆದರೆ ಅದು ಕಠಿಣವಾಗಿದೆ.

ನಾವು ಇಲ್ಲಿ, ಪೃಥ್ವಿಯ ಮೇಲೆ, ವಿಶ್ರಾಂತಿ ಪಡೆಯಲು ಮತ್ತು ಸುಖದಿಂದಿರಲು ಇದ್ದೇವೆಂದು ನಾನು ಹೇಳುವುದಿಲ್ಲ. ಸದ್ಯ ಅಂತಹದಕ್ಕೆ ಸಮಯವಿಲ್ಲ. ಹೊಸ ಸೃಷ್ಟಿಗೆ ಮಾರ್ಗಮಾಡಿಕೊಡುವುದಕ್ಕಾಗಿ ನಾವಿಲ್ಲಿದ್ದೇವೆ.

ಈ ಕ್ಷಣದಲ್ಲಿ ಇಲ್ಲಿ ಅಂದರೆ ಪೃಥ್ವಿಯ ಮೇಲಿದ್ದೀರಿ, ಏಕೆಂದರೆ ಇಲ್ಲಿರಲು ಒಮ್ಮೆ ನೀವು ಆಯ್ದುಕೊಂಡಿದ್ದಿರಿ-ಅದು ನಿಮ್ಮ ನೆನಪಿನಲ್ಲಿಲ್ಲ, ನನಗೆ ಅದರ ನೆನಪಿದೆ-ಆ ಕಾರಣದಿಂದಾಗಿಯೆ ನೀವಿಲ್ಲಿದ್ದೀರಿ. ಸರಿ, ಆ ಕಾರ್ಯದ ಎತ್ತರದ ಮಟ್ಟಕ್ಕೆ ನೀವು ಮೇಲೇರಬೇಕು. ನೀವು ಹೆಣಗಬೇಕು, ಎಲ್ಲ ದೌರ್ಬಲ್ಯದ ಮೇಲೆ ಹಾಗೂ ಮಿತಿಗಳ ಮೇಲೆ ವಿಜಯ ಸಾಧಿಸಬೇಕು, ಎಲ್ಲದಕ್ಕಿಂತ ಹೆಚ್ಚಾಗಿ ನಿಮ್ಮ ಅಹಂಕಾರಕ್ಕೆ ''ನಿನ್ನ ಕಾಲ ಮುಗಿದು ಹೋಯಿತು'' ಎಂದು ಹೇಳಬೇಕು. ಅಹಂಕಾರವಿಲ್ಲದ ಒಂದು ಕುಲ ನಮಗೆ ಬೇಕಾಗಿದೆ, ಆ ಕುಲಕ್ಕೆ ಅಹಂಕಾರದ ಸ್ಥಾನದಲ್ಲಿ ದೈವೀ ಪ್ರಜ್ಞೆಯಿರಬೇಕು. ನಾವು ಬಯಸುವುದು ಅದನ್ನೇ ; ಆ ಕುಲ ತನ್ನನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕೆ ಮತ್ತು ಅತಿಮಾನಸ ಸತ್ತೆ ಜನ್ಮ ತಾಳುವುದಕ್ಕೆ ಅನುವು ಮಾಡಿಕೊಡಬೇಕು.

★

**(16/432)** ಮಾನವತೆಯನ್ನು ಮೊದಲು ಸೃಷ್ಟಿಸಿದಾಗ, ಅಹಂಕಾರ ಏಕತೆಯನ್ನುಂಟು ಮಾಡುವ ಅಂಶವಾಗಿತ್ತು. ಅಹಂಕಾರದ ಸುತ್ತ ವಿಭಿನ್ನ ಸ್ಥಿತಿಗಳು ಗುಂಪುಗೂಡುತ್ತಿದ್ದವು. ಈಗ ಅತಿಮಾನವತೆಗಾಗಿ ತಯಾರಿ ನಡೆದಿರುವುದರಿಂದ ಅಹಂಕಾರ ಮಾಯವಾಗಬೇಕಾಗಿದೆ, ಅದರ ಸ್ಥಾನದಲ್ಲಿ ಚೈತ್ಯಸತ್ತೆ ಬರಬೇಕಾಗಿದೆ. ದೈವೀ ಮಧ್ಯಸ್ಥಿಕೆ



ಈ ಚೈತ್ಯಸತ್ತೆಯನ್ನು ನಿಧಾನವಾಗಿ ರೂಪಿಸುತ್ತಿದೆ, ಅದರಿಂದಾಗಿ ಮಾನವ ಸತ್ತೆಯಲ್ಲಿ ಭಗವಂತನನ್ನು ಪ್ರಕಟಿಸಲು ಸಾಧ್ಯವಾಗುವುದು.

ಚೈತ್ಯದ ಪ್ರಭಾವದಡಿಯಲ್ಲಿ ಭಗವಂತ ಮನುಷ್ಯನಲ್ಲಿ ಪ್ರಕಟನಾಗುತ್ತಾನೆ ಮತ್ತು ಹೀಗೆ ಅತಿಮಾನವತೆ ಬರುವುದರ ತಯಾರಿ ಮಾಡುತ್ತಾನೆ.

- ಶ್ರೀಮಾತೆ.

★

## ಮನುಷ್ಯ ತಾನಿದ್ದ ಸೆರೆಮನೆಯಿಂದ ಸಿಡಿದು ಹೊರಬರುವುದು

**(9/135-37)** ಅತಿಮಾನಸದ ಮಾರ್ಗದ ಮೇಲೆ ಹೆಜ್ಜೆಯಿರಿಸಲು ನೀವು ಮೊದಲು ಮಾಡಬೇಕಾದುದು ಇತರರನ್ನು ತೀರ್ಮಾನಕ್ಕೆ ಒಳಪಡಿಸುವುದನ್ನು ನಿಮ್ಮ ಪ್ರಜ್ಞೆಯಿಂದ ಪೂರ್ತಿ ತೆಗೆದು ಹಾಕುವುದಾಗಿದೆ, ಏಕೆಂದರೆ ಅದು ಭೌತಿಕ ಪ್ರಗತಿಯೂ ಅಲ್ಲ, ದೈಹಿಕ ಪ್ರಗತಿಯೂ ಅಲ್ಲ. ಅದು ಯೋಚನೆಯಲ್ಲಿ, ಮನಸ್ಸಿನಲ್ಲಿ ಅಲ್ಪ ಪ್ರಗತಿ ಪಡೆಯುವುದಾಗಿರುತ್ತದೆ. ನಿಮ್ಮ ಮನಸ್ಸಿನಲ್ಲಿರುವ ಎಲ್ಲ ಅಜ್ಞಾನವನ್ನು ಸ್ವಚ್ಛಗೊಳಿಸದೆ ಇದ್ದರೆ ಅತಿಮಾನಸದ ಮಾರ್ಗದಲ್ಲಿ ಒಂದು ಹೆಜ್ಜೆಯನ್ನೂ ಇರಿಸುವ ಭರವಸೆ ಹೊಂದಲಾರಿರಿ.

ಒಳ್ಳೆಯದು ಹಾಗೂ ದುಷ್ಟವಾದದ್ದು, ಒಳ್ಳೆಯದು ಹಾಗೂ ಕೆಟ್ಟದ್ದು, ಉಚ್ಚತರವಾದದ್ದು ಹಾಗೂ ನಿಮ್ನತರವಾದದ್ದು ಎಂಬ ಈ ಎಲ್ಲ ಕಲ್ಪನೆಗಳು ಮಾನವ ಮನಸ್ಸಿನ ಅಜ್ಞಾನಕ್ಕೆ ಸೇರಿರುತ್ತವೆ. ಮನುಷ್ಯ ದೈವೀಜೀವನದ ಸಂಪರ್ಕಕ್ಕೆ ಬರಲು ಬಯಸಿದಾಗ ಅವನು ಈ ಅಜ್ಞಾನದಿಂದ ತನ್ನನ್ನು ಪೂರ್ತಿಯಾಗಿ ವಿಮೋಚನೆಗೊಳಿಸಬೇಕು, ಈ ವಿಷಯಗಳಿಗೆ ನೈಜತೆಯಿಲ್ಲದಿರುವ ಉಚ್ಚತರ ಪ್ರಜ್ಞೆಯ ಪ್ರಾಂತಕ್ಕೆ ಏರಿಹೋಗಬೇಕು. ಹೆಚ್ಚುಗಾರಿಕೆಯ, ಕೀಳಾಗಿರುವಿಕೆಯ ಭಾವನೆ ಸಂಪೂರ್ಣವಾಗಿ ಮಾಯವಾಗುತ್ತದೆ, ಅದರ ಸ್ಥಾನದಲ್ಲಿ ಅತಿ ವಿಭಿನ್ನ ಸ್ವರೂಪದ ಇನ್ನೇನೋ ಬರುತ್ತದೆ-ಅದು ತೋರಿಕೆಗಳನ್ನು ಸೋಸಿ ನೋಡುವ ಸಾಮರ್ಥ್ಯ, ಮುಖವಾಡಗಳ ಹಿಂದೆ ನುಗ್ಗಿ ನೋಡುವುದು, ದೃಷ್ಟಿಕೋನವನ್ನು ಬದಲಾಯಿಸುವುದು ಆಗಿರುತ್ತದೆ.

ಮತ್ತು ಇವು ಕೇವಲ ಶಬ್ದಗಳಲ್ಲ, ಪ್ರತಿಯೊಂದೂ ತೋರಿಕೆಯನ್ನು ಬದಲಿಸುತ್ತದೆ ಎಂಬುದು ಸತ್ಯ, ಆ ಬದಲಾವಣೆ ಸಮಗ್ರವಾಗಿರುತ್ತದೆ, ಜೀವನ ಹಾಗೂ ವಿಷಯಗಳು

ತೋರಿಬರುವುದಕ್ಕಿಂತ ಬಹಳ ಭಿನ್ನವಾಗಿರುತ್ತವೆ.

ಈ ಎಲ್ಲ ಸಂಪರ್ಕ, ಜಗತ್ತನ್ನು ಕುರಿತಾದ ಈ ಸಾಮಾನ್ಯ ಗ್ರಹಿಕೆ, ತನ್ನ ನೈಜತೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತದೆ. ನೈಜವಲ್ಲದ್ದು , ಕಾಲ್ಪನಿಕವಾದದ್ದು , ಭ್ರಮಾತ್ಮಕವಾದದ್ದು , ಅಸ್ತಿತ್ವದಲ್ಲಿ ಇರದೇ ಇರುವಂತಹದು ಇದೇ ಆಗಿರುತ್ತದೆ. ಏನೋ ಒಂದಿದೆ-ಅತ್ಯಂತ ಪ್ರಾಪಂಚಿಕವಾದ ಮೂರ್ತರೂಪದ್ದಾದ ಬಹಳ ಭೌತಿಕವಾದ ಏನೋ ಒಂದು-ಅದೇ ಸತ್ತೆಯ ನೈಜತೆಯಾಗಿರುತ್ತದೆ, ಮತ್ತು ಅದರಲ್ಲಿ ನಾವು ಸಾಮಾನ್ಯವಾಗಿ ನೋಡುವ ರೀತಿಗೆ ಸಮಾನವಾದದ್ದು ಏನೂ ಇರುವುದಿಲ್ಲ. ಮನುಷ್ಯನಿಗೆ ಈ ಗ್ರಹಿಕೆಯುಂಟಾದಾಗ-ದೈವೀ ಶಕ್ತಿಯ ಕಾರ್ಯದ, ತೋರಿಕೆಯ ಹಿಂದೆ, ತೋರಿಕೆಯಲ್ಲಿ ಹಾಗೂ ತೋರಿಕೆಯ ಮೂಲಕ ಕಾರ್ಯಗತವಾಗುವ ಗ್ರಹಿಕೆಯುಂಟಾದಾಗ-ಮನುಷ್ಯ ಸಾಮಾನ್ಯ ಮಾನವ ಜೀವನದ ಮಿಥ್ಯಾಚಾರದಲ್ಲಿರುವುದಕ್ಕಿಂತ ಹೆಚ್ಚಾಗಿ ಹೆಚ್ಚು ಸತ್ಯವಾದ ಏನೋ ಒಂದರಲ್ಲಿ ಜೀವಿಸಲು ಪ್ರಾರಂಭಿಸುತ್ತಾನೆ. ಆದರೆ ಅದಕ್ಕೂ ಮೊದಲಲ್ಲ. ...

ಮನಸ್ಸು ನಿಮಗೆ ನಿಜವಾಗಿ ತೋರಿಬರುವವರೆಗೆ, ನೀವು ಯೋಚಿಸುವ ರೀತಿ ನಿಮಗೆ ಸತ್ಯವಾಗಿರುವವರೆಗೆ, ನಿಜ ಹಾಗೂ ಮೂರ್ತರೂಪದ್ದಾಗಿರುವವರೆಗೆ ನೀವಿನ್ನೂ ಅಲ್ಲಿ ಇಲ್ಲ ಎಂಬುದನ್ನು ರುಜುವಾತುಪಡಿಸುತ್ತದೆ. ಮೊದಲು ನೀವು ಆ ಇನ್ನೊಂದು ಬದಿಗೆ ಸಾಗಿ ಹೋಗಬೇಕು, ನಂತರ ನಾನು ಹೇಳಿದ್ದನ್ನು ಅರ್ಥಮಾಡಿಕೊಳ್ಳಲು ಶಕ್ತರಾಗುವಿರಿ.

ಮನುಷ್ಯ ಹೆಚ್ಚು ಹೆಚ್ಚಾಗಿ ದೃಗೋಚರವಾಗುತ್ತಾನೆ ಇಲ್ಲವೆ ಗ್ರಹಿಸುತ್ತಾನೆ ಎಂದಲ್ಲ; ಅವನು ಮುಚ್ಚಿಹಾಕಿಕೊಂಡಿರುತ್ತಾನೆ, ಮತ್ತು ಸೂಕ್ಷ್ಮ ಸಂವೇದನಾಶೀಲ ಮನುಷ್ಯರಿಗೆ ತಮ್ಮನ್ನು ಒತ್ತಿ ಹಿಡಿದಿರುವ, ದಾಟಿ ಹೋಗಲು ಪ್ರಯತ್ನಿಸಬೇಕಾದ ಮತ್ತು ನಂತರ ಗೋಡೆಯೊಂದನ್ನು ಎದುರಿಸಬೇಕಾದ ಸಂವೇದನೆಯುಂಟಾಗುತ್ತದೆ. ಆಗ ಮನುಷ್ಯ (ತನಗೆದುರಾದ ಗೋಡೆಯನ್ನು) ಬಡಿಯಲು ಪ್ರಾರಂಭಿಸುತ್ತಾನೆ, ಅವನಿಗೆ ಅದನ್ನು ದಾಟಿ ಹೋಗಲು ಸಾಧ್ಯವಾಗುವುದಿಲ್ಲ.

ಅವನು ಒಳಗೇ ಉಳಿದುಕೊಂಡಿರುವವರೆಗೆ ಮಿಥ್ಯೆಯಲ್ಲಿರುತ್ತಾನೆ. ದೈವೀಕೃಪೆಯ ಮೂಲಕ ಒಂದು ದಿನ ಆ ಕವಚವನ್ನು ಮುರಿದು ಹಾಕಬಲ್ಲ ಮತ್ತು ದೈವೀಪ್ರಕಾಶದಲ್ಲಿ ಹೊರಬರಬಲ್ಲ , ಮುಕ್ತನಾಗಬಲ್ಲ.

ಇದು ಒಮ್ಮೆಲೆ, ಸಹಜವಾಗಿ, ಬಹಳ ಅನಿರೀಕ್ಷಿತವಾಗಿ ಸಂಭವಿಸಬಲ್ಲದು.



ಇದರಲ್ಲಿ ಮನುಷ್ಯ ಕ್ರಮೇಣ ಸಾಗಿಹೋಗಬಲ್ಲನೆಂದು ನನಗನಿಸುವುದಿಲ್ಲ. ಅವನು ನೋಡಲು ಶಕ್ತನಾಗುವವರೆಗೆ ಅದು ಸಾವಕಾಶವಾಗಿ ಸವೆದು ಹೋಗುವುದೆಂದೂ ನನಗನಿಸುವುದಿಲ್ಲ. ಆ ಬಗೆಯ ಉದಾಹರಣೆಯನ್ನು ನಾನು ಈವರೆಗೂ ನೋಡಿಲ್ಲ. ಅದಕ್ಕೂ ಹೆಚ್ಚಾಗಿ ಅಲ್ಲಿ ಒಂದು ಬಗೆಯ ಸಾಮರ್ಥ್ಯದ ಸಂಗ್ರಹವಾಗುವುದಿದೆ, ಆವಶ್ಯಕತೆ ಗಾಢವಾಗುವುದಿದೆ, ಎಲ್ಲ ಬಗೆಯ ಭಯ, ಕಾತರ, ಎಲ್ಲ ಲೆಕ್ಕಚಾರ ಇವೆಲ್ಲವುಗಳಿಂದ ಮುಕ್ತವಾಗಲು ಪ್ರಯತ್ನದಲ್ಲಿ ಸಹನೆಯಿದೆ, ಆವಶ್ಯಕತೆ ಎಷ್ಟೊಂದು ಅತ್ಯಗತ್ಯದ್ದಾಗುತ್ತದೆಂದರೆ ಮನುಷ್ಯ ಪರಿಣಾಮ ಏನಾಗಬಹುದು ಎಂಬ ಕಾಳಜಿ ಮಾಡುವುದಿಲ್ಲ.

ಮನುಷ್ಯ ವಿರೋಧಿಸಲಾಗದ ಸ್ಫೋಟಕದ ಹಾಗಿರುತ್ತಾನೆ ಮತ್ತು ತನ್ನ ಸೆರೆಮನೆಯಿಂದ ಬೆಳಕಿನ ಪ್ರಭೆಯಲ್ಲಿ ಸಿಡಿದು ಹೊರಬರುತ್ತಾನೆ.

ಆ ನಂತರ ಅವನು ಹಿಂದಿನ ಸ್ಥಿತಿಯಲ್ಲಿ ಎಂದಿಗೂ ಬಿದ್ದು ಬಿಡುವುದಿಲ್ಲ.

ಅದು ನಿಜವಾಗಿ ಹೊಸಜನ್ಮವಾಗಿರುತ್ತದೆ.

– ಶ್ರೀಮಾತೆ.

★

## ಹೊಸ ಜನ್ಮದೆಡೆಗೆ ಮಾರ್ಗ

**(20/83-84)** ಯೋಗದಲ್ಲಿ ನಮ್ಮ ಉದ್ದೇಶ ಸೀಮಿತ, ಬಾಹ್ಯದತ್ತ ದೃಷ್ಟಿ ಇರಿಸಿದ ಅಹಂಕಾರವನ್ನು ಗಡಿಪಾರು ಮಾಡುವುದಾಗಿದೆ ಮತ್ತು ಅದರ ಸ್ಥಾನದಲ್ಲಿ ಸ್ವಭಾವದ ಮೇಲೆ ಆಳಿಕೆ ನಡೆಸಲಿ ಎಂದು ಭಗವಂತನನ್ನು ಸಿಂಹಾಸನದಲ್ಲಿ ಕುಳ್ಳಿರಿಸುವುದಾಗಿದೆ. ಇದರರ್ಥ ಮೊದಲು ಆಸೆಯ ವಾರಸುದಾರಿಕೆಯನ್ನು ತಪ್ಪಿಸುವುದು ಮತ್ತು ಇನ್ನೆಂದಿಗೂ ಆಸೆಯ ತೃಪ್ತಿಗಳ ಆಳಿಕೆ ನಡೆಸುವುದು ಮಾನವ ಉದ್ದೇಶವೆಂದು ಒಪ್ಪಿಕೊಳ್ಳದೆ ಇರುವುದಾಗಿದೆ. ಆಧ್ಯಾತ್ಮಿಕ ಜೀವನ ತನ್ನ ಪೋಷಣೆಯನ್ನು ಆಸೆಯ ಮೂಲಕ ಎಳೆದುಕೊಳ್ಳುವುದಿಲ್ಲ , ಆದರೆ ಸಾರಭೂತ ಅಸ್ತಿತ್ವದ ಪರಿಶುದ್ಧ , ನಿಸ್ವಾರ್ಥದ ಆಧ್ಯಾತ್ಮಿಕ ಆನಂದದಿಂದ ಪಡೆದುಕೊಳ್ಳುತ್ತದೆ. ಆಸೆಯೇ ಅದರ ವಿಶಿಷ್ಟ ಚಿಹ್ನೆಯಾಗಿರುವ ಪ್ರಾಣಿಕ ಸ್ವಭಾವವಷ್ಟೇ ಅಲ್ಲ , ಆದರೆ ಮಾನಸಿಕ ಸತ್ತೆಯೂ ಕೂಡ ಹೊಸಜನ್ಮಕ್ಕೆ ಹಾಗೂ ಪರಿವರ್ತನೆಗೊಳಿಸುವ ಬದಲಾವಣೆಗೆ ಒಳಗಾಗಬೇಕು. ನಮ್ಮ ವಿಭಜನೆಗೊಂಡ, ಅಹಂಮನ್ಯತೆಯ, ಸೀಮಿತ

ಹಾಗೂ ಅಜ್ಞಾನದ ಯೋಚನೆ ಮತ್ತು ಬುದ್ಧಿಮತ್ತೆ ಇವು ಮಾಯವಾಗಬೇಕು, ಅವುಗಳ ಸ್ಥಾನದಲ್ಲಿ ಛಾಯಾರಹಿತ ದೈವೀ ಪ್ರಕಾಶಗೊಳಿಸುವಿಕೆಯ ಸಾರ್ವಲೌಕಿಕ ಮತ್ತು ದೋಷರಹಿತ ಲೀಲೆ ಹರಿದು ಬರಬೇಕು ; ಆ ಲೀಲೆಯು ಕೊನೆಯಲ್ಲಿ ತಡಕಾಡುವ ಅರ್ಧಸತ್ಯದಿಂದ ಎಡವುವ ದೋಷಗಳಿಂದ ಮುಕ್ತವಾಗಿ ಸ್ವಾಭಾವಿಕ, ಸ್ವ-ಅಸ್ತಿತ್ವದಲ್ಲಿರುವ ಋತ (ದೈವೀ ಸತ್ಯ) ಪ್ರಜ್ಞೆಯಲ್ಲಿ ಪರಾಕಾಷ್ಠೆ ತಲುಪುವುದು. ಗೊಂದಲಕ್ಕೀಡಾದ ಮತ್ತು ದಿಗ್ಭ್ರಮೆಗೊಳಗಾದ, ಅಹಂಕಾರವನ್ನು ಕೇಂದ್ರವಾಗಿ ಇರಿಸಿಕೊಂಡಿರುವ, ಚಿಕ್ಕ ಉದ್ದೇಶದಿಂದ ಪ್ರೇರಿತವಾಗಿರುವ ನಮ್ಮ ಸಂಕಲ್ಪ ಮತ್ತು ಕ್ರಿಯೆಗಳು ನಿಂತು ಹೋಗಬೇಕು, ಮತ್ತು ಅವುಗಳ ಸ್ಥಾನದಲ್ಲಿ ತೀವ್ರಗತಿಯ, ಸಾಮರ್ಥ್ಯಪೂರ್ಣ, ಸ್ಪಷ್ಟವಾಗಿ ಸ್ವಯಂಚಾಲಿತವಾದ, ದೈವೀಚಲನೆಗೊಳಗಾದ, ಪತನಗೊಂಡಿರದ ದೈವೀಶಕ್ತಿ ಬರಬೇಕು. ನಾವು ಕೈಕೊಳ್ಳುವ ಎಲ್ಲದರಲ್ಲಿ ಪರಮೋಚ್ಚ, ಅವೈಯಕ್ತಿಕ, ತಡವರಿಸದ ಎಡವದಿರುವ ಸಂಕಲ್ಪವನ್ನು ನೆಲೆಗೊಳಿಸಬೇಕು, ಈ ಸಂಕಲ್ಪವು ಸಹಜವಾದ, ಕ್ಷೋಭೆಗೊಳಗಾಗದ ಭಗವಂತನ ಸಂಕಲ್ಪದೊಡನೆ ಒಂದೇ ಶ್ರುತಿಯಲ್ಲಿರಬೇಕು. ನಮ್ಮ ಅಶಕ್ತ, ಅಹಂಮನ್ಯತೆಯಿಂದ ಕೂಡಿದ, ಭಾವನೆಗಳ ತೃಪ್ತಿತಂದುಕೊಡದ ಮೇಲ್ಮೈ ಲೀಲೆಯನ್ನು ಹೊರಗೆ ತಳ್ಳಬೇಕು, ಬದಲಾಗಿ ಆ ಭಾವನೆಗಳ ಹಿಂದೆ ತನ್ನ ಸಮಯಕ್ಕಾಗಿ ಕಾದುಕೊಂಡಿರುವ ರಹಸ್ಯ, ಆಳದಲ್ಲಿರುವ, ವಿಶಾಲವಾಗಿರುವ, ಅಂತರಂಗದಲ್ಲಿರುವ ಚೈತ್ಯ ಹೃದಯ ತೆರೆದುಕೊಳ್ಳಬೇಕು. ಭಗವಂತನು ವಾಸಿಸುವ ಈ ಆಂತರಿಕ ಹೃದಯದಿಂದ ಬಲವಂತಕ್ಕೊಳಗಾಗಿ ಆ ಭಾವನೆಗಳು ದ್ವಿವಿಧ ಭಾವೋದ್ರೇಕಗಳಾದ ದೈವೀಪ್ರೇಮ ಹಾಗೂ ದೈವೀ ಆನಂದಗಳ ಶಾಂತ ಸ್ವರೂಪದ ಹಾಗೂ ಗಾಢವಾದ ಚಲನೆಗಳಾಗಿ ಪರಿವರ್ತನೆಗೊಳ್ಳುತ್ತವೆ. ಇದೇ ದೈವೀ ಮಾನವತೆಯ ಇಲ್ಲವೆ ಅತಿಮಾನಸಕುಲದ ವ್ಯಾಖ್ಯೆ. ಈ ಮಾದರಿಯ ಅತಿಮಾನಸ ಜೀವಿಯನ್ನು ಯೋಗದ ಮೂಲಕ ಹೊರತರಲು ನಮಗೆ ಕರೆಕೊಡಲಾಗಿದೆ, ಆದರೆ ಅತಿರಂಜಿತ ಇಲ್ಲವೆ ಘನತೆಗೇರಿಸಿದ ಮಾನವ ಬುದ್ಧಿಮತ್ತೆಯ ಹಾಗೂ ಕ್ರಿಯೆಯ ಚೈತನ್ಯವನ್ನಲ್ಲ.

★

**(20/82)** ನಮ್ಮ ಸ್ವಭಾವದಲ್ಲಿರುವ ಎಲ್ಲವನ್ನೂ ಅರ್ಪಿಸುವುದು ಈ ಪರಮೋಚ್ಚ ಗುರಿಯತ್ತ ಸಾಗಲು ಸಾಧನವಾಗಿದೆ. ಪ್ರತಿಯೊಂದನ್ನೂ ನಮ್ಮಲ್ಲಿರುವ ಭಗವಂತನಿಗೆ, ವಿಶ್ವಂಭರವಾದ ಎಲ್ಲವೂ ಆದವನಿಗೆ, ಮತ್ತು ವಿಶ್ವಾತೀತ ಸರ್ವೋಚ್ಚನಿಗೆ ಅರ್ಪಿಸಬೇಕು.



ನಮ್ಮ ಸಂಕಲ್ಪದ ಪರಿಪೂರ್ಣ ಏಕಾಗ್ರತೆ, ಏಕೈಕನೂ, ವೈವಿಧ್ಯಮಯನೂ ಆದವನ ಮೇಲೆ ನಮ್ಮ ಹೃದಯ ಹಾಗೂ ಯೋಚನೆಗಳನ್ನಿರಿಸುವುದು, ನಮ್ಮ ಇಡೀ ಸತ್ತೆಯ ಕಾದಿರಿಸಿಕೊಂಡಿರದ ಸ್ವ-ಮುಡಿಪಾಗಿರಿಸಿಕೊಳ್ಳುವಿಕೆ-ಇದೆಲ್ಲ ನಿರ್ಣಾಯಕ ಚಲನೆ, ತನಗಿಂತಲೂ ಅನಂತಪಟ್ಟು ಶ್ರೇಷ್ಠತರವಾದ ಆ 'ತತ್'ದತ್ತ ಅಹಂಕಾರದ ಹೊರಳುವಿಕೆ, ಅದರ ಸ್ವ-ಅರ್ಪಣೆ ಹಾಗೂ ಅತ್ಯಗತ್ಯವಾದ ಶರಣಾಗತಿ.

– ಶ್ರೀ ಅರವಿಂದರು.

★

## ಎಲ್ಲ ಯೋಗವು ಅದರ ಸ್ವರೂಪದಲ್ಲಿ ಹೊಸಜನ್ಮವಾಗಿದೆ

**(20/60-65)** ಎಲ್ಲ ಯೋಗವು ಅದರ ಸ್ವರೂಪದಲ್ಲಿ ಹೊಸ ಜನ್ಮವಾಗಿದೆ, ಅದು ಸಾಮಾನ್ಯ ಮಾನವನ ಮಾನಸಿಕ ಹಾಗೂ ಲೌಕಿಕ ಜೀವನದಿಂದ ಉಚ್ಚತರ ಆಧ್ಯಾತ್ಮಿಕ ಪ್ರಜ್ಞೆ, ಮತ್ತು ಶ್ರೇಷ್ಠತರ ಹಾಗೂ ಹೆಚ್ಚು ದೈವಿಕವಾದ ಸತ್ತೆಯಲ್ಲಿ ಹೊರಬಂದ ಹೊಸಜನ್ಮವಾಗಿರುತ್ತದೆ. ಆ ವಿಶಾಲವಾದ ಆಧ್ಯಾತ್ಮಿಕ ಅಸ್ತಿತ್ವಕ್ಕೆ ಬಲವತ್ತರವಾದ ಎಚ್ಚತ್ತುಕೊಳ್ಳುವಿಕೆಯಿಲ್ಲದೆ ಯಾವ ಯೋಗವನ್ನೂ ಯಶಸ್ವಿಯಾಗಿ ಕೈಕೊಳ್ಳಲಾಗದು ಹಾಗೂ ಅನುಸರಿಸಲಾಗದು. ಈ ಆಳವಾದ ಹಾಗೂ ವಿಶಾಲವಾದ ಆಂತರಿಕ ಬದಲಾವಣೆಗೆ ಕರೆಯನ್ನು ಸ್ವೀಕರಿಸಿದ ಆತ್ಮವು ವಿಭಿನ್ನ ರೀತಿಗಳಲ್ಲಿ ಆರಂಭದ ಬೇರೆ ಮಾರ್ಗವನ್ನು ತಲುಪಬಲ್ಲದು. ಅರಿವಿಲ್ಲದೆ ಎಚ್ಚತ್ತುಕೊಳ್ಳುವುದರತ್ತ ಕೊಂಡೊಯ್ಯುವ ತನ್ನದೇ ಆದ ಸ್ವಾಭಾವಿಕ ಅಭಿವೃದ್ಧಿಯಿಂದ ಅದು ಬರಬಹುದು ; ಧರ್ಮವೊಂದರ ಪ್ರಭಾವದಿಂದ ಇಲ್ಲವೆ ತತ್ವಜ್ಞಾನವೊಂದರತ್ತ ಆಕರ್ಷಿತವಾಗಿ ಅದು ತಲುಪಬಹುದು, ನಿಧಾನ ಗತಿಯ ಜ್ಞಾನೋದಯದ ಮೂಲಕ ಇಲ್ಲವೆ ಒಮ್ಮೆಲೆ ಉಂಟಾಗುವ ಸ್ಪರ್ಶದಿಂದ ಅಥವಾ ಆಘಾತದಿಂದ ಅದರತ್ತ ಜಿಗಿದು ಹೋಗಬಹುದು ; ಬಾಹ್ಯ ಪರಿಸ್ಥಿತಿಗಳ ಒತ್ತಡದಿಂದ ಇಲ್ಲವೆ ಆಂತರಿಕ ಆವಶ್ಯಕತೆಯಿಂದ, ಮನಸ್ಸಿನ ಮೇಲಿರುವ ಮೊಹರುಗಳನ್ನು ಭಂಗಗೊಳಿಸುವ ಏಕೈಕ ಶಬ್ದದಿಂದ ಇಲ್ಲವೆ ದೀರ್ಘ ಚಿಂತನೆಯಿಂದ, ಆ ಮಾರ್ಗದಲ್ಲಿ ಕ್ರಮಿಸಿದ ದೂರದಲ್ಲಿರುವ ಉದಾಹರಣೆಯಿಂದ, ಇಲ್ಲವೆ ಸಂಪರ್ಕದಿಂದ ಮತ್ತು ದೈನಂದಿನ ಪ್ರಭಾವದಿಂದ ಅದರತ್ತ ತಳ್ಳಿಸಿಕೊಂಡು ಹೋಗಬಹುದು, ಇಲ್ಲವೆ ಕೊಂಡೊಯ್ಯಲಾಗಬಹುದು. ಪರಿಸ್ಥಿತಿಗಳ ಸ್ವರೂಪಕ್ಕನುಗುಣವಾಗಿ ಆ ಕರೆ ಬರುವುದು.

ಅದು ಬರುವ ರೀತಿ ಯಾವುದೇ ಆಗಿರಲಿ, ಮನಸ್ಸಿನ ಹಾಗೂ ಸಂಕಲ್ಪದ ನಿರ್ಧಾರವಿರಬೇಕು, ಅದರ ಪರಿಣಾಮವಾಗಿ ಸಂಪೂರ್ಣ ಹಾಗೂ ಪರಿಣಾಮಕಾರಿ ಸ್ವ-ಮುಡಿಪಾಗಿರಿಸುವಿಕೆ ಇರಬೇಕು. ಹೊಸ ಆಧ್ಯಾತ್ಮಿಕ ವಿಚಾರ-ಶಕ್ತಿಯ ಸ್ವೀಕಾರ ಮತ್ತು ಸತ್ತೆಯಲ್ಲಿ ಊರ್ಧ್ವಮುಖ ನೆಲೆ ನಿರ್ದೇಶನ, ಜ್ಞಾನೋದಯ, ಸಂಕಲ್ಪ ಹಾಗೂ ಹೃದಯದ ಅಭೀಪ್ಸೆಗಳ ಹಿಡಿತಕ್ಕೊಳಗಾದ ಹೊರಳುವಿಕೆ ಇಲ್ಲವೆ ಮಾರ್ಪಾಡಾಗುವಿಕೆ-ಇದು ಮಹತ್ವಪೂರ್ಣ ಕ್ರಿಯೆ ಮತ್ತು ಯೋಗ ಕೊಡಬಹುದಾದ ಎಲ್ಲವನ್ನು ಬೀಜರೂಪದಲ್ಲಿ ಒಳಗೊಂಡಿರುತ್ತದೆ. ಕೇವಲ ವಿಚಾರ ಇಲ್ಲವೆ ಆಚೆಗಿರುವ ಉಚ್ಚವಾದ ಏನನ್ನೋ ಬೌದ್ಧಿಕವಾಗಿ ಅರಸುವಿಕೆ, ಅದನ್ನು ಮನಸ್ಸಿನ ಅಭಿರುಚಿಯಿಂದ ಎಷ್ಟೇ ಬಲವತ್ತರವಾಗಿ ಗ್ರಹಿಸಿರಲಿ, ಅಪೇಕ್ಷಿಸಬಹುದಾದ ಏಕೈಕ ವಿಷಯವೆಂದು ಹೃದಯ ಹಾಗೂ ಮಾಡಬಹುದಾದ ಏಕೈಕ ಕಾರ್ಯವೆಂದು ಸಂಕಲ್ಪ ಹಿಡಿದುಕೊಳ್ಳದೆ ಇದ್ದಾಗ ಅದು ನಿಷ್ಪರಿಣಾಮಕಾರಿಯಾಗುವುದು. ಏಕೆಂದರೆ ಆತ್ಮದ ಸತ್ಯವನ್ನು ಕುರಿತು ಕೇವಲ ಯೋಚಿಸುವುದಷ್ಟೇ ಅಲ್ಲ , ಆದರೆ ಅದನ್ನು ಜೀವಿಸಬೇಕು ಮತ್ತು ಅದನ್ನು ಜೀವಿಸುವುದಕ್ಕಾಗಿ ಅದು ಸತ್ತೆಯ ಒಂದುಗೂಡಿದ ಏಕಮನಸ್ಕತೆಯನ್ನು ಬೇಡುತ್ತದೆ. ಯೋಗ ನಿರೀಕ್ಷಿಸುವ ಅಷ್ಟೊಂದು ಶ್ರೇಷ್ಠ ಬದಲಾವಣೆಯನ್ನು ವಿಭಜಿತ ಸಂಕಲ್ಪದಿಂದಾಗಲಿ, ಇಲ್ಲವೆ ಚೈತನ್ಯದ ಅಲ್ಪ ಭಾಗದಿಂದಾಗಲಿ ಇಲ್ಲವೆ ಹಿಂದು ಮುಂದು ನೋಡುವ ಮನಸ್ಸಿನಿಂದಾಗಲಿ ಮಾಡಲಾಗದು. ಭಗವಂತನನ್ನು ಅರಸುವ ಮನುಷ್ಯ ಅವನಿಗೆ ಮಾತ್ರ ತನ್ನನ್ನು ಮುಡಿಪಾಗಿರಿಸಿಕೊಳ್ಳಬೇಕು.

ಸ್ವಲ್ಪ ಮುಂದುವರಿಕೆ ಇರಬಹುದು, ಬಹಳ ಬಲವತ್ತರವಾದ ಪ್ರಯತ್ನವಿರಬಹುದು, ಬಹಳ ಪರಿಶುದ್ಧತೆ ಮತ್ತು ಪ್ರಮುಖವಲ್ಲದ ಹಾಗೂ ಸರ್ವೋಚ್ಚವಾಗಿರದ ಹಲವಾರು ಅನುಭವಗಳೂ ಕೂಡ ಇರಬಹುದು, ಆದರೆ ಅದು ತಯಾರಿಯಲ್ಲಿ ಕಳೆದು ಹೋಗಬಹುದು ಇಲ್ಲವೆ ಒಂದು ಹಂತವನ್ನು ತಲುಪಿ, ಮುಂದೆ ದೂಡಲು ಸಾಕಾಗದ ಶಕ್ತಿಯಿಂದ, ಅದಕ್ಕೆ ಸಾಧ್ಯವಿದ್ದ ಪ್ರಯತ್ನ ಮಾಡುವುದರ ಮಿತಿಯಲ್ಲಿ ನಿಂತುಬಿಡಬಹುದು, ಇಲ್ಲವೆ ನಿಮ್ನತರ ಜೀವನದತ್ತ ಹಿಂದಿರುಗುವಿಕೆ ಇರಬಹುದು-ಯೋಗದ ಸಾಮಾನ್ಯ ಭಾಷೆಯಲ್ಲಿ ಅದನ್ನು ಮಾರ್ಗದಲ್ಲಾಗುವ ಪತನವೆಂದು ಕರೆಯುತ್ತಾರೆ. ಆ ಚ್ಯುತಿ ಆಗುವುದೇಕೆಂದರೆ ಕೇಂದ್ರದಲ್ಲಿಯೇ ದೋಷವಿರುತ್ತದೆ. ಬುದ್ಧಿಗೆ ಅಭಿರುಚಿ ಉಂಟಾಗಿರುತ್ತದೆ, ಹೃದಯ ಆಕರ್ಷಣೆಗೆ ಒಳಗಾಗಿರುತ್ತದೆ, ಸಂಕಲ್ಪ ತನ್ನನ್ನು ಪ್ರಯತ್ನದಲ್ಲಿ



ತೊಡಕಿ ಹಾಕಿಕೊಂಡಿರುತ್ತದೆ, ಆದರೆ ಇಡೀ ಸತ್ತೆ ಭಗವಂತನ ಬಂದಿಯಾಗಿರುವುದಿಲ್ಲ. ಅಭಿರುಚಿಯಲ್ಲಿ , ಆಕರ್ಷಣೆಯಲ್ಲಿ ಇಲ್ಲವೆ ಪ್ರಯತ್ನದಲ್ಲಿ ಅದು ಕೇವಲ ಮೌನ ಸಮ್ಮತಿಯನ್ನು ಕೊಟ್ಟಿರುತ್ತದೆ. ಪ್ರಯೋಗವೊಂದನ್ನು ಕೈಕೊಳ್ಳಲಾಗಿರುತ್ತದೆ, ಆ ಪ್ರಯೋಗ ಆತುರದ್ದು ಆಗಿರಬಹುದು, ಆದರೆ ಆತ್ಮದ ಅನಿವಾರ್ಯವಾದ ಆವಶ್ಯಕತೆಗೆ ಇಲ್ಲವೆ ಕೈಬಿಡಲಾಗದ ಆದರ್ಶಕ್ಕೆ ಇಡಿಯಾದ ಆತ್ಮ-ಸಮರ್ಪಣೆ ಇರುವುದಿಲ್ಲ. ಇಂತಹ ಅಪರಿಪೂರ್ಣ ಯೋಗ ಕೂಡ ಹಾಳಾಗಿರುವುದಿಲ್ಲ , ಏಕೆಂದರೆ ಊರ್ಧ್ವಮುಖವಾದ ಯಾವುದೇ ಪ್ರಯತ್ನ ವ್ಯರ್ಥವಾಗುವುದಿಲ್ಲ. ಅದು ಸದ್ಯ ವಿಫಲವಾಗಿದ್ದರೂ ಇಲ್ಲವೆ ತಯಾರಿ ರೂಪದ ಯಾವುದೋ ಹಂತವನ್ನು ತಲುಪಿದ್ದರೂ ಇಲ್ಲವೆ ಪ್ರಾಥಮಿಕ ಹಂತದ ಸಿದ್ಧಿಯನ್ನು ಪಡೆದಿದ್ದರೂ ಅದಿನ್ನೂ ಆತ್ಮದ ಭವಿಷ್ಯವನ್ನು ನಿರ್ಧರಿಸುತ್ತದೆ.

ಆದರೆ ಈ ಜೀವನವು ನಮಗೆ ಕೊಟ್ಟ ಅವಕಾಶದ ಹೆಚ್ಚಿನ ಉಪಯೋಗವನ್ನು ನಾವು ಮಾಡಿಕೊಳ್ಳಬೇಕೆಂದಿದ್ದರೆ, ನಮಗೆ ಕೊಡಲಾದ ಕರೆಗೆ ಯೋಗ್ಯವಾಗಿ ಪ್ರತಿಸ್ಪಂದಿಸಬೇಕೆಂದಿದ್ದರೆ ಮತ್ತು ಗುರಿಯನ್ನು ಕುರಿತು ಸ್ವಲ್ಪ ಮುಂದುವರಿಯುವುದರಲ್ಲಿ ಸಂತೋಷಪಡದೆ ನಮಗೆ ಇಣುಕು ನೋಟ ನೀಡಿದ ಅದನ್ನು ಸಿದ್ಧಿಸಿಕೊಳ್ಳಬೇಕೆಂದಿದ್ದರೆ ಸಂಪೂರ್ಣವಾಗಿ ಆತ್ಮ-ಸಮರ್ಪಣೆ ಮಾಡಿಕೊಳ್ಳುವುದು ಅಗತ್ಯವಾದದ್ದು. ಯೋಗದಲ್ಲಿ ಯಶಸ್ಸು ಪಡೆಯುವುದರ ಹಿಂದಿರುವ ರಹಸ್ಯವು ಅದನ್ನು ಜೀವನದಲ್ಲಿ ಬೆಂಬತ್ತಬೇಕಾದ ಹಲವಾರು ಗುರಿಗಳಲ್ಲಿ ಒಂದೆಂದು ಭಾವಿಸದೆ, ಜೀವನದ ಮುಖ್ಯವಾದ ಭಾಗವೆಂದಷ್ಟೇ ಅಲ್ಲ , ಆದರೆ ಇಡೀ ಜೀವನವೇ ಆ ಗುರಿಗಾಗಿದೆ ಎಂದು ಪರಿಗಣಿಸುವುದಾಗಿದೆ.

– ಶ್ರೀ ಅರವಿಂದರು.

## ದಿವ್ಯಾತ್ಮದ ಜನ್ಮಗಳು

**(24/1166)** ಮೇಲ್ಗಡೆಗೆ ತೆರೆದುಕೊಳ್ಳುವಿಕೆ ಶಾಂತಿ, ನಿಶ್ಚಲನೀರವತೆ ಮತ್ತು ನಿರ್ವಾಣಗಳತ್ತ ಮಾತ್ರ ಕೊಂಡೊಯ್ಯುವುದಿಲ್ಲ ಎಂಬುದನ್ನು ಗಮನಿಸಬೇಕು ನಮ್ಮ ತಲೆಯ ಮೇಲಿರುವಂತೆ ಮತ್ತು ಎಲ್ಲ ಭೌತಿಕ ಹಾಗೂ ಅತಿ-ಭೌತಿಕ ಸ್ಥಳಾವಕಾಶದಲ್ಲಿ ವಿಸ್ತರಿಸಿಕೊಂಡಿರುವಂತೆ ಕಂಡುಬರುವ ಮಹೋನ್ನತ, ಕೊನೆಯಲ್ಲಿ ಅನಂತವಾದದ್ದೆನಿಸುವ ಶಾಂತಿ, ನಮ್ಮ ಮೇಲ್ಗಡೆಗಿರುವ ವಿಸ್ತಾರ ಇವುಗಳ ಬಗ್ಗೆ ಸಾಧಕ ಅರಿವುಳ್ಳವನಾಗುವುದು ಮಾತ್ರವಲ್ಲ , ಆದರೆ ಅವನು ಎಲ್ಲ ಸಾಮರ್ಥ್ಯವಿರುವ ದೈವೀ ಶಕ್ತಿ, ಎಲ್ಲ ಜ್ಞಾನವಿರುವ ದೈವೀ ಪ್ರಕಾಶ, ಎಲ್ಲ ಪರಮಾನಂದ ಹಾಗೂ ಭಾವಮಗ್ನತೆ ಇರುವ ದೈವೀ ಆನಂದ

ಇವುಗಳ ಬಗೆಗೂ ಅರಿವುಳ್ಳವನಾಗಬಲ್ಲನು. ಮೊದಲು ಅವು ಸಾರಭೂತವಾದ, ಅನಿರ್ದಿಷ್ಟವಾದ, ಪರಿಪೂರ್ಣವಾದ, ಸರಳವಾದ ಏನೋ ಅಗಿರುವಂತೆ ನಮಗೆ ತೋರಿಬರುತ್ತವೆ, ಇವುಗಳಲ್ಲಿ ಯಾವುದರಲ್ಲಿಯೇ ಆಗಲಿ ನಿರ್ವಾಣ ಸಾಧ್ಯವಿದೆ ಎಂದು ತೋರಿಬರುತ್ತದೆ. ಇದೆಲ್ಲವೂ ನಮ್ಮೊಳಗೆ ಇಳಿದು ಬರಬಹುದು. ಆದರೆ ಈ ದೈವೀಶಕ್ತಿ ಎಲ್ಲ ಶಕ್ತಿಗಳನ್ನು ಒಳಗೊಂಡಿರುವುದನ್ನು , ಈ ದೈವೀ ಪ್ರಕಾಶ ಎಲ್ಲ ಪ್ರಕಾಶಗಳನ್ನು ಒಳಗೊಂಡಿರುವುದನ್ನು ಹಾಗೂ ಈ ದಿವ್ಯಾನಂದ ಎಲ್ಲ ಸಂತೋಷ ಹಾಗೂ ಪರಮಾನಂದಗಳನ್ನು ಒಳಗೊಂಡಿರುವುದನ್ನು ನಾವು ನೋಡಲು ಸಾಧ್ಯವಾಗುತ್ತದೆ. ಅವುಗಳಲ್ಲಿ ಯಾವುದಾದರೊಂದು ಮತ್ತು ಎಲ್ಲವೂ ಕೆಳಗಿಳಿದು ಬರಬಹುದು, ಶಾಂತಿಯೊಂದೇ ಅಲ್ಲ ; ಆದರೆ ಮೊದಲು ಪರಿಪೂರ್ಣ ಸ್ಥಿರತೆ ಹಾಗೂ ಶಾಂತಿಯನ್ನು ತರುವುದು ಮಾತ್ರ ಅತ್ಯಂತ ಸುರಕ್ಷಿತವಾದದ್ದು , ಏಕೆಂದರೆ ಅದು ಉಳಿದೆಲ್ಲವುಗಳ ಅವರೋಹಣ ನಿರಾತಂಕವಾಗುವಂತೆ ಮಾಡುತ್ತದೆ. ಹಾಗಾಗದೆ ಹೋದರೆ ಅಷ್ಟೊಂದು ಹೆಚ್ಚಿನ ದೈವೀ ಶಕ್ತಿಯನ್ನು , ದೈವೀ ಪ್ರಕಾಶವನ್ನು ಮತ್ತು ದೈವೀ ಜ್ಞಾನ ಹಾಗೂ ಆನಂದಗಳನ್ನು ಸಹಿಸಿಕೊಳ್ಳುವುದು ಬಾಹ್ಯ ಸ್ವಭಾವಕ್ಕೆ ಕಷ್ಟಕರವಾಗಬಹುದು. ಇವೆಲ್ಲವೂ ಒಟ್ಟಿಗೆ ಸೇರಿದಾಗ ಅದಕ್ಕೆ ನಾವು ಉಚ್ಚತರ ಆಧ್ಯಾತ್ಮಿಕ ಪ್ರಜ್ಞೆ ಇಲ್ಲವೆ ದೈವೀ ಪ್ರಜ್ಞೆ ಎಂದು ಕರೆಯುತ್ತೇವೆ. ... ಈ ಊರ್ಧ್ವಮುಖ ತೆರೆದಿರಿಸಿಕೊಳ್ಳುವಿಕೆ ನಮ್ಮನ್ನು ಭಗವಂತನ ಇಡೀ ಸತ್ತೆಯ ಸಂಬಂಧದಲ್ಲಿರಿಸುತ್ತದೆ ಮತ್ತು ಅದು ನಮ್ಮಲ್ಲಿ ದೈವೀ ಪ್ರಜ್ಞೆಯನ್ನು ಮತ್ತು ದಿವ್ಯಾತ್ಮನ ಹೊಸ ಜನ್ಮವೊಂದನ್ನು ಇಲ್ಲವೆ ಹಲವಾರು ಹೊಸ ಜನ್ಮಗಳನ್ನು ಸೃಷ್ಟಿಸಬಲ್ಲದು.

– ಶ್ರೀ ಅರವಿಂದರು.

## ಹೊಸ ಜನ್ಮಕ್ಕೆ ಎರಡು ಹಂತಗಳಿವೆ

**(20/294-95)** ಮಾನವನಿಂದ ದೈವಿಕವಾದುದೆಡೆಗೆ, ವಿಭಜಿತ ಹಾಗೂ ಮೇಳೈಸದಿರುವುದರಿಂದ ಏಕೈಕವಾದುದರೆಡೆಗೆ, ಗೋಚರ ವಿಷಯದಿಂದ ಸನಾತನ ದೈವೀ ಸತ್ಯದೆಡೆಗೆ ಸಾಗುವ ಇಂತಹ ಇಡೀ ಹೊಸಜನ್ಮ ಇಲ್ಲವೆ ಆತ್ಮದ ಹೊಸಜನ್ಮ ಅವಶ್ಯವಾಗಿ ಎರಡು ಹಂತಗಳನ್ನು ಒಳಗೊಳ್ಳಬೇಕು : ಆತ್ಮ ಹಾಗೂ ಅದರ ಉಪಕರಣಗಳು ಯೋಗ್ಯವಾಗಲು ಬೇಕಾದ ತಯಾರಿಯದೊಂದು ಹಂತ, ಯೋಗ್ಯವಾಗಿರಿಸಿದ ತನ್ನ ಉಪಕರಣಗಳ ಮೂಲಕ ತಯಾರಾದ ಆತ್ಮದಲ್ಲಿ ಯಥಾರ್ಥವಾದ ಜ್ಞಾನೋದಯವನ್ನು ಹಾಗೂ ಸಿದ್ಧಿಯನ್ನು ಪಡೆಯುವುದು ಇನ್ನೊಂದು ಹಂತ. ಇವೆರಡು ಹಂತಗಳ ನಡುವೆ



ಕಾಲದ ಸರಣಿಯಲ್ಲಿ ಕಟ್ಟುನಿಟ್ಟಾಗಿ ಕೊರೆದು ತೆಗೆದ ಗೆರೆ ಇರುವುದಿಲ್ಲ ; ಅದಕ್ಕೂ ಹೆಚ್ಚಾಗಿ ಅವೆರಡು ಒಂದಕ್ಕೊಂದು ಅವಶ್ಯವಾಗಿರುತ್ತವೆ ಮತ್ತು ಏಕಕಾಲದಲ್ಲಿ ಮುಂದುವರಿಯುತ್ತವೆ. ಏಕೆಂದರೆ ಆತ್ಮ ಯೋಗ್ಯವಾದಂತೆ ಅದರ ಪ್ರಮಾಣದಲ್ಲಿಯೇ ಅದರ ಜ್ಞಾನೋದಯದಲ್ಲಿ ಹೆಚ್ಚಳವಾಗುತ್ತದೆ ಮತ್ತು ಅದು ಉಚ್ಚತರ, ಹೆಚ್ಚು ಪೂರ್ಣವಾದ ಸಿದ್ಧಿಯತ್ತ ಏರಿಹೋಗುತ್ತದೆ. ಮತ್ತು ಈ ಜ್ಞಾನೋದಯಗಳು ಹಾಗೂ ಸಿದ್ಧಿಗಳು ಹೆಚ್ಚಾದಂತೆ ಆತ್ಮವು ಯೋಗ್ಯವಾಗುತ್ತದೆ ಮತ್ತು ಅದರ ಉಪಕರಣಗಳು ತಮ್ಮ ಕಾರ್ಯಕ್ಕೆ ಹೆಚ್ಚು ಸಮರ್ಪಕವಾಗುತ್ತವೆ. ಜ್ಞಾನೋದಯ ಪಡೆದಿರದ ಆತ್ಮಕ್ಕೆ ಅದರ ತಯಾರಿಯ ಸೂಕ್ತಕಾಲಗಳಿರುತ್ತವೆ ; ಜ್ಞಾನೋದಯ ಪಡೆದು ಬೆಳೆದ ಹಾಗೂ ಪರಾಕಾಷ್ಠೆ ಪಡೆಯುತ್ತಿರುವ ಆತ್ಮದ ಕ್ಷಣಗಳಿವೆ, ಜ್ಞಾನೋದಯವನ್ನು ವಶದಲ್ಲಿ ಇಟ್ಟುಕೊಂಡ ಅವು ಹೆಚ್ಚು ಕಡಿಮೆ ಅದನ್ನು ವಿಸ್ತರಿಸಿರುತ್ತವೆ, ಕೋಲ್ಮಿಂಚಿನ ಹಾಗೆ ಸ್ವಲ್ಪ ಕಾಲ ಹೊಳೆದು ಹೋಗುವ ಕ್ಷಣಗಳಿರುತ್ತವೆ, ಹಾಗಿದ್ದರೂ ಆಧ್ಯಾತ್ಮಿಕ ಜೀವನದ ಇಡೀ ಭವಿಷ್ಯವನ್ನು ಬದಲಿಸುತ್ತವೆ. ಹಾಗೆಯೇ ಮಾನವ ಗಂಟೆಗಳ, ದಿನಗಳ ವಾರಗಳ ಕಾಲ ಸತತ ಪ್ರಕಾಶದಲ್ಲಿ ಇರುವ ಇಲ್ಲವೆ ಸೂರ್ಯನ ಉಜ್ವಲ ಪ್ರಕಾಶದಂತಿರುವುದರಲ್ಲಿ ಇರುವ ಕ್ಷಣಗಳಿವೆ. ಇವೆಲ್ಲವುಗಳ ಮೂಲಕ ಭಗವಂತನತ್ತ ಒಮ್ಮೆ ಹೊರಳಿಕೊಂಡ ಆತ್ಮವು ಅದರ ಹೊಸ ಜನ್ಮದ ಹಾಗೂ ನಿಜ ಅಸ್ತಿತ್ವದ ಶಾಶ್ವತತೆಯತ್ತ ಹಾಗೂ ಪರಿಪೂರ್ಣತೆಯತ್ತ ಬೆಳೆಯುತ್ತದೆ.

ನಮ್ಮ ಸತ್ತೆಯ ಎಲ್ಲ ಅಂಗಗಳನ್ನು ಪರಿಶುದ್ಧಗೊಳಿಸುವುದು ಮೊದಲ ಆವಶ್ಯಕತೆ. ... ಸಮಗ್ರ ಪರಿಶುದ್ಧತೆ ಇರಬೇಕು.

– ಶ್ರೀ ಅರವಿಂದರು.

★

## ಇದನ್ನು ಇಂದು ಹೊಸ ಜನ್ಮವೆಂದು ಸ್ವೀಕರಿಸಿರಿ

**(15/419-23)** ಜಗತ್ತಿನ ಸದ್ಯದ ಸ್ಥಿತಿಯಲ್ಲಿ ಯಾವಾಗಲೂ ಪರಿಸ್ಥಿತಿಗಳು ಕಠಿಣವಾಗಿರುತ್ತವೆ. ಪ್ರಕಟವಾಗಲು ಬಯಸುವ ಸತ್ಯ ಹಾಗೂ ಪ್ರಕಾಶಗಳ ಶಕ್ತಿಗಳು ಹಾಗೂ ಬದಲಾಗಲು ಬಯಸದ, ಸ್ಥಿರಗೊಂಡ ಹಾಗೂ ಗಟ್ಟಿಯಾದ ಎಲ್ಲದರ ಪ್ರತಿರೋಧ ಇವುಗಳ ನಡುವಿನ ಘರ್ಷಣೆ, ಹೋರಾಟಗಳ ಸ್ಥಿತಿಯಲ್ಲಿ ಜಗತ್ತು ಉಳಿದುಕೊಂಡಿದೆ. ಸ್ವಾಭಾವಿಕವಾಗಿ ಪ್ರತಿಯೊಬ್ಬ ವ್ಯಕ್ತಿ ತನ್ನದೇ ತೊಂದರೆಗಳ ಬಗ್ಗೆ ಭಾವನೆ ತಂದುಕೊಳ್ಳುತ್ತಾನೆ ಮತ್ತು ಅದೇ ಬಗೆಯ ಅಡೆತಡೆಗಳನ್ನು ಎದುರಿಸುತ್ತಾನೆ.

ನಿಮಗೆ ಒಂದೇ ಮಾರ್ಗವಿದೆ. ಅದು ಇಡಿಯಾದ, ಸಂಪೂರ್ಣವಾದ ಮತ್ತು ಕರಾರುರಹಿತವಾದ ಸಮರ್ಪಣೆ ಮಾಡಿಕೊಳ್ಳುವುದಾಗಿದೆ. ಕೇವಲ ನಿಮ್ಮ ಕರ್ಮಗಳನ್ನು, ಕ್ರಿಯೆಗಳನ್ನು, ಮಹತ್ವಾಕಾಂಕ್ಷೆಗಳನ್ನು ಅರ್ಪಿಸುವುದಷ್ಟೇ ಅಲ್ಲ, ನಿಮ್ಮ ಭಾವನೆಗಳೆಲ್ಲವನ್ನೂ ಅಂದರೆ ನೀವು ಮಾಡುವುದೆಲ್ಲವನ್ನೂ , ನೀವಿರುವುದೆಲ್ಲವನ್ನೂ ಕೂಡ ಪ್ರತ್ಯೇಕವಾಗಿ ಭಗವಂತನಿಗೆ ಅರ್ಪಿಸುವುದಾಗಿದೆ ಎಂಬುದು ಆ ಮಾರ್ಗದ ವಿವರಣೆ. ಹಾಗಾಗಿ ನೀವು ಸುತ್ತಲಿರುವ ಮಾನವ ಪ್ರತಿಕ್ರಿಯೆಗಳ ಮೇಲೆ ಇರುವಿರೆಂಬ ಭಾವನೆ ತಂದುಕೊಳ್ಳುತ್ತೀರಿ- ಕೇವಲ ಅವುಗಳ ಮೇಲೆ ಇರುವುದಷ್ಟೇ ಅಲ್ಲ, ದೈವೀಕೃಪೆಯೆಂಬ ಗೋಡೆಯಿಂದ ಅವುಗಳ ವಿರುದ್ಧ ರಕ್ಷಣೆ ಪಡೆಯುತ್ತೀರಿ. ನಿಮ್ಮಲ್ಲಿ ಆಸೆಗಳಿರುವುದು ನಿಂತು ಹೋದಾಗ, ಆಸಕ್ತಿಗಳಿಲ್ಲದೆ ಹೋದಾಗ, ಮಾನವ ಸತ್ತೆಗಳಿಂದ-ಅವರು ಯಾರೇ ಆಗಿರಲಿ-ಪ್ರತಿಫಲ ಸ್ವೀಕರಿಸುವ ಆವಶ್ಯಕತೆಯನ್ನು ನೀಗಿಸಿಕೊಂಡಾಗ-ಎಂದೂ ವಿಫಲವಾಗದ, ಪರಮೋಚ್ಚನಿಂದ ಬರುವ ಪ್ರತಿಫಲವನ್ನಷ್ಟೇ ಸ್ವೀಕರಿಸುವುದು ಯೋಗ್ಯವೆಂದು ಒಮ್ಮೆ ತಿಳಿದುಕೊಂಡಾಗ-ಎಲ್ಲ ಬಾಹ್ಯ ಸತ್ತೆಗಳೊಡನೆ ಹಾಗೂ ವಸ್ತು-ವಿಷಯಗಳೊಡನೆ ಆಸಕ್ತಿಯನ್ನು ಇಟ್ಟುಕೊಳ್ಳದೆ ಇದ್ದಾಗ ನಿಮಗೆ ಕೂಡಲೆ ನಿಮ್ಮ ಹೃದಯದಲ್ಲಿ ದೈವೀಸಾನ್ನಿಧ್ಯವಿರುವ ಅರಿವುಂಟಾಗುತ್ತದೆ, ಆ ದೈವೀ ಶಕ್ತಿ, ದೈವೀಕೃಪೆ ನಿಮ್ಮೊಡನೆ ಸದಾ ಇರುತ್ತದೆ.

ಮತ್ತು ಬೇರೆ ಉಪಾಯವಿಲ್ಲ. ಪ್ರತಿಯೊಬ್ಬನಿಗೂ, ಯಾವ ಅಪವಾದವೂ ಇಲ್ಲದೆ, ಅದೊಂದೇ ಉಪಾಯವಿದೆ. ವೇದನೆಯನ್ನು ಅನುಭವಿಸುವ ಎಲ್ಲರಿಗೂ ಅದೇ ವಿಷಯವನ್ನು ಹೇಳಬೇಕಾಗಿದೆ : ಎಲ್ಲ ವೇದನೆಯ ಚಿಹ್ನೆಯೆಂದರೆ ಸಮರ್ಪಣೆ ಇಡಿಯಾಗಿರದೆ ಇರುವುದಾಗಿದೆ. ನಂತರ ನಿಮ್ಮಲ್ಲಿ ಇದ್ದಕ್ಕಿದ್ದಂತೆ ಅನಿರೀಕ್ಷಿತವೊಂದು ಸಂಭವಿಸುತ್ತಿರುವ ಭಾವನೆ ಬಂದಾಗ ''ಓ ಅದು ಕೆಟ್ಟದಾದದ್ದು'' ಇಲ್ಲವೆ ''ಈ ಪರಿಸ್ಥಿತಿ ಕೆಟ್ಟದಾಗಿದೆ'' ಎಂದು ಹೇಳುವುದರ ಬದಲಾಗಿ ''ನನ್ನ ಸಮರ್ಪಣೆ ಪರಿಪೂರ್ಣವಾಗಿಲ್ಲ'' ಎಂದು ಹೇಳುತ್ತೀರಿ, ಆಗ ಅದೆಲ್ಲವೂ ಸರಿಯಾಗಿರುತ್ತದೆ, ನಿಮಗೆ ಸಹಾಯ ನೀಡುತ್ತಿರುವ ಹಾಗೂ ಮುನ್ನಡೆಸುತ್ತಿರುವ ದೈವೀಕೃಪೆಯ ಬಗ್ಗೆ ಭಾವನೆ ಬರುತ್ತದೆ ಮತ್ತು ನೀವು ಮುಂದುವರಿಯುತ್ತೀರಿ. ಯಾವುದೂ ತೊಂದರೆ ನೀಡದಿರುವ ಶಾಂತಿಯ ಸ್ಥಿತಿಯಲ್ಲಿ ನೀವು ಒಂದು ದಿನ ಹೊರಹೊಮ್ಮುತ್ತೀರಿ. ವಿರೋಧಿಸುವ ಎಲ್ಲ ಶಕ್ತಿಗಳಿಗೆ, ಚಲನೆಗಳಿಗೆ, ಆಕ್ರಮಣಗಳಿಗೆ, ತಪ್ಪು ತಿಳಿವಳಿಕೆಗಳಿಗೆ, ದುಷ್ಟ ಸಂಕಲ್ಪಗಳಿಗೆ ನೀವು ಉತ್ತರ ನೀಡುತ್ತೀರಿ



ಮತ್ತು ಅದನ್ನು ದೈವೀಕೃಪೆಯಲ್ಲಿರುವ ಸಂಪೂರ್ಣ ವಿಶ್ವಾಸದಿಂದ ಬರುವ ಮಂದಸ್ಮಿತದಂತಹದನ್ನು ಇಟ್ಟುಕೊಂಡೇ ಮಾಡುತ್ತೀರಿ. ಮತ್ತು ಇರುವ ದಾರಿ ಅದೊಂದೇ, ಬೇರೊಂದಿಲ್ಲ.

ಈ ಜಗತ್ತು ಘರ್ಷಣೆ, ವೇದನೆ, ತೊಂದರೆ ಮತ್ತು ಬಳಲಿಕೆ ಇವೆಲ್ಲವುಗಳಿಂದ ಕೂಡಿದೆ. ಅದಿನ್ನೂ ಬದಲಾಗಿಲ್ಲ. ಅದು ಬದಲಾಗಲು ಇನ್ನೂ ಸ್ವಲ್ಪ ಸಮಯ ಬೇಕು. ಪ್ರತಿಯೊಬ್ಬನಿಗೂ ಅದರಿಂದ ಹೊರಬರುವ ಸಾಧ್ಯತೆ ಇದೆ. ಪರಮೋಚ್ಚನ ದೈವೀಕೃಪೆಯ ಸಾನ್ನಿಧ್ಯದ ಆಸರೆ ಪಡೆದರೆ, ಆಗ ಹೊರಬರಲು ಮಾರ್ಗತೋರಿಸುವುದಕ್ಕೆ ಅದೊಂದೇ ಸಾಕು.

... ಮಾನವರಿಂದ ಮೆಚ್ಚಿಕೆಯನ್ನು ನಿರೀಕ್ಷಿಸುವುದು ಬೇಡ-ಏಕೆಂದರೆ ಯಾವ ಆಧಾರದ ಮೇಲೆ ಮೆಚ್ಚಿಕೆ ವ್ಯಕ್ತಪಡಿಸಬೇಕೆಂಬುದನ್ನು ಮಾನವರು ಅರಿತಿರುವುದಿಲ್ಲ ಮತ್ತು ಅದಕ್ಕೂ ಹೆಚ್ಚಾಗಿ ತಮಗಿಂತ ಶ್ರೇಷ್ಠವಾದ ಏನೋ ಇದ್ದಾಗ ಅದನ್ನು ಅವರು ಇಷ್ಟಪಡುವುದಿಲ್ಲ.

ಪ್ರಶ್ನೆ : *ಆದರೆ ಇಂತಹ ಬಲವನ್ನು ಎಲ್ಲಿಂದ ದೊರಕಿಸಬೇಕು?*

ಶ್ರೀಮಾತೆ : ನಿನ್ನೊಳಗೆ, ದೈವೀ ಸಾನ್ನಿಧ್ಯ ನಿನ್ನೊಳಗಿದೆ. ಅದು ನಿನ್ನೊಳಗಿದೆ. ನೀನು ಅದಕ್ಕಾಗಿ ಬಾಹ್ಯದಲ್ಲಿ ನೋಡುವಿ. ಒಳಗೆ ನೋಡು. ಅದು ನಿನ್ನೊಳಗಿದೆ. ದೈವೀ ಸಾನ್ನಿಧ್ಯ ಅಲ್ಲಿದೆ. ಬಲವನ್ನು ದೊರಕಿಸುವುದರ ಸಲುವಾಗಿ ನಿನಗೆ ಇತರರ ಮೆಚ್ಚಿಕೆ ಬೇಕಾಗಿದೆ. ಬಲ ನಿನ್ನೊಳಗಿದೆ. ನೀನು ಬಯಸಿದರೆ ನಿನಗೆ ಸರ್ವೋಚ್ಚ ಪ್ರೇಮ ಎಂದು ಕಂಡುಬರುವುದನ್ನು ಕುರಿತು ಅಭೀಪ್ಸೆಪಡು. ಆದರೆ ಅದು ನಿನ್ನೊಳಗಿದೆ-ಹಾಗಿಲ್ಲದಿದ್ದರೆ ನೀನು ಎಂದಿಗೂ ಅದರ ಸಂಪರ್ಕ ಪಡೆಯಲು ಸಾಧ್ಯವಾಗುವುದಿಲ್ಲ. ನಿನ್ನೊಳಗೆ ಸಾಕಷ್ಟು ಆಳದಲ್ಲಿ ಇಳಿದು ಹೋದಾಗ ಅದನ್ನು ನೀನು ಅಲ್ಲಿ ನೋಡುವಿ. ಅದು ಯಾವಾಗಲೂ ನೇರವಾಗಿ ಉರಿಯುತ್ತಿರುವ ಜ್ವಾಲೆಯ ಹಾಗಿರುತ್ತದೆ.

ಅದು ಅಷ್ಟೊಂದು ಕಷ್ಟಕರವಾಗಿದೆ ಎಂದು ನಂಬಬೇಡ. ಅದು ಕಷ್ಟಕರವಾಗುವುದೇಕೆಂದರೆ ನೋಟ ಯಾವಾಗಲೂ ಬಾಹ್ಯದತ್ತ ತಿರುಗಿಕೊಂಡಿರುತ್ತದೆ, ಹಾಗಾಗಿ ದೈವೀ ಸಾನ್ನಿಧ್ಯದ ಅರಿವು ನಿನಗಾಗುವುದಿಲ್ಲ. ಬಾಹ್ಯದಲ್ಲಿ ಆಧಾರ ಕಂಡುಕೊಳ್ಳುವುದರ ಬದಲಾಗಿ ಏಕಾಗ್ರಚಿತ್ತನಾಗಿರು, ಪ್ರಾರ್ಥನೆ ಮಾಡು, ಅದು

ಅಂತರಂಗದಲ್ಲಿರು ಸರ್ವೋಚ್ಚ ಜ್ಞಾನಕ್ಕಾಗಿರಲಿ-ಪ್ರತಿಯೊಂದು ಕ್ಷಣ ಏನು ಮಾಡಬೇಕು, ಹೇಗೆ ಮಾಡಬೇಕು, ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿರಲಿ. ಮತ್ತು ಪರಿಪೂರ್ಣತೆಯನ್ನು ದೊರಕಿಸುವುದಕ್ಕಾಗಿರಲಿ ನೀನಾಗಿರುವುದೆಲ್ಲವನ್ನು , ಮಾಡುವುದೆಲ್ಲವನ್ನು ಅರ್ಪಿಸಿದರೆ ಆಧಾರ ದೊರಕಿಸಿದ ಭಾವನೆ ನಿನಗೆ ಬರುತ್ತದೆ, ಆ ಆಧಾರ ಯಾವಾಗಲೂ ಮಾರ್ಗದ ಮೇಲೆ ಸಾಗಲು ಮಾರ್ಗದರ್ಶನ ಮಾಡುತ್ತದೆ. ತೊಂದರೆಯಿದ್ದರೆ ಹೋರಾಟ ಮಾಡುವುದರ ಬದಲಾಗಿ ಅದರೊಡನೆ ವ್ಯವಹರಿಸಲು ಸರ್ವೋಚ್ಚ ವಿವೇಕಕ್ಕೆ ಹಸ್ತಾಂತರಿಸು-ಅದು ಎಲ್ಲ ದುರಿಚ್ಛೆಗಳು, ಎಲ್ಲ ತಪ್ಪು ತಿಳಿವಳಿಕೆಗಳು, ಎಲ್ಲ ಕೆಟ್ಟ ಪ್ರತಿಕ್ರಿಯೆಗಳೊಡನೆ ವ್ಯವಹರಿಸುವುದು. ಸಂಪೂರ್ಣವಾಗಿ ಶರಣಾಗತನಾದರೆ, ಈ ನಂತರ ನೀನು ಆ ತೊಂದರೆಯನ್ನು ಕುರಿತು ಕಳವಳಪಡಬೇಕಾಗಿಲ್ಲ , ಅದು ಸರ್ವೋಚ್ಚನಿಗೆ ಸಂಬಂಧಿಸಿದ ವಿಷಯವಾಗುತ್ತದೆ, ಅವನು ಅದನ್ನು ಕೈಗೆತ್ತಿಕೊಳ್ಳುತ್ತಾನೆ, ಇತರರು ಯಾರೇ ಆಗಿರಲಿ, ಅವರೆಲ್ಲರಿಗಿಂತ ಹೆಚ್ಚು ಒಳ್ಳೆಯ ರೀತಿಯಲ್ಲಿ ಏನು ಮಾಡಬೇಕು ಎಂಬುದನ್ನು ತಿಳಿದುಕೊಂಡಿರುತ್ತಾನೆ. (ತೊಂದರೆಯಿಂದ) ಹೊರಬರಲು ರೀತಿ ಇದೊಂದೇ, ತಿಳಿಯಿತೆ ಮಗು?

ಪ್ರಶ್ನೆ : *ಒಂದು ವಿಷಯವಿದೆ, ಅದೆಂದರೆ ಅಲ್ಲಿ ನಾನೇನು ಮಾಡಿದರೂ ನನ್ನ ಜನರೇ ಅದನ್ನು ಇಷ್ಟಪಡುವುದಿಲ್ಲ.*

ಶ್ರೀಮಾತೆ : ಪ್ರತಿಯೊಬ್ಬನೂ ಮಿಶ್ರಣಕ್ಕೆ ಒಳಗಾಗಿರುವಂತೆ ನಿನ್ನವರೂ ಅದಕ್ಕೆ ಒಳಗಾಗಿರುತ್ತಾರೆ.

ಪ್ರಶ್ನೆ : *ನನ್ನಿಂದ ಅಲ್ಲವೇ ಅಲ್ಲ. ಅದು ಕಾರ್ಯನಿರ್ವಹಿಸುತ್ತದೆ. ಆದರೆ ...*

ಶ್ರೀಮಾತೆ : ಅದನ್ನು ಜಗತ್ತು ಅರ್ಥಮಾಡಿಕೊಳ್ಳಲಿ ಎಂದು ನಿರೀಕ್ಷಿಸುತ್ತಿರುವಿಯೇನು?

ಪ್ರಶ್ನೆ : *ಇಲ್ಲ , ಜನರು ಅರ್ಥಮಾಡಿಕೊಳ್ಳದೆ ಇರಬಹುದು. ನಾನು ಅದಕ್ಕೆ ಯಾವುದೇ ಬಗೆಯ ಪ್ರಶಂಸೆಯನ್ನು ಬಯಸುವುದಿಲ್ಲ. ಆದರೆ ಅಡೆತಡೆಗಳಿವೆ. ಮತ್ತು ...*

ಶ್ರೀಮಾತೆ : ನೀನು ಇಲ್ಲಿ ಹೇಳುತ್ತಿರುವುದನ್ನು ಕುರಿತು ಯೋಚಿಸು : ನಾನು ಅರ್ಥ ಮಾಡಿಕೊಳ್ಳುತ್ತೇನೆ, ನನಗೆ ತಿಳಿಯುತ್ತದೆ ಮತ್ತು ನಿನಗೆ ನನ್ನ ಸಂಪೂರ್ಣ ಬೆಂಬಲವಿದೆ. ನೀನು ತಪ್ಪು ಮಾಡುತ್ತಿರುವಿ ಎಂದು ನಾನು ಎಂದೂ ಹೇಳಿಲ್ಲ. ಹಾಗೆ ಹೇಳಿರುವೆನೇ? ಒಮ್ಮೆ ಮತ್ತು ಎಲ್ಲ ಕಾಲಕ್ಕೆ ನೀನು ತಿಳಿದುಕೊಳ್ಳಬೇಕಾದ ಒಂದು ವಿಷಯವಿದೆ : ಅದೆಂದರೆ



ನಿಜವಾದ ಯೋಗಿಗಳಾಗಿರದ, ಅಹಂಕಾರರಹಿತರಾಗಿರದ, ಪರಮೋಚ್ಚನಲ್ಲಿ ಸಂಪೂರ್ಣ ಸಮರ್ಪಣೆ ಮಾಡಿಕೊಂಡಿರದ ಜನರು ಅರ್ಥಮಾಡಿಕೊಳ್ಳಲಾರರು. ಅವರು ಬಾಹ್ಯ ದೃಷ್ಟಿಯಿಂದ ಹಾಗೂ ಜ್ಞಾನದಿಂದ ಎಲ್ಲವನ್ನೂ ನೋಡುತ್ತಾರೆ, ಬಾಹ್ಯ ವಸ್ತು-ವಿಷಯಗಳನ್ನು ಹಾಗೂ ತೋರಿಕೆಗಳನ್ನು ನೋಡುತ್ತಾರೆ, ಒಳಗಿರುವುದನ್ನಲ್ಲ. ಬಾಹ್ಯದಿಂದ ಅಂದರೆ ಜನರಿಂದ ಪ್ರಶಂಸೆ ಬರಲಿ ಎಂದು ನಿರೀಕ್ಷಿಸುವುದನ್ನು ನಿಲ್ಲಿಸಿದಾಗ, ದೂರುವುದಕ್ಕೆ ನಮಗೆ ಕಾರಣವಿರುವುದಿಲ್ಲ. ಅವರು ಪ್ರಶಂಸೆ ಮಾಡಿದರೆ ಅಷ್ಟರಮಟ್ಟಿಗೆ ಅದು ಅವರಿಗೇ ಒಳ್ಳೆಯದು, ಅವರು ಪ್ರಶಂಸೆ ಮಾಡದಿದ್ದರೆ ಅದರಿಂದೇನೂ ಆಗಬೇಕಾಗಿರುವುದಿಲ್ಲ. ಅದು ಅವರು ನೋಡುವ ದೃಷ್ಟಿ. ಅವರನ್ನು ಸಂತೋಷಪಡಿಸಲು ನಾವು ಕಾರ್ಯ ಕೈಕೊಳ್ಳುವುದಿಲ್ಲ ನಾವು ಮಾಡಲೇಬೇಕಾಗಿದೆ ಎಂಬ ಭಾವನೆಯಿಂದ ನಾವು ಕಾರ್ಯಕೈಕೊಳ್ಳುತ್ತೇವೆ.

ಪ್ರಶ್ನೆ : *ಶ್ರೀಮಾತೆಯವರೆ, ನಾನು ಎಂದೂ ಪ್ರಶಂಸೆಯನ್ನು ನಿರೀಕ್ಷಿಸಿಲ್ಲ.*

ಶ್ರೀಮಾತೆ : ಬಹುಶಃ ವಿಷಯಗಳು, ನೀನು ಆ ಬಗೆಯ ನಿಲುವನ್ನು ಹೊಂದಲು, ಒತ್ತಾಯ ತರುತ್ತಿರಬಹುದು-ಏಕೆಂದರೆ ಅದು ವಿಮೋಚನೆ, ಅದು ನಿಜವಾದ ವಿಮೋಚನೆ.

ಪ್ರಶ್ನೆ : *ಅಹಂಕಾರದಿಂದಲ್ಲ , ಆದರೆ ಸ್ವಭಾವದಿಂದ ನಾನು ಸಾಧು, ನನಗೆ ಯಾವುದೂ ಬೇಕಾಗಿಲ್ಲ.*

ಶ್ರೀಮಾತೆ : ಒಳ್ಳೆಯದು, ಹಾಗೆಯೇ ನೀನು ನಿನ್ನ ಬಳಗದವರಿಂದ ಪ್ರಶಂಸೆ ನಿರೀಕ್ಷಿಸಬಾರದು.

ಪ್ರಶ್ನೆ : *ನನ್ನೆಲ್ಲ ವಿಫಲತೆಗಳು, ದೌರ್ಬಲ್ಯಗಳು ಇದ್ದಾಗ್ಯೂ ನನಗೆ ಅದಾವುದರ ಆವಶ್ಯಕತೆ ಇಲ್ಲ. ನನಗೆ ಪ್ರಶಂಸೆಯ ಆವಶ್ಯಕತೆ ಇಲ್ಲ.*

ಶ್ರೀಮಾತೆ : ಹಾಗಾದರೆ ನೀನು ವೇದನೆಗೆ ಒಳಗಾಗಬೇಕಿಲ್ಲ , ಏಕೆಂದರೆ ನಿನಗೆ ಬೇಕಾದ ಆಧಾರ ಭಗವಂತನಿಂದ ಮಾತ್ರ, ಅದು ನಿನಗೆ ದೊರೆತಿದೆ. ನೀನು ವೇದನೆಗೊಳಗಾಗಬಾರದು.

ಪ್ರಶ್ನೆ : *ಆದರೆ ನಾನು ಬಹಳ ವೇದನೆಗೆ ಒಳಗಾಗಿದ್ದೇನೆ.*

ಶ್ರೀಮಾತೆ : ಹೌದು, ನಿನ್ನ ಸತ್ತೆಯಲ್ಲಿ ತಿಕ್ಕಾಟವಿದೆ. ನಿನ್ನ ಪ್ರಜ್ಞೆಯ ಒಂದು ಭಾಗ ಅರಿತುಕೊಂಡಿದೆ, ಆದರೆ ಇನ್ನೊಂದು ಭಾಗ ಪರಿಸ್ಥಿತಿಗಳ ಗುಲಾಮನಾಗಿದೆ.

## (ಮೌನ)

ಬಹುಶಃ ನಿನ್ನ ಮೇಲೆ ಬರುತ್ತಿರುವುದೆಲ್ಲ ಸರ್ವೋಚ್ಚ ಹಾಗೂ ಇಡಿಯಾದ ವಿಮೋಚನೆಗಾಗಿ ಇರಬಹುದು. ಮತ್ತು ನೀನು ಅದನ್ನು ದೈವೀಕೃಪೆಯ ಅಭಿವ್ಯಕ್ತಿಯೆಂದು ಸ್ವೀಕರಿಸಿದರೆ ಪರಿಣಾಮ ನಿನಗೆ ಕಂಡುಬರುವುದು : ಅದು ಶಾಂತಿ, ಯಾವಾಗಲೂ ಕ್ಷೋಭೆಗೊಳಗಾಗದ ಶಾಂತಿ, ಪರಿಪೂರ್ಣ ಸಮತೆ ಮತ್ತು ಎಂದೂ ವಿಫಲವಾಗದ ಬಲ ಇವುಗಳ ರೂಪದಲ್ಲಿರುತ್ತದೆ.

## (ದೀರ್ಘ ಮೌನ)

ಇಂದು ಅದನ್ನು ಹೊಸಜನ್ಮವೆಂದು ಸ್ವೀಕರಿಸು, ಅದು ಹೊಸಜನ್ಮದ ಪ್ರಾರಂಭ.

- ಶ್ರೀಮಾತೆ.

★

## ಶ್ರೀ ಅರವಿಂದರ ಸಂದೇಶ

(ಆಶ್ರಮ ಬಿತ್ತರಿಸಿದ ಹುಟ್ಟುಹಬ್ಬದ ಸಂದೇಶ : 1948) ನಿಮ್ಮ ಹೃದಯದಲ್ಲಿ ಹೊಸಜನ್ಮ ಪ್ರಕಟವಾಗಲಿ ಮತ್ತು ಸ್ಥಿರತೆ ಹಾಗೂ ಸಂತೋಷಗಳಲ್ಲಿ ಹೊರಸೂಸಲಿ, ಹಾಗೂ ನಿಮ್ಮ ಸತ್ತೆಯ, ಮನಸ್ಸಿನ, ದೃಷ್ಟಿಯ, ಸಂಕಲ್ಪದ, ಭಾವನೆಯ, ಪ್ರಾಣದ ಹಾಗೂ ದೇಹದ ಎಲ್ಲ ಭಾಗಗಳನ್ನು ಕೈಗೆತ್ತಿಕೊಳ್ಳಲಿ. ನಿಮ್ಮಲ್ಲಿರುವ ಎಲ್ಲವೂ ಶ್ರೀಮಾತೆಯವರ ಶಿಶುವಾಗುವವರೆಗೆ ನಿಮ್ಮ ಜೀವನದಲ್ಲಿಯ ಪ್ರತಿಯೊಂದು ದಿನಾಂಕ ಅದರ ಬೆಳವಣಿಗೆಯ ಹಾಗೂ ಶ್ರೇಷ್ಠತರ ಪರಿಪೂರ್ಣತೆಯ ದಿನಾಂಕವಾಗಲಿ. ನಿಮ್ಮ ಆಂತರಿಕ ಹಾಗೂ ಬಾಹ್ಯ ಅಸ್ತಿತ್ವ ಏಕೈಕ ಚಲನೆಯಾಗುವವರೆಗೆ ಮತ್ತು ಅದರ ಶಾಂತಿಯ, ಬಲದ ಹಾಗೂ ಆನಂದದ ಅಭಿವ್ಯಕ್ತಿಯಾಗುವವರೆಗೆ ದೈವೀ ಪ್ರಕಾಶ, ದೈವೀ ಸಾಮರ್ಥ್ಯ ಮತ್ತು ದೈವೀ ಸಾನ್ನಿಧ್ಯ ನಿಮ್ಮನ್ನು ಆವರಿಸಿಕೊಳ್ಳಲಿ, ರಕ್ಷಣೆ ನೀಡಲಿ ಮತ್ತು ಪಾಲಿಸಲಿ, ಪೋಷಿಸಲಿ.

- ಶ್ರೀ ಅರವಿಂದರು.



## ಅಧ್ಯಾಯ-14

## ದಿವ್ಯ ಕರ್ಮದ ಮೂಲತತ್ವ

ಗೀತೆಯ ಪ್ರಕಾರ ಯಜ್ಞ-ಸಿದ್ಧಾಂತದ ಅರ್ಥ ಏನಿದೆ ಎಂಬುದನ್ನು ಹಿಂದಿನ ಅಧ್ಯಾಯದಲ್ಲಿ ನೋಡಿಯಾಗಿದೆ. ಅದರ ಪೂರ್ತಿ ಪ್ರಾಮುಖ್ಯತೆ ಪುರುಷೋತ್ತಮನ ಕಲ್ಪನೆಯ ಮೇಲೆ ಅವಲಂಬಿಸಿದೆ. ಅದನ್ನಿನ್ನೂ ಅಭಿವ್ಯಕ್ತಪಡಿಸಲಾಗಿಲ್ಲ. ಮುಂದೆ ಬರುವ ಅಧ್ಯಾಯಗಳಲ್ಲಿ ಅದನ್ನು ಸ್ಪಷ್ಟವಾಗಿ ಮಂಡಿಸಿದ್ದನ್ನು ನೋಡಲಿದ್ದೇವೆ. ಹಾಗಾಗಿ ಗೀತೆಯ ಪ್ರಮುಖ ಬೋಧನೆಯ ಪ್ರಗತಿಪರ ಪ್ರತಿಪಾದನೆಗೆ ಆಗಬಹುದಾದ ಅಪಚಾರಕ್ಕೆ ಬೆಲೆ ತೆತ್ತಾದರೂ ಅದನ್ನು ಕುರಿತು ನಾವು ಪೂರ್ವಭಾವಿಯಾಗಿ ಯೋಚಿಸಬೇಕಾಯಿತು. ಸದ್ಯ ದೈವೀಗುರು ಸರಳ ಸೂಚನೆಯೊಂದನ್ನು ಕೊಡುತ್ತಾನೆ. ಪುರುಷೋತ್ತಮನ ಪರಮೋಚ್ಚ ಸಾನ್ನಿಧ್ಯ ಮತ್ತು ನಿಶ್ಚಲನೀರವತೆಯಲ್ಲಿರುವ ದಿವ್ಯಾತ್ಮ ಇವರ ನಡುವಿರುವ ಸಂಬಂಧವನ್ನಷ್ಟೇ ಕುರಿತು ಸ್ಥೂಲವಾಗಿ ಸೂಚಿಸುತ್ತಾನೆ. ಬ್ರಾಹ್ಮಿಕ ಸ್ಥಿತಿಯನ್ನು ಸಿದ್ಧಿಸಿಕೊಳ್ಳುವುದರ ಮೂಲಕ ಆ ದಿವ್ಯಾತ್ಮನಲ್ಲಿ ಪರಿಪೂರ್ಣ ಶಾಂತಿ ಹಾಗೂ ಸಮತೆ ಇವುಗಳ ನೆಲೆನಿರ್ದೇಶನವನ್ನು ಕಂಡುಕೊಳ್ಳುವುದು ನಾವು ಮಾಡಬೇಕಾದ ಮೊದಲಕಾರ್ಯ ಹಾಗೂ ಒತ್ತಾಯ ತರುವ ನಮ್ಮ ಆಧ್ಯಾತ್ಮಿಕ ಆವಶ್ಯಕತೆ ಆಗಿದೆ. ಪುರುಷೋತ್ತಮನನ್ನು ಕುರಿತು ಅವನು ನಿರ್ದಿಷ್ಟ ಶಬ್ದಗಳಲ್ಲಿ ಇನ್ನೂ ಮಾತನಾಡುತ್ತಿಲ್ಲ , ಆದರೆ ತನ್ನನ್ನೇ ಕುರಿತು ಹೇಳುತ್ತಿದ್ದಾನೆ.-ನಾನು, ಕೃಷ್ಣ , ನಾರಾಯಣ, ಅವತಾರಿಪುರುಷ, ಮಾನವನಲ್ಲಿರುವ ದೇವ, ಈ ದೇವನೇ ವಿಶ್ವದಲ್ಲಿರುವ ಪ್ರಭು, ಅವನು ಕುರುಕ್ಷೇತ್ರದ ದೈವೀ ಸಾರಥಿಯ ರೂಪದಲ್ಲಿ ಅವತರಿಸಿದ್ದಾನೆ. ಅವನು ಕೊಡುವ ಸೂತ್ರ ''ದಿವ್ಯಾತ್ಮನಲ್ಲಿ , ನಂತರ ನನ್ನಲ್ಲಿ'' ಎಂದಿದೆ. ಇದರ ಒಳಾರ್ಥ ಹೀಗಿದೆ : ವ್ಯಕ್ತಿಯೊಬ್ಬನ ವ್ಯಕ್ತಿತ್ವವನ್ನು ಅವೈಯಕ್ತಿಕ, ಸ್ವ-ಅಸ್ತಿತ್ವದಲ್ಲಿರುವ ದೈವೀಸತ್ತೆಯಲ್ಲಿ ''ಸಂಭೂತಿ'' ಎಂದು ನೋಡಿ ಅದಕ್ಕೆ ಅತೀತವಾಗಿ ಹೋಗುವುದು ಸರಳ ರೀತಿಯಲ್ಲಿ, ಆ ಮಹತ್ತರ, ರಹಸ್ಯವಾದ ಅವೈಯಕ್ತಿಕ ದೈವೀ ವ್ಯಕ್ತಿತ್ವದತ್ತ ತಲುಪುವುದಕ್ಕೆ ಸಾಧನವಾಗಿದೆ ; ಆ ದೈವೀ ವ್ಯಕ್ತಿತ್ವ ಹೀಗೆ ನಿಶ್ಚಲನೀರವತೆಯಲ್ಲಿದೆ, ಸ್ಥಿರವಾಗಿದೆ, ಪ್ರಕೃತಿಯ ಮೇಲ್ಗಡೆಗೆ ಅವೈಯಕ್ತಿಕ ಸತ್ತೆಯಲ್ಲಿದೆ, ಹಾಗೆಯೇ ಪ್ರಕೃತಿಯಲ್ಲಿ ಕಂಡುಬರುವ ಕೋಟ್ಯಾನುಗಟ್ಟಲೆ ಇರುವ ಈ ಎಲ್ಲ ಸಂಭೂತಿಗಳಲ್ಲಿಯೂ ಕೂಡ ಉಪಸ್ಥಿತವಿದೆ ಹಾಗೂ ಕ್ರಿಯಾಶೀಲವಾಗಿದೆ. ನಮ್ಮ ನಿಮ್ನತರ ವ್ಯಕ್ತಿತ್ವವನ್ನು ಅವೈಯಕ್ತಿಕವಾದುದರಲ್ಲಿ ಕಳೆದುಕೊಂಡು ನಾವು ಕೊನೆಗೆ ಪರಮೋಚ್ಚ ಅವೈಯಕ್ತಿಕವಾದುದರೊಡನೆ ಏಕತೆ

ಪಡೆಯುವುದರತ್ತ ತಲುಪುತ್ತೇವೆ, ಅದು ಪ್ರತ್ಯೇಕವಾದದ್ದು , ವ್ಯಕ್ತಿರೂಪದ್ದೂ ಅಲ್ಲ , ಹಾಗಿದ್ದರೂ ಎಲ್ಲ ವ್ಯಕ್ತಿ ವಿಶಿಷ್ಟತೆಗಳನ್ನು ಹೊಂದಿದೆ. ಮೂರು ಗುಣಗಳ ನಿಮ್ನ ಸ್ವಭಾವಕ್ಕೆ ಅತೀತವಾಗಿ ಮತ್ತು ಅನಂತವಾದ ದೇವನ ಉಚ್ಚತರ ಸ್ವಭಾವದಲ್ಲಿ ಮೇಲಕ್ಕೇರಿ ಹೋಗಬಲ್ಲೆವು ; ಈ ಅನಂತನಾದ ದೇವ ಪ್ರಕೃತಿಯ ಮೂಲಕ ಕಾರ್ಯಮಾಡುತ್ತಿದ್ದರೂ ಮೂರು ಗುಣಗಳ ಬಂಧನಕ್ಕೆ ಒಳಗಾಗಿರುವುದಿಲ್ಲ. ನಿಶ್ಚಲನೀರವತೆಯಲ್ಲಿರುವ ದೈವೀಪುರುಷನ ಆಂತರಿಕ ಕ್ರಿಯಾರಹಿತತೆಯನ್ನು (ನೈಷ್ಕರ್ಮ್ಯವನ್ನು) ತಲುಪಿ ಮತ್ತು ಪ್ರಕೃತಿಗೆ ತನ್ನ ಕಾರ್ಯಗಳನ್ನು ಮಾಡಲು ಬಿಟ್ಟುಕೊಟ್ಟು ನಾವು ಆಚೆಗಿರುವ ದೈವೀಪ್ರಭುತ್ವದ ದರ್ಜೆಯನ್ನು , ಪರಮೋಚ್ಚ ರೀತಿಯಲ್ಲಿ , ಸಿದ್ಧಿಸಿಕೊಳ್ಳಬಲ್ಲೆವು, ಅದು ಎಲ್ಲ ಕಾರ್ಯಗಳನ್ನು ಮಾಡಬಲ್ಲದು ಆದಾಗ್ಯೂ ಅವುಗಳಿಂದ ಬಂಧನಕ್ಕೊಳಗಾಗದು. ಇಲ್ಲಿ ಅವತಾರ ತಾಳಿದ ನಾರಾಯಣ, ಕೃಷ್ಣನೆಂದು ನೋಡಿದ ಪುರುಷೋತ್ತಮನ ಕಲ್ಪನೆ, ಆ ಕಾರಣದಿಂದಾಗಿ, ರಹಸ್ಯವನ್ನು ಪ್ರಕಟಿಸುತ್ತದೆ. ಅದಿಲ್ಲದೆ ನಿಮ್ನತರ ಸ್ಥಿತಿಯಿಂದ ಬ್ರಾಹ್ಮೀಸ್ಥಿತಿಯಲ್ಲಿ ಹಿಂದೆಗೆಯುವುದು ಅವಶ್ಯವಾಗಿ ಮುಕ್ತನಾದ ಮನುಷ್ಯನನ್ನು ನೈಷ್ಕರ್ಮ್ಯದತ್ತ, ಜಗತ್ತಿನ ಕರ್ಮಗಳ ಬಗ್ಗೆ ಅವನ ಉದಾಸೀನತೆಯತ್ತ ಕೊಂಡೊಯ್ಯುತ್ತದೆ. ಅದರೊಂದಿಗೆ ಅದೇ ಹಿಂದೆಗೆಯುವಿಕೆ ಒಂದು ಹೆಜ್ಜೆಯನ್ನು ಮುಂದಿರಿಸಿದಂತಾಗುತ್ತದೆ, ಅದರ ಮೂಲಕ ಜಗತ್ತಿನ ಕಾರ್ಯಗಳನ್ನು ಸ್ವಭಾವದಲ್ಲಿಯ ಉತ್ಸಾಹದೊಂದಿಗೆ ಹಾಗೂ ಭಗವಂತನ ಸ್ವಾತಂತ್ರ್ಯದಲ್ಲಿ ಕೈಗೆತ್ತಿಕೊಳ್ಳಲಾಗುತ್ತದೆ. ನಿಶ್ಚಲನೀರವತೆಯಲ್ಲಿರುವ ಬ್ರಹ್ಮನ್‌ನನ್ನು ಗುರಿಯೆಂದು, ಕೈಬಿಡಬೇಕಾದ ಜಗತ್ತನ್ನು ಹಾಗೂ ಅದರ ಎಲ್ಲ ಚಟುವಟಿಕೆಗಳನ್ನು ನೋಡು ; ಭಗವಂತನನ್ನು , ದೇವನನ್ನು , ಪುರುಷೋತ್ತಮನನ್ನು ಗುರಿಯೆಂದು, ಕರ್ಮಕ್ಕಿಂತ ಶ್ರೇಷ್ಠ ಆದಾಗ್ಯೂ ಅದರ ಆಂತರಿಕ ಆಧ್ಯಾತ್ಮಿಕ ಕಾರಣ ಹಾಗೂ ಉದ್ದೇಶವಾದುದನ್ನು , ಮೂಲಸಂಕಲ್ಪವನ್ನು ಮತ್ತು ಜಗತ್ತಿನ ಮೇಲೆ ಅದರ ಎಲ್ಲ ಚಟುವಟಿಕೆಗಳೊಂದಿಗೆ-ಜಯ ಸಾಧಿಸಿದುದನ್ನು ಮತ್ತು ಜಗತ್ತಿನಾಚೆಗಿನ ದೈವೀ ಅತೀತತೆಯಲ್ಲಿ ವಶವರ್ತಿ ಮಾಡಿಕೊಂಡಿದ್ದನ್ನು ನೋಡು. ಅದು ಸೆರೆಮನೆ ಆಗುವುದರ ಬದಲಾಗಿ ಸಮೃದ್ಧ ರಾಜ್ಯವಾಗಬಲ್ಲದು, ಅದನ್ನು ನಾವು ಆಧ್ಯಾತ್ಮಿಕ ಜೀವನಕ್ಕಾಗಿ ಗೆದ್ದುಕೊಂಡಿದ್ದೇವೆ,- ಹಾಗೆ ಮಾಡುವಾಗ ಪ್ರಜಾಪೀಡಕ ಅಹಂಕಾರದ ಸೀಮಿತತೆಗಳನ್ನು ನಾಶ ಮಾಡಿದ್ದೇವೆ, ನಮ್ಮನ್ನು ಜೇಲಿನಲ್ಲಿರಿಸುವ ಆಸೆಗಳ ಬಂಧನದ ಮೇಲೆ ಜಯ ಸಾಧಿಸಿದ್ದೇವೆ, ವೈಯಕ್ತಿಕ ಸ್ವಾಮ್ಯ ಹಾಗೂ ಸಂತೋಷದ ಸೆರೆಮನೆಯನ್ನು ಮುರಿದು



ಹಾಕಿದ್ದೇವೆ. ಮುಕ್ತವಾದ ಹಾಗೂ ವಿಶ್ವಂಭರವಾದ ಆತ್ಮ ಸ್ವರಾಟ್ ಹಾಗೂ ಸಾಮ್ರಾಟ್ ಆಗುತ್ತದೆ.

ಹೀಗೆ ಮುಕ್ತಿಯ ಸಾಧನವೆಂದು ಮತ್ತು ಆಧ್ಯಾತ್ಮಿಕ ಪರಿಪೂರ್ಣತೆ (ಸಂಸಿದ್ಧಿಃ) ಎಂದು ಯಜ್ಞಕರ್ಮಗಳಿಗೆ ಸಮರ್ಥನೆ ದೊರಕುತ್ತದೆ. ಹೀಗೆ ಬಲಾಢ್ಯವಾಗಿದ್ದ ಪ್ರಾಚೀನ ಯೋಗ ಕಾಲದ ಜನಕ ಹಾಗೂ ಇತರ ಕರ್ಮಯೋಗಿಗಳು ಯಜ್ಞವೆಂದು ಆಚರಿಸಿದ, ಸಮತೆ ಹಾಗೂ ಆಶಾರಹಿತತೆಗಳಿಂದ ಕೂಡಿದ ಕರ್ಮಗಳ ಮೂಲಕ, ಅಹಂಕಾರದ ಗುರಿಯನ್ನಾಗಲಿ, ಆಸಕ್ತಿಯನ್ನಾಗಲಿ ಕಿಂಚಿತ್ತೂ ಇಟ್ಟುಕೊಳ್ಳದೆ, ಸಿದ್ಧಿಯನ್ನು ದೊರಕಿಸಿದರು (ಕರ್ಮಣ್ಯೈವ ಹಿ ಸಂಸಿದ್ಧಿಮ್ ಆಸ್ಥಿತಾ ಜನಕಾದಯಃ), ಹಾಗೆಯೇ ಅದೇ ಬಗೆಯ ಆಶಾರಹಿತತೆಯಿಂದ, ಮುಕ್ತಿಯನ್ನು , ಹಾಗೂ ಪರಿಪೂರ್ಣತೆಯನ್ನು ಪಡೆದ ನಂತರ ಕರ್ಮಗಳನ್ನು , ವಿಶಾಲವಾದ ದೈವೀ ಮನೋಭಾವದಿಂದ, ಆಧ್ಯಾತ್ಮಿಕ ದೊರೆತನದಿಂದ, ಸ್ಥಿರತೆಯಲ್ಲಿರುವ ಉಚ್ಚ ಸ್ವಭಾವದಿಂದ ಮಾಡಲು ಶಕ್ಯವಿದೆ ಹಾಗೂ ಅವುಗಳನ್ನು ಮುಂದುವರಿಸಿಕೊಂಡು ಹೋಗಬೇಕು. ''ಜನರನ್ನು ಒಟ್ಟಿಗೆ ತರುವ ದೃಷ್ಟಿಯನ್ನು ಲಕ್ಷ್ಯದಲ್ಲಿಟ್ಟುಕೊಂಡಾದರೂ ನೀನು ಕರ್ಮಗಳನ್ನು ಮಾಡಬೇಕು. ಲೋಕಸಂಗ್ರಹಮ್ ಏವಾಪಿ ಸಂಪಶ್ಯನ್ ಕರ್ತುಮ್ ಅರ್ಹಸಿ. ಓ, ಪೃಥೆಯ ಮಗನಾದ ಪಾರ್ಥ ಅತ್ಯುತ್ತಮರಾದವರು ಯಾವುದನ್ನು ಮಾಡುವರೋ ಅದನ್ನು ನಿಮ್ನ ಮಟ್ಟದ ಮನುಷ್ಯರು ಆಚರಿಸುತ್ತಾರೆ, ಅವರು ನಿರ್ಮಿಸಿದ ಪ್ರಮಾಣಕವನ್ನು ಅನುಸರಿಸುತ್ತಾರೆ. ನಾನು ನಿಜವಾಗಿಯೂ ಕರ್ಮಗಳ ಮಾರ್ಗಕ್ಕೆ ಬದ್ಧನಾಗಿದ್ದೇನೆ, ''ವರ್ತ ಏವಚ ಕರ್ಮಣಿ''-ಏವ ಶಬ್ದ ಸೂಚಿಸುವುದೇನೆಂದರೆ ನಾನು ಸತ್ಯವಾಗಿಯೂ ಕರ್ಮಗಳ ಮಾರ್ಗಕ್ಕೆ ಬದ್ಧನಾಗಿದ್ದೇನೆ, ಸನ್ಯಾಸಿ ಕರ್ಮಗಳನ್ನು ಬಿಟ್ಟುಬಿಡಲೇಬೇಕೆಂದು ಯೋಚಿಸುವಂತೆ, ಅವುಗಳನ್ನು ಬಿಟ್ಟುಕೊಡುವುದಿಲ್ಲ. ಏಕೆಂದರೆ ನಾನು ನಿದ್ರಾರಹಿತನಾಗಿ ಕರ್ಮಗಳ ಮಾರ್ಗಕ್ಕೆ ಬದ್ಧನಾಗದೆ ಹೋದರೆ, ಜನರು ಎಲ್ಲ ರೀತಿಯಲ್ಲಿ ನನ್ನನ್ನೇ ಅನುಸರಿಸುತ್ತಾರೆ. ನಾನು ಕಾರ್ಯಮಾಡದೆ ಹೋದರೆ ಈ ಜನರು ವಿನಾಶದಲ್ಲಿ ಮುಳುಗಿ ಹೋಗುತ್ತಾರೆ, ನಾನು ಗೊಂದಲವನ್ನು ಸೃಷ್ಟಿ ಮಾಡುವವನು ಹಾಗೂ ಈ ಪ್ರಾಣಿಗಳ ಹಂತಕನು ಆಗುತ್ತೇನೆ. ತಿಳಿವಳಿಕೆ ಇಲ್ಲದವರು ಆಸಕ್ತಿಯಿಂದ ಕಾರ್ಯಮಾಡುವ ಹಾಗೆ ತಿಳಿವಳಿಕೆ ಇದ್ದವರು ಆಸಕ್ತಿರಹಿತರಾಗಿ ಕಾರ್ಯಮಾಡಬೇಕು, ಹಾಗೆ ಕಾರ್ಯಮಾಡುವುದಕ್ಕೆ ಲೋಕ ಸಂಗ್ರಹ ಅವರ ಉದ್ದೇಶವಾಗಿರಬೇಕು : ತಮ್ಮ ಕಾರ್ಯಗಳಿಗೆ ಅಂಟಿಕೊಂಡ

ಅಜ್ಞಾನಿ ಜನರಲ್ಲಿ ತಿಳಿವಳಿಕೆ ಇದ್ದವನು ಬುದ್ಧಿಭೇದವನ್ನು ಉಂಟುಮಾಡಬಾರದು, ಅವನು ಎಲ್ಲ ಕಾರ್ಯಗಳನ್ನು ಜ್ಞಾನದಿಂದ ಹಾಗೂ ಯೋಗದಲ್ಲಿ ಇದ್ದುಕೊಂಡು ತಾನೂ ಮಾಡುತ್ತ ಅವರನ್ನು ಅವುಗಳಿಗೆ ನಿಯೋಜಿಸಬೇಕು, ಗಮನ ಸೆಳೆಯುವ ಈ ಏಳು ಶ್ಲೋಕಗಳಿಗಿಂತ ಮುಖ್ಯವಾದ ಶ್ಲೋಕಗಳು ಗೀತೆಯಲ್ಲಿವೆ.

ದೂರದ ಆಧ್ಯಾತ್ಮಿಕ ಸಾಧ್ಯತೆಯು ಅರ್ಥ ಮಾಡಿಕೊಳ್ಳಲು ಅರಸುವುದಕ್ಕಿಂತ ಹೆಚ್ಚಿನ ರೀತಿಯಲ್ಲಿ ಸದ್ಯದ ಜಗತ್ತಿನ ಸ್ಥಿತಿಗತಿಗಳ ಬಗ್ಗೆ ಹೆಚ್ಚು ಕಾಳಜಿ ಹೊಂದಿರುವ ಆಧುನಿಕ ವ್ಯವಹಾರವಾದಿ ಪ್ರವೃತ್ತಿಯನ್ನು ಈ ಶ್ಲೋಕಗಳ ಅರ್ಥದಲ್ಲಿ ಕಂಡುಕೊಳ್ಳಬಹುದೆಂದು ಯೋಚಿಸಬಾರದು ಎಂಬುದರ ಬಗ್ಗೆ ನಾವು ಸ್ಪಷ್ಟವಾಗಿ ತಿಳಿದುಕೊಳ್ಳೋಣ. ಹಾಗೆಯೇ ಆಧುನಿಕ ಬುದ್ಧಿಮತ್ತೆಯನ್ನು ಆಕರ್ಷಿಸುವ ಸಮಾಜಸೇವೆ ಮತ್ತು ರಾಷ್ಟ್ರಭಕ್ತಿ, ವಿಶ್ವಮೈತ್ರಿ ಮತ್ತು ಮಾನವ ಹಿತಸಾಧಕ ಪ್ರಯತ್ನ ಹಾಗೂ ನೂರಾರು ಆತುರದ ಸಾಮಾಜಿಕ ಯೋಜನೆಗಳು ಹಾಗೂ ಕನಸುಗಳು ಇವುಗಳಿಗೆ ಅಂಟಿಕೊಳ್ಳುವುದಕ್ಕೆ ತಾತ್ವಿಕ ಹಾಗೂ ಧಾರ್ಮಿಕ ಸಮರ್ಥನೆಯನ್ನು ಮಾತ್ರ ಈ ಶ್ಲೋಕಗಳು ಕೊಡುತ್ತವೆಂದು ತಿಳಿದುಕೊಳ್ಳಬಾರದು. ಅದು ವಿಶಾಲವಾದ ನೈತಿಕ ಹಾಗೂ ಬೌದ್ಧಿಕ ಪರೋಪಕಾರಿ ಬುದ್ಧಿಯನ್ನು ಕುರಿತು ಮಾಡಲಾದ ಘೋಷಣೆಯಲ್ಲ. ಆದರೆ ಅದು ಭಗವಂತನೊಡನೆ ಮತ್ತು ಅವನಲ್ಲಿ ವಾಸಿಸುವ ಹಾಗೂ ಅವನು ವಾಸಿಸುವ ಸತ್ತೆಗಳಿರುವ ಈ ಜಗತ್ತಿನೊಡನೆ ಆಧ್ಯಾತ್ಮಿಕ ಏಕತೆಯ ನಿಯಮವಾಗಿದೆ. ವ್ಯಕ್ತಿ ತನ್ನನ್ನು ಸಮಾಜಕ್ಕೆ, ಮಾನವತೆಗೆ ಅಧೀನವಾಗಿರಿಸಿಕೊಳ್ಳುವ ಇಲ್ಲವೆ ಮಾನವ ಸಮೂಹದ ಪೂಜಾ ವೇದಿಕೆಯ ಮೇಲೆ ತನ್ನ ಅಹಂಕಾರದ ಬಲಿ ಕೊಡುವ ಕಟ್ಟಳೆ ಇಲ್ಲಿ ಇರುವುದಿಲ್ಲ, ಆದರೆ ಮಾನವ ಭಗವಂತನಲ್ಲಿ ನೆರವೇರಿಕೆ ಕಂಡುಕೊಳ್ಳುವುದಿದೆ ಮತ್ತು ಅಹಂಕಾರವನ್ನು ಒಂದು ನಿಜವಾದ ಬಲಿಪೀಠದ ಮೇಲೆ ಎಲ್ಲವನ್ನೂ ಅಪ್ಪಿಕೊಳ್ಳುವ ದೈವತ್ವಕ್ಕೆ ಯಜ್ಞಾಹುತಿ ಕೊಡುವುದಿದೆ. ಆಧುನಿಕ ಮನಸ್ಸಿಗಿಂತ ಉನ್ನತವಾದ ಸ್ತರದಲ್ಲಿ ಗೀತೆ ಚಲಿಸುತ್ತದೆ. ಆಧುನಿಕ ಮನಸ್ಸು ಅಹಂಕಾರದ ಜಾಲಗಳನ್ನು ಅಲುಗಾಡಿಸಿ ಬಿಡುವ ಹೋರಾಟದಲ್ಲಿ ಈಗ ತೊಡಗಿಕೊಂಡಿದೆ, ಆದರೆ ಅದು ಇನ್ನೂ ಲೌಕಿಕ ಹಾಗೂ ಬೌದ್ಧಿಕವಾದದ್ದು , ಆಧ್ಯಾತ್ಮದ್ದಾಗಿರುವುದಕ್ಕಿಂತ ಹೆಚ್ಚು ನೈತಿಕವಾದದ್ದು. ವ್ಯಕ್ತಿ, ಕುಟುಂಬ, ಸಾಮಾಜಿಕ ಹಾಗೂ ರಾಷ್ಟ್ರೀಯ ಅಹಂಕಾರ ಇವುಗಳ ಪ್ರಾಥಮಿಕ ಸ್ತರದಿಂದ ದೇಶಭಕ್ತಿ, ವಿಶ್ವಮೈತ್ರಿ, ಸಮಾಜ ಸೇವೆ, ಸಾಮೂಹಿಕ ಸ್ವಾಮ್ಯವಾದ, ಮಾನವೀಯತೆ, ಮಾನವತೆಯ ಆದರ್ಶ ಇಲ್ಲವೆ ಧರ್ಮ ಇವೆಲ್ಲವುಗಳು ಎರಡನೆಯ



ಸ್ತರಕ್ಕೆ ನಮ್ಮನ್ನು ಕೊಂಡೊಯ್ಯಲು ಪ್ರಶಂಸನೀಯವಾದ ಸಾಧನಗಳೇ ಸರಿ. ಈ ಸ್ತರದಲ್ಲಿ ವ್ಯಕ್ತಿ ಬೌದ್ಧಿಕ, ನೈತಿಕ ಮತ್ತು ಭಾವನಾತ್ಮಕ ಮಟ್ಟದಲ್ಲಿ ಮಾಡಲು ಸಾಧ್ಯವಿದ್ದಷ್ಟರ ಮಟ್ಟಿಗೆ ಸಿದ್ಧಿಸಿಕೊಳ್ಳುತ್ತಾನೆ-ಆ ಮಟ್ಟದಲ್ಲಿ ಅವನ ಸತ್ತೆಯ ಸಮಗ್ರ ಸತ್ಯದ ಸರಿಯಾದ, ಪರಿಪೂರ್ಣವಾದ ರೀತಿಯಲ್ಲಿ ಅವನು ಅದನ್ನು ಮಾಡಲಾರನು-ಅದು ಇತರರ ಸತ್ತೆಗಳೊಡನೆ ಅವನ ಅಸ್ತಿತ್ವದ ಏಕತೆಯಾಗಿರುತ್ತದೆ. ಆದರೆ ಗೀತೆಯ ಯೋಚನೆಯು ಅಭಿವೃದ್ಧಿಗೊಳ್ಳುತ್ತಿರುವ ನಮ್ಮ ಸ್ವ-ಪ್ರಜ್ಞೆಯ ಮೂರನೆಯ ಸ್ತರದಾಚೆಗೆ ವಿಸ್ತರಿಸುತ್ತದೆ, ಅದರತ್ತ ಎರಡನೆಯ ಸ್ತರದ ಮುಂದುವರಿಕೆ ಕೇವಲ ಭಾಗಶಃ ಹಂತ.

ಭಾರತೀಯ ಸಾಮಾಜಿಕ ಪ್ರವೃತ್ತಿ ಸಮಾಜದ ಹಕ್ಕುಗಳಿಗೆ ವ್ಯಕ್ತಿಯನ್ನು ಅಧೀನಗೊಳಿಸುವುದಾಗಿದೆ, ಆದರೆ ಭಾರತೀಯ ಧಾರ್ಮಿಕ ಯೋಚನೆ ಮತ್ತು ಆಧ್ಯಾತ್ಮಿಕ ಅನ್ವೇಷಣೆ ಇವು ತಮ್ಮ ಗುರಿಗಳಲ್ಲಿ ಗಂಭೀರವಾಗಿ ವ್ಯಕ್ತಿ ಗುಣಲಕ್ಷಣಗಳುಳ್ಳದ್ದಾಗಿವೆ. ಗೀತೆಯದಂತಹ ಭಾರತೀಯ ಚಿಂತನ ಪದ್ಧತಿ ವ್ಯಕ್ತಿಯ ಅಭಿವೃದ್ಧಿಯ ಅತ್ಯುಚ್ಚ ಆವಶ್ಯಕತೆಯನ್ನು , ಅತಿಭವ್ಯವಾದ ಆಧ್ಯಾತ್ಮಿಕ ಸ್ವಾತಂತ್ರ್ಯ, ಶ್ರೇಷ್ಠತೆ, ಘನತೆ, ದೊರೆತನಗಳನ್ನು ಶೋಧಿಸಿ ತೆಗೆದು ಪ್ರಯೋಗದಲ್ಲಿ ತರಲು ಹಕ್ಕನ್ನು ಮೊದಲು ಮುಂದಿರಿಸಲು ವಿಫಲವಾಗದು.-ಅವನ ಗುರಿಯು ಜ್ಞಾನೋದಯ ಪಡೆದ ದಾರ್ಶನಿಕ ಹಾಗೂ ದಾರ್ಶನಿಕತೆಯ ರಾಜತ್ವದ ಅರ್ಥದಲ್ಲಿ ರಾಜನಾಗುವುದಾಗಿತ್ತು, ಇದನ್ನು ಪ್ರಾಚೀನ ವೈದಿಕ ಋಷಿಗಳು ಆದರ್ಶ ಮಾನವತೆಗಾಗಿ ಶ್ರೇಷ್ಠ ಶಾಸನ ಪತ್ರದ ರೂಪದಲ್ಲಿ ಪ್ರಸಾರ ಮಾಡಿದ್ದರು. ತನ್ನನ್ನು ತಾನೇ ಮೀರಿ ಹೋಗುವುದು ಆ ಋಷಿಗಳ ಗುರಿಯಾಗಿತ್ತು. ಅದನ್ನು ಸಂಘಟಿತ ಮಾನವ ಸಮಾಜದ ಗುರಿಗಳಲ್ಲಿ ತನ್ನ ಎಲ್ಲ ವೈಯಕ್ತಿಕ ಗುರಿಗಳನ್ನು ಕಳೆದುಕೊಳ್ಳುವುದಾಗಿರಲಿಲ್ಲ , ಆದರೆ ಭಗವಂತನ ಪ್ರಜ್ಞೆಯಲ್ಲಿ ಎಲ್ಲ ಗುರಿಗಳನ್ನು ಭವ್ಯವಾಗಿಸುವುದು, ಉನ್ನತೀಕರಣಗೊಳಿಸುವುದು, ವರ್ಧಿಸುವುದು ಆಗಿತ್ತು. ಇಲ್ಲಿ ಗೀತೆ ಹೇಳಿದ ನಿಯಮ ಪ್ರಭುತ್ವ ಪಡೆದ ಮನುಷ್ಯನಿಗಾಗಿ, ಅತಿಮಾನವನಿಗಾಗಿ, ದೈವೀಕರಣಗೊಂಡ ಮಾನವನಿಗಾಗಿ, ಅತ್ಯಂತ ಶ್ರೇಷ್ಠರಾದವರಿಗಾಗಿ ಇದೆ, ನೀಟ್ಸೆ ಭಾವಿಸಿಕೊಂಡಿದ್ದ ಅತಿ ಮಾನವನಂತಹವರಿಗಾಗಿಯಾಗಲಿ, ಏಕಮುಖವಾಗಿರುವ ಇಲ್ಲವೆ ಏರುಪೇರಾಗಿರುವ ಜನರಿಗಾಗಲಿ, ಗ್ರೀಕ್ ದೇವತೆ ಅಪೊಲೋನಂತಹವರಿಗಾಗಲಿ, ಓಲಿಂಪಿಯ ವಾಸಿಗಳಂತಹವರಿಗಾಗಲಿ, ಗ್ರೀಕರ ಸುರಾದೇವ ಡ್ಯಾನೋಸಿಸ್‌ನಂತಹ-ವರಿಗಾಗಲಿ, ದೇವತಾ ಇಲ್ಲವೆ ರಾಕ್ಷಸರ ಅತಿಮಾನವತೆಗಾಗಲಿ ಆ ನಿಯಮ

ಅನ್ವಯಿಸುವುದಿಲ್ಲ, ಆದರೆ ಆ ಅರ್ಥದಲ್ಲಿ ಯೋಗ್ಯನಾಗಿರುವ ಮನುಷ್ಯ ತನ್ನ ವ್ಯಕ್ತಿತ್ವವನ್ನು ಏಕೈಕ ವಿಶ್ವಾತೀತ ಹಾಗೂ ವಿಶ್ವಂಭರ ದೈವತ್ವದ ಸ್ವಭಾವಕ್ಕೆ ಹಾಗೂ ಪ್ರಜ್ಞೆಗೆ ಅರ್ಪಿಸಿಕೊಂಡಿರುತ್ತಾನೆ ಮತ್ತು ತನ್ನ ಚಿಕ್ಕದಾದ ಆತ್ಮವನ್ನು ಕಳೆದುಕೊಳ್ಳುವುದರ ಮೂಲಕ ಅದರ ಶ್ರೇಷ್ಠ ಆತ್ಮವನ್ನು ಕಂಡುಕೊಂಡಿರುತ್ತಾನೆ, ಅದನ್ನು ದೈವೀಕರಣಗೊಳಿಸಿರುತ್ತಾನೆ.

ಅಪರಿಪೂರ್ಣ ನಿಮ್ನಪ್ರಕೃತಿ (ತ್ರೈಗುಣ್ಯಮಯಿ ಮಾಯಾ)ಯಿಂದ ದೈವೀಸತ್ತೆ, ಪ್ರಜ್ಞೆ ಹಾಗೂ ಸ್ವಭಾವಗಳಲ್ಲಿ[1] ಔನ್ನತ್ಯಕ್ಕೇರುವುದು (ಮದ್ಭಾವಮಾಗತಾಃ) ಯೋಗದ ಗುರಿಯಾಗಿದೆ. ಈ ಉದ್ದೇಶ ನೆರವೇರಿಕೆ ಕಂಡುಕೊಂಡ ನಂತರ, ಮನುಷ್ಯ ಬ್ರಾಹ್ಮೀಸ್ಥಿತಿಯಲ್ಲಿದ್ದಾಗ, ಅಹಂಕಾರದ ದೃಷ್ಟಿಯಿಂದ ತನ್ನನ್ನು ಹಾಗೂ ಜಗತ್ತನ್ನು ಈ ನಂತರ ನೋಡದೆ ಇದ್ದಾಗ, ಆದರೆ ದಿವ್ಯಾತ್ಮನನ್ನು , ಭಗವಂತನನ್ನು ಎಲ್ಲ ಸತ್ತೆಗಳಲ್ಲಿ ನೋಡತೊಡಗಿದಾಗ ಕರ್ಮ ಏನಾಗುವುದು?–ಕರ್ಮ ಇನ್ನೂ ಉಳಿದುಕೊಂಡಿರುತ್ತದೆ–ಈ ಕರ್ಮ  ಆ ರೀತಿಯಲ್ಲಿ ನೋಡುವುದರ ಪರಿಣಾಮದಿಂದ ಉಂಟಾಗುತ್ತದೆ ಮತ್ತು ಎಲ್ಲ ಕರ್ಮಗಳ ವಿಶ್ವವ್ಯಾಪಕ ಹಾಗೂ ವ್ಯಕ್ತಿಗತ ಉದ್ದೇಶ ಏನಾಗುವುದು? ಅದು ಅರ್ಜುನನ ಪ್ರಶ್ನೆ ,[2] ಆದರೆ ಅದಕ್ಕೆ ಸಿಕ್ಕ ಉತ್ತರ ಅವನು ಕೇಳಿದ್ದರ ದೃಷ್ಟಿಕೋನಕ್ಕೆ ಸಂಬಂಧಿಸದೆ ಬೇರೆ ರೀತಿಯದಾಗಿತ್ತು : ಆ ಉದ್ದೇಶ ಬೌದ್ಧಿಕ, ನೈತಿಕ, ಭಾವನಾತ್ಮಕ ಸ್ತರದಲ್ಲಿರುವ ವೈಯಕ್ತಿಕ ಆಸೆಯಾಗಿರಲಾರದು, ಏಕೆಂದರೆ ಅದನ್ನು ಬಿಟ್ಟುಕೊಡಲಾಗಿದೆ–ನೈತಿಕ ಉದ್ದೇಶವನ್ನೂ ಕೂಡ ಬಿಟ್ಟುಕೊಡಲಾಗಿದೆ, ಏಕೆಂದರೆ ಮುಕ್ತ ಮನುಷ್ಯ ಪಾಪ–ಪುಣ್ಯಗಳ ನಿಮ್ನತರ ಭೇದದಾಚೆ ಸಾಗಿ ಹೋಗಿರುತ್ತಾನೆ, ಒಳ್ಳೆಯತನ, ದುಷ್ಟತನಗಳಾಚೆ ವೈಭವೋಪೇತ ಪರಿಶುದ್ಧತೆಯಲ್ಲಿ ಜೀವಿಸುತ್ತಿರುತ್ತಾನೆ. ಅದು ಅನಾಸಕ್ತ ಕರ್ಮಗಳ ಮೂಲಕ ಅವನ ಪರಿಪೂರ್ಣ ಸ್ವ–ಅಭಿವೃದ್ಧಿಗೆ ಆಧ್ಯಾತ್ಮಿಕ ಕರೆಯಾಗಿರುವುದಿಲ್ಲ, ಏಕೆಂದರೆ ಆ ಕರೆಗೆ ಅವನು ಓಗೊಟ್ಟಿರುತ್ತಾನೆ ; ಅಭಿವೃದ್ಧಿ ಪರಿಪೂರ್ಣವಾಗಿರುತ್ತದೆ, ನೆರವೇರಿಕೆಯನ್ನು ಕಂಡುಕೊಳ್ಳಲಾಗಿರುತ್ತದೆ. ಅವನ ಕಾರ್ಯದ ಉದ್ದೇಶ ಜನರನ್ನು ಒಟ್ಟಿಗಿರಿಸುವುದಕ್ಕಾಗಿ ಇರಬಲ್ಲದು, ''ಚಿಕೀರ್ಷುಃ ಲೋಕ ಸಂಗ್ರಹಮ್''. ದೂರದಲ್ಲಿರುವ ದೈವೀ ಆದರ್ಶದತ್ತ ಜನರ ಈ ಮಹತ್ತರ ಮುಂದೆ ಸಾಗುವಿಕೆಯನ್ನು

1. ಸಾಯುಜ್ಯ, ಸಾಲೋಕ್ಯ, ಸಾದೃಶ್ಯ ಅಥವಾ ಸಾಧರ್ಮ್ಯ. ಸಾಧರ್ಮ್ಯ ಎಂದರೆ ಭಗವಂತನೊಡನೆ ಒಂದೇ ನಿಯಮ ಹಾಗೂ ಕಾರ್ಯ ಆಗುವುದಾಗಿದೆ.

2. ಕಿಮ್ ಪ್ರಭಾಷೇತ, ಕಿಮ್‌ಆಸೀತ, ವ್ರಜೇತ ಕಿಮ್.



ಒಟ್ಟಿಗೆ ಹಿಡಿದಿಡಬೇಕು, ತಿಳಿವಳಿಕೆಯ ದಿಗ್ಭ್ರಾಂತಿಯಲ್ಲಿ, ಗೊಂದಲದಲ್ಲಿ ಮತ್ತು ಅತೀವ ವೈಷಮ್ಯದಲ್ಲಿ ಬಿದ್ದುಬಿಡುವುದನ್ನು ತಡೆಯಬೇಕು, ಜ್ಞಾನೋದಯದಿಂದ, ಬಲದಿಂದ, ನಿಯಮ ಹಾಗೂ ಉದಾಹರಣೆ ಒದಗಿಸುವುದರಿಂದ, ಗೋಚರ ಮಾನದಂಡದಿಂದ ಹಾಗೂ ಶ್ರೇಷ್ಠರಾದವರ ಅಗೋಚರ ಪ್ರಭಾವದಿಂದ ಜಗತ್ತನ್ನು ಒಟ್ಟಿಗೆ ಹಿಡಿಯದಿದ್ದರೆ ಇಲ್ಲವೆ ಅದಕ್ಕೆ ದಾರಿ ತೋರಿಸದಿದ್ದರೆ, ಶಿಸ್ತುಪಾಲನೆಯ ಶ್ರೇಷ್ಠ ಪಥದಲ್ಲಿ ಅದನ್ನು ಇರಿಸದಿದ್ದರೆ ಅಜ್ಞಾನದ ರಾತ್ರಿಯಲ್ಲಿ ಇಲ್ಲವೆ ಮಂದಪ್ರಕಾಶದಲ್ಲಿ ಮುನ್ನಡೆಯುವ ಜಗತ್ತು ಇಂತಹದಕ್ಕೆ ಬಲಿಯಾಗುವ ಸಂಭವವಿರುತ್ತದೆ. ಸಾಮಾನ್ಯ ಜನರಿರುವ ಗುಂಪಿಗಿಂತ ಮುಂದೆ ಹಾಗೂ ಜನ ಸಮೂಹದ ಸಾಮಾನ್ಯ ಮಟ್ಟಕ್ಕಿಂತ ಮೇಲೆ ಇರುವ ಶ್ರೇಷ್ಠ ವ್ಯಕ್ತಿಗಳು ಸ್ವಾಭಾವಿಕ ನೇತಾರರಾಗಿರುತ್ತಾರೆ, ಏಕೆಂದರೆ ಅವರು ಮನುಕುಲ ಅನುಸರಿಸಬೇಕಾದ ಮಾರ್ಗವನ್ನು ಮತ್ತು ಅದು ಇಟ್ಟುಕೊಳ್ಳಬೇಕಾದ ಮಾನದಂಡವನ್ನು ಇಲ್ಲವೆ ಸಿದ್ಧಿಸಿಕೊಳ್ಳಬೇಕಾದ ಆದರ್ಶವನ್ನು ತೋರಿಸಿಕೊಡುತ್ತಾರೆ. ಆದರೆ ದೈವೀಕರಣಗೊಂಡ ಮನುಷ್ಯ, ಶಬ್ದದ ಸಾಮಾನ್ಯ ಅರ್ಥಕ್ಕಿಂತ ಇಲ್ಲವೆ ಬೀರಬಹುದಾದ ಅವನ ಪ್ರಭಾವಕ್ಕಿಂತಲೂ ಹೆಚ್ಚು ಅತ್ಯುತ್ತಮನಾಗಿರುತ್ತಾನೆ, ಶ್ರೇಷ್ಠ ಮನುಷ್ಯ ಯಾರೇ ಆಗಿರಲಿ, ಅವನು ಮುಂದಿಡುವ ಉದಾಹರಣೆಯಲ್ಲಿ ಪ್ರಯೋಗಿಸಲು ಸಾಧ್ಯವಿರುವ ಸಾಮರ್ಥ್ಯಕ್ಕಿಂತ ಹೆಚ್ಚಿನದು ಇರಲೇಬೇಕು. ಹಾಗಾಗಿ ಅವನು (ದಿವ್ಯಗುರು) ಯಾವ ಉದಾಹರಣೆಯನ್ನು ಕೊಡಬಲ್ಲ , ಯಾವ ನಿಯಮ ಅಥವಾ ಮಾನದಂಡವನ್ನು ಎತ್ತಿ ಹಿಡಿಯಬಲ್ಲ?

ತಾನು ಹೇಳಿದುದರ ಅರ್ಥವನ್ನು ಹೆಚ್ಚು ಪರಿಪೂರ್ಣವಾಗಿ ಸೂಚಿಸುವುದಕ್ಕಾಗಿ ದೈವೀ ಗುರು, ಅವತಾರಿ ಪುರುಷ ಅರ್ಜುನನಿಗೆ ತನ್ನದೇ ಉದಾಹರಣೆಯನ್ನು ಕೊಡುತ್ತಾನೆ. ''ನಾನು ಕರ್ಮದ ಮಾರ್ಗಕ್ಕೆ ಬದ್ಧನಾಗಿದ್ದೇನೆ, ಅದರಿಂದಾಗಿ ಎಲ್ಲ ಜನರು ಆ ಮಾರ್ಗವನ್ನು ಅನುಸರಿಸುವಂತಾಗುವುದು'' ಎಂದು ಅವನು ಹೇಳುತ್ತಿರುವ ಹಾಗಿದೆ ; ನೀನೂ ಕೂಡ ಕರ್ಮಕ್ಕೆ ಬದ್ಧನಾಗಿರಬೇಕು. ನಾನು ಕಾರ್ಯ ಕೈಕೊಳ್ಳುವ ರೀತಿಯಲ್ಲಿಯೇ ನೀನೂ ಕಾರ್ಯ ಮಾಡು. ನಾನು ಕರ್ಮಗಳ ಆವಶ್ಯಕತೆಯ ಮೇಲಿದ್ದೇನೆ, ಏಕೆಂದರೆ ಅವುಗಳಿಂದ ನಾನು ಗಳಿಸಬೇಕಾದುದು ಏನೂ ಇಲ್ಲ. ಜಗತ್ತಿನಲ್ಲಿರುವ ಎಲ್ಲ ವಸ್ತು–ವಿಷಯಗಳ ಮೇಲೆ, ಹಾಗೂ ಎಲ್ಲ ಸತ್ತೆಗಳ ಮೇಲೆ ಒಡೆತನ ಹೊಂದಿರುವ ಭಗವಂತ ನಾನು, ಮತ್ತು ನಾನೇ ಸ್ವತಃ ಜಗತ್ತಿನಾಚೆ ಇದ್ದೇನೆ ಹಾಗೆಯೇ ಅದರೊಳಗೂ

ಇದ್ದೇನೆ. ಮೂರೂ ಲೋಕಗಳಲ್ಲಿ ನಾನು ಯಾವುದರ ಮೇಲಾಗಲಿ, ಯಾರ ಮೇಲಾಗಲಿ ಅವಲಂಬಿಸಿರುವುದಿಲ್ಲ, ಯಾವ ಉದ್ದೇಶವೂ ನನಗಿಲ್ಲ, ಹಾಗಿದ್ದಾಗ್ಯೂ ನಾನು ಕಾರ್ಯ ಕೈಕೊಳ್ಳುತ್ತೇನೆ. ಕಾರ್ಯದ ನಿನ್ನ ರೀತಿ ಹಾಗೂ ಮನೋಭಾವ ನನ್ನದರಂತೆಯೇ ಇರಬೇಕು. ಭಗವಂತನಾದ ನಾನು ನಿಯಮ ಹಾಗೂ ಪ್ರಮಾಣವಾಗಿದ್ದೇನೆ. ಜನರು ಅನುಸರಿಸಲು ಮಾರ್ಗವನ್ನು ನಿರ್ಮಿಸುವವನು ನಾನೇ. ಗುರಿ ಹಾಗೂ ಮಾರ್ಗ ನಾನೇ. ಆದರೆ ನಾನಿದೆಲ್ಲವನ್ನು ವಿಶ್ವಂಭರವಾಗಿ ಮಾಡುತ್ತೇನೆ. ಅದರಲ್ಲಿ ಗೋಚರವಾದ ಭಾಗ ಅಲ್ಪ, ಆದರೆ ಹೆಚ್ಚಿನದು ಅಗೋಚರವಾಗಿರುತ್ತದೆ ಮತ್ತು ಜನರು ನನ್ನ ಕಾರ್ಯಗತಿಗಳ ರೀತಿಯನ್ನು ನಿಜವಾಗಿ ತಿಳಿದುಕೊಂಡಿರುವುದಿಲ್ಲ. ನೀನು ನೋಡಿದಾಗ ಹಾಗೂ ತಿಳಿದುಕೊಂಡಾಗ, ದೈವೀಕರಣಗೊಂಡ ಮನುಷ್ಯನಾದಾಗ ಭಗವಂತನ ವ್ಯಕ್ತಿಗತ ಸಾಮರ್ಥ್ಯ ನೀನಾಗಿರಬೇಕು. ನಾನು ನನ್ನ ಅವತಾರದಲ್ಲಿದ್ದ ಹಾಗೆ ನೀನು ಮಾನವನಾಗಿದ್ದಾಗ್ಯೂ ದೈವಿಕ ಉದಾಹರಣೆಯಾಗಬೇಕು. ಬಹಳಷ್ಟು ಜನರು ಅಜ್ಞಾನದಲ್ಲಿ ವಾಸಿಸುತ್ತಾರೆ, ಭಗವಂತನನ್ನು ಕಂಡವನು ಜ್ಞಾನದಲ್ಲಿ ವಾಸಿಸುತ್ತಾನೆ, ಆದರೆ ಜ್ಞಾನಿ ತನ್ನ ಶ್ರೇಷ್ಠತೆಯಲ್ಲಿ ಜಗತ್ತಿನ ಕಾರ್ಯಗಳನ್ನು ತಿರಸ್ಕರಿಸುವುದರ ಮೂಲಕ ಅಪಾಯಕಾರಿ ಉದಾಹರಣೆಯಿಂದ ಜನರ ಮನಸ್ಸನ್ನು ಗೊಂದಲಕ್ಕೀಡು ಮಾಡದಿರಲಿ, ಕ್ರಿಯೆಯ ದಾರವನ್ನು ನೇಯ್ಗೆಗೆ ಒಳಪಡಿಸುವುದಕ್ಕೆ ಮೊದಲು ತುಂಡು ಮಾಡದಿರಲಿ. ನಾನು ಹಾಕಿಕೊಟ್ಟ ದಾರಿಗಳಲ್ಲಿಯ ಹಂತಗಳನ್ನು , ಅಳವಡಿಸಿದ ದರ್ಜೆಗಳನ್ನು ಮಿಥ್ಯೆಗೊಳಿಸದಿರಲಿ, ದಿಕ್ಕುಗೆಡಿಸದಿರಲಿ. ಮನುಷ್ಯ ನಿಮ್ನತರವಾದುದರಿಂದ ಉಚ್ಚತರ ಸ್ವರೂಪವಿರುವುದರತ್ತ ಮತ್ತು ತೋರಿಕೆಯಲ್ಲಿ ಅದೈವಿಕವಾದದ್ದು ಪ್ರಜ್ಞಾಪೂರ್ಣ ಭಗವಂತನತ್ತ ಪ್ರಗತಿ ಸಾಧಿಸಲೆಂದು ಮಾನವ ಕ್ರಿಯೆಯ ಇಡೀ ವ್ಯಾಪ್ತಿಯನ್ನು ನಾನು ವಿಧಿಸಿದ್ದೇನೆ. ಭಗವಂತನನ್ನು ಅರಿತುಕೊಂಡವನು ಚಲಿಸಲು ಸಾಧ್ಯವಾಗುವಂತೆ ಮಾನವ ಕರ್ಮಗಳ ಇಡೀ ವ್ಯಾಪ್ತಿಯಿರಬೇಕು. ಎಲ್ಲ ವ್ಯಕ್ತಿವಿಶಿಷ್ಟ, ಎಲ್ಲ ಸಾಮಾಜಿಕ ಕಾರ್ಯ, ಬುದ್ಧಿಯ ಎಲ್ಲ ಕಾರ್ಯ, ಹೃದಯ ಮತ್ತು ದೇಹ ಇವೆಲ್ಲವೂ ಇನ್ನೂ ಅವನಿಗೆ ಸೇರಿದವುಗಳೇ ಆಗಿರುತ್ತವೆ, ಆದರೆ ಈ ನಂತರ ತಾನು ಪ್ರತ್ಯೇಕವಾಗಿರುವುದರ ಸಲುವಾಗಿ ಅಲ್ಲ, ಆದರೆ ಜಗತ್ತಿನಲ್ಲಿರುವ ಎಲ್ಲ ಸತ್ತೆಗಳಲ್ಲಿರುವ ಭಗವಂತನ ಸಲುವಾಗಿ, ಮತ್ತು ಆ ಎಲ್ಲ ಸತ್ತೆಗಳು, ತಾನು ಮಾಡಿದಂತೆ ಕರ್ಮ ಮಾರ್ಗದಲ್ಲಿ, ತಮ್ಮಲ್ಲಿರುವ ಭಗವಂತನ ಶೋಧಮಾಡಲು ಚಲಿಸುವುದರ ಸಲುವಾಗಿ ಅವೆಲ್ಲವೂ ಇರುತ್ತವೆ. ಅವನ ಕಾರ್ಯ,



ಬಾಹ್ಯದಲ್ಲಿ ಇತರರ ಕಾರ್ಯಕ್ಕಿಂತ ಸಾರದಲ್ಲಿ ಭಿನ್ನವಾಗಿ ಇರದಂತೆ ತೋರಿಬರಬಹುದು; ಯುದ್ಧ ಮತ್ತು ಆಳಿಕೆ ಹಾಗೆಯೇ ಬೋಧನೆ ಮತ್ತು ಯೋಚನೆ, ಮನುಷ್ಯ ಮನುಷ್ಯರೊಂದಿಗೆ ನಡೆಸುವ ವ್ಯವಹಾರ ಇವೆಲ್ಲ ಅವನ ಆ ಕಾರ್ಯದ ವ್ಯಾಪ್ತಿಗೆ ಸೇರಿರುತ್ತವೆ, ಆದರೆ ಅವುಗಳನ್ನು ಕೈಕೊಳ್ಳುವಾಗ ಅವನ ಮನೋಭಾವ ಬಹಳ ಭಿನ್ನವಾಗಿರಲೇಬೇಕು ಮತ್ತು ಆ ಮನೋಭಾವವೇ ತನ್ನ ಪ್ರಭಾವದ ಮೂಲಕ ತನ್ನ ಮಟ್ಟಕ್ಕೆ ಜನರನ್ನು ಎಳೆದು ತರುವುದಕ್ಕೆ ಶ್ರೇಷ್ಠ ಆಕರ್ಷಣೆಯಾಗುತ್ತದೆ ಮತ್ತು ಜನಜಂಗುಳಿಯ ಉಚ್ಚತರ ಆರೋಹಣದಲ್ಲಿ ಅವರನ್ನು ಮೇಲಕ್ಕೆತ್ತಲು ಶ್ರೇಷ್ಠ ಸನ್ನೆಯಾಗುತ್ತದೆ.

ಭಗವಂತ ತನ್ನದೇ ಉದಾಹರಣೆ ಕೊಡುತ್ತಿರುವುದು ಗಾಢವಾಗಿ ಅರ್ಥಪೂರ್ಣವಾಗಿದೆ, ಏಕೆಂದರೆ ದೈವೀ ಕಾರ್ಯಗಳನ್ನು ಕುರಿತು ಗೀತೆಯ ತತ್ವಜ್ಞಾನದ ಸಂಪೂರ್ಣ ಆಧಾರವನ್ನು ಅದು ತೆರೆದು ತೋರಿಸುತ್ತದೆ. ದೈವೀ ಸ್ವಭಾವದಲ್ಲಿ ತನ್ನನ್ನು ಘನತೆಗೇರಿಸಿಕೊಂಡವನು ಮುಕ್ತ ಮನುಷ್ಯ ಮತ್ತು ಆ ದೈವೀ ಸ್ವಭಾವಕ್ಕನುಸಾರವಾಗಿ ಅವನ ಕ್ರಿಯೆಗಳಿರಬೇಕು. ಆದರೆ ದೈವೀ ಸ್ವಭಾವವೆಂದರೇನು? ಅದು ಇಡಿಯಾಗಿ ಏಕಮೇವವಾಗಿ ಅಚಲ, ನಿಷ್ಕ್ರಿಯ, ಅವೈಯಕ್ತಿಕ ಆತ್ಮನಾದ ಅಕ್ಷರ ಪುರುಷನದಲ್ಲ, ಏಕೆಂದರೆ ಅದೇ ಸ್ವತಃ ಮುಕ್ತಪುರುಷನನ್ನು ಕ್ರಿಯಾರಹಿತ ನಿಶ್ಚಲತೆಯತ್ತ ಕೊಂಡೊಯ್ಯುತ್ತದೆ. ಅದು ಸ್ವಭಾವಕ್ಕನುಗುಣವಾಗಿ ಅನೇಕತೆಯಿಂದ ಕೂಡಿದ, ವೈಯಕ್ತಿಕವಾದ, ಪ್ರಕೃತಿಗೆ ಸ್ವ-ಇಚ್ಛೆಯಿಂದ ಅಧೀನವಾದ ಕ್ಷರಪುರುಷನದಲ್ಲ. ಅದು ಇವೆರಡನ್ನೂ ಒಟ್ಟಿಗೆ ಹಿಡಿದುಕೊಂಡಿರುವ ಪುರುಷೋತ್ತಮನ ಸ್ವಭಾವ ಮತ್ತು ಅವನ ಪರಮೋಚ್ಚ ದೈವತ್ವದ ಮೂಲಕ ಅವನು ಅವೆರಡರಲ್ಲಿ ಸಾಮರಸ್ಯ ಉಂಟು ಮಾಡುತ್ತಾನೆ, ಅದು ಅವನ ಸತ್ತೆಯ ಅತ್ಯುಚ್ಚ ರಹಸ್ಯ, 'ರಹಸ್ಯಮ್ ಹೇತದ್ ಉತ್ತಮಮ್.' ಪ್ರಕೃತಿಯಲ್ಲಿ ತೊಡಗಿಸಿಕೊಂಡ ನಮ್ಮ ವೈಯಕ್ತಿಕ ಕ್ರಿಯೆಯ ಅರ್ಥದಲ್ಲಿ ಅವನು ಕಾರ್ಯಗಳನ್ನು ಕೈಕೊಳ್ಳುವವನಲ್ಲ, ಏಕೆಂದರೆ ಭಗವಂತ ತನ್ನ ಸಾಮರ್ಥ್ಯ, ಪ್ರಜ್ಞಾಪೂರ್ಣ ಸ್ವರೂಪ ಹಾಗೂ ಪರಿಣಾಮಕಾರಿ ಶಕ್ತಿ ('ಶಕ್ತಿ, ಮಾಯಾ ಹಾಗೂ ಪ್ರಕೃತಿ)ಗಳ ಮೂಲಕ ಕಾರ್ಯಮಾಡುತ್ತಾನೆ, ಆದಾಗ್ಯೂ ಅವೆಲ್ಲವುಗಳ ಮೇಲಿರುತ್ತಾನೆ, ಅದರಲ್ಲಿ ತೊಡಗಿಸಿಕೊಂಡಿರುವುದಿಲ್ಲ, ಅದಕ್ಕೆ ಅಧೀನನಾಗಿರುವುದಿಲ್ಲ; ನಿಯಮಗಳು, ಕಾರ್ಯಗತಿಗಳು, ಅವು ಸೃಷ್ಟಿಸುವ ರೂಢಿಗಳು ಇವುಗಳಿಂದ ತನ್ನನ್ನು ಮೇಲಕ್ಕೆತ್ತಿಕೊಳ್ಳಲು ಅಸಮರ್ಥನಾಗಿರುವುದಿಲ್ಲ, ಅವುಗಳಿಂದ ಪರಿಣಾಮಕ್ಕೆ ಇಲ್ಲವೆ ಬಂಧನಕ್ಕೆ ಒಳಗಾಗುವುದಿಲ್ಲ; ನಾವು ಜೀವನದ, ಮನಸ್ಸಿನ, ಹಾಗೂ

ದೇಹದ ಕಾರ್ಯಗತಿಗಳಿಂದ ಭಿನ್ನರಾಗಿರಲು ಅಶಕ್ತರಾಗಿರುವ ಹಾಗೆ ಅವನು ಅವುಗಳಿಂದ ಭಿನ್ನನಾಗಿರಲು ಅಶಕ್ತನಾಗಿರುವುದಿಲ್ಲ. ಅವನು ಕಾರ್ಯಮಾಡುತ್ತಿದ್ದರೂ ಮಾಡದೆ ಇರುತ್ತಾನೆ, 'ಕರ್ತಾರಮ್ ಅಕರ್ತಾರಮ್.' ''ನಾಲ್ಕು ಬ ಗೆಯ ನಿಯಮವಿರುವ ಮಾನವ ಕಾರ್ಯಗತಿಗಳಿರುವ ಇದನ್ನು ಮಾಡುವವನು ನಾನೆಂದು ತಿಳಿದುಕೋ, ಹಾಗಿದ್ದರೂ ನಾನು ಅವಿನಾಶಿ ಅಕರ್ತಾರನಾಗಿರುತ್ತೇನೆ. ಕಾರ್ಯಗಳು ನನ್ನ ಮೇಲೆ ಸ್ಥಿರಗೊಳ್ಳುವುದಿಲ್ಲ (ನ ಲಿಂಪಂತಿ) ಹಾಗೂ ಕ್ರಿಯೆಯ ಫಲ ಕುರಿತು ನನ್ನಲ್ಲಿ ಆಸೆಯಿರುವುದಿಲ್ಲ.'' ಆದರೆ ಅವನು ನಿಷ್ಕ್ರಿಯ, ಭಾವಶೂನ್ಯ, ಅಪಾರ ಸಾಮರ್ಥ್ಯ ಇಲ್ಲದೆ ಇರುವ ಸಾಕ್ಷಿಯಷ್ಟೇ ಬೇರೇನೂ ಅಲ್ಲ ಎಂಬಂತೆಯೂ ಇಲ್ಲ. ಏಕೆಂದರೆ ತನ್ನ ಸಾಮರ್ಥ್ಯದ ಕ್ರಮದಲ್ಲಿ , ಪ್ರಮಾಣದಲ್ಲಿ ಕಾರ್ಯಮಾಡುವವನು ಅವನೇ, ರೂಪುಗೊಳ್ಳುವ ಸತ್ತೆಗಳಿರುವ ಜಗತ್ತಿನ ಪ್ರತಿಯೊಂದು ಚಲನೆ, ಪ್ರತಿಯೊಂದು ಕಣ ಅವನ ಸಾನ್ನಿಧ್ಯದ ವ್ಯಾಪ್ತಿಗೊಳಗಾಗಿದೆ, ಅವನ ಪ್ರಜ್ಞೆಯಿಂದ ತುಂಬಿಕೊಂಡಿದೆ, ಅವನ ಸಂಕಲ್ಪದಿಂದ ಪ್ರಚೋದನೆಗೊಳಗಾಗಿದೆ, ಅವನ ಜ್ಞಾನದಿಂದ ಆಕಾರ ಪಡೆದಿದೆ.

ಅಲ್ಲದೆ ಅವನು ಪರಮೋಚ್ಚನಾದವ, ಗುಣರಹಿತ, ಎಲ್ಲ ಗುಣಗಳನ್ನು ತನ್ನ ವಶದಲ್ಲಿ ಇಟ್ಟುಕೊಂಡವ, ಉಪನಿಷತ್ತು ಹೇಳುವಂತೆ 'ನಿರ್ಗುಣೋ ಗುಣಿ'. ಅವನು ಯಾವುದೇ ಬಗೆಯ ಸ್ವಭಾವ ಇಲ್ಲವೆ ಕ್ರಿಯೆಯ ವಿಧಾನದಿಂದ ಬಂಧಿತನಾಗಿರುವುದಿಲ್ಲ ಇಲ್ಲವೆ ನಮ್ಮ ವ್ಯಕ್ತಿತ್ವ ವು ಸ್ವಭಾವದ ವಿಧಾನಗಳ, ಹಾಗೂ ಮಾನಸಿಕ, ನೈತಿಕ, ಭಾವನಾತ್ಮಕ, ಪ್ರಾಣಿಕ, ಭೌತಿಕ ಸತ್ತೆಯ ವಿಶಿಷ್ಟ ಕಾರ್ಯಾಚರಣೆಗಳ ಮೊತ್ತವನ್ನು ಒಳಗೊಂಡಿರುವ ರೀತಿಯಲ್ಲಿ ಅವನು ಅದನ್ನು ಒಳಗೊಂಡಿರುವುದಿಲ್ಲ. ಆದರೆ ಅವನು ಎಲ್ಲ ವಿಧಾನಗಳ ಹಾಗೂ ಗುಣಗಳ ಮೂಲ, ಅವನು ಸಂಕಲ್ಪಿಸಿದರೆ ಅವುಗಳಲ್ಲಿ ಯಾವುದನ್ನಾದರೂ ಅಭಿವೃದ್ಧಿಗೊಳಿಸಬಲ್ಲ, ಆ ಅಭಿವೃದ್ಧಿಯನ್ನು ಸಂಕಲ್ಪಿಸಿದ ರೀತಿಯಲ್ಲಿ ಯಾವುದೇ ಮಟ್ಟದವರೆಗೆ ಹೆಚ್ಚಿಸಬಲ್ಲ ; ಅವನು ಅನಂತ ಸತ್ತೆ, ಅವುಗಳೆಲ್ಲ ಅವನ ಸಂಭೂತಿಗಳಲ್ಲಿ ಕಾಣಿಸಿಕೊಂಡ ರೀತಿಗಳು, ಅವನದು ಅಳತೆ ಮಾಡಲಾಗದ ಗಾತ್ರ, ನಿರ್ಬಂಧಕ್ಕೊಳಗಾಗದು, ವರ್ಣನಾತೀತವಾದದ್ದು , ಅವು ಅದರ ಅಳತೆಗಳು, ಸಂಖ್ಯೆಗಳು ಮತ್ತು ಆಕೃತಿಗಳಾಗಿದ್ದರ ಜಗತ್ತಿನ ಮಾನದಂಡದಲ್ಲಿ ಛಂದೋಬದ್ಧವಾಗುತ್ತವೆ, ಲೆಕ್ಕಕ್ಕೆ ಒಳಪಡುತ್ತವೆ. ಆದಾಗ್ಯೂ ಅವನು ಕೇವಲ ಅವ್ಯೈಯಕ್ತಿಕ, ಅನಿರ್ಧಾರಕನಾದವನಲ್ಲ , ಇಲ್ಲವೆ ಎಲ್ಲ ನಿರ್ಧಾರಕಗಳು, ವ್ಯಕ್ತೀಕರಣಗಳು ತಮ್ಮ ಮೂಲದ್ರವ್ಯವನ್ನು ಎಳೆದುಕೊಳ್ಳಲು



ಬೇಕಾದ ಪ್ರಜ್ಞಾಪೂರ್ಣ ಅಸ್ತಿತ್ವದ ಮೂಲಸಾಮಗ್ರಿ ಮಾತ್ರವಲ್ಲ , ಆದರೆ ಅವನದು ಪರಮೋಚ್ಚ ದೈವೀ ಸತ್ತೆ, ಏಕೈಕವಾದ ಮೂಲ ಪ್ರಜ್ಞಾಪೂರ್ಣ ದೈವೀ ಅಸ್ತಿತ್ವ , ಪರಿಪೂರ್ಣ ದೈವೀ ಪುರುಷ, ಎಲ್ಲ ಸಂಬಂಧಗಳನ್ನು ಹೊಂದುವ ಕ್ಷಮತೆಯುಳ್ಳದ್ದು , ಆ ಸಂಬಂಧ ಮಾನವನೊಡನೆ ಮೂರ್ತಸ್ವರೂಪದ್ದು ಹಾಗೂ ನಿಕಟವಾದದ್ದು ಕೂಡ ಆಗಿರುತ್ತದೆ, ಏಕೆಂದರೆ ಆ ದೈವೀಪುರುಷನು ಮಿತ್ರ, ಸಹಯೋಗಿ, ಪ್ರೇಮಿ, ಆಟದ ಸಂಗಾತಿ, ಮಾರ್ಗದರ್ಶಕ, ಬೋಧಕ, ಗುರು, ಜ್ಞಾನ ಇಲ್ಲವೆ ಸಂತೋಷವನ್ನು ಒದಗಿಸುವವ ಆಗಿರುತ್ತಾನೆ, ಆದಾಗ್ಯೂ ಅವನು ಎಲ್ಲ ಸಂಬಂಧಗಳಲ್ಲಿ ನಿರ್ಬಂಧವಿಲ್ಲದವ, ಮುಕ್ತ ಮತ್ತು ನಿರಂಕುಶನಾದವನು. ದೈವೀಕರಣ ಹೊಂದಿದ ಮನುಷ್ಯ ತನ್ನ ಸಿದ್ಧಿಗನುಗುಣವಾಗಿ ಇದನ್ನೆಲ್ಲ ಮೈಗೂಡಿಸಿಕೊಳ್ಳುವನು, ತನ್ನ ವೈಯಕ್ತಿಕತೆಯಲ್ಲಿ ಅವೈಯಕ್ತಿಕನಾಗಿರುವನು, ಗುಣ ಇಲ್ಲವೆ ಕ್ರಿಯೆ ಅವನಿಗೆ ಬಂಧನಕಾರಕವಾಗುವುದಿಲ್ಲ , ಜನರೊಡನೆ ಅತ್ಯಂತ ನಿಕಟ ಸಂಬಂಧವನ್ನು ಉಳಿಸಿಕೊಂಡಿದ್ದಾಗಲೂ ಕೂಡ ಗುಣ ಇಲ್ಲವೆ ಕ್ರಿಯೆಯಿಂದ ನಿರ್ಬಂಧಿತನಾಗಿರುವುದಿಲ್ಲ, ಈ ಅಥವಾ ಆ ಧರ್ಮವನ್ನು ತೋರಿಕೆಯಲ್ಲಿ ಅನುಸರಿಸುತ್ತಿದ್ದಾಗಲೂ ಕೂಡ ಯಾವುದೇ ಧರ್ಮದ ಬಂಧನಕ್ಕೊಳಗಾಗುವುದಿಲ್ಲ. ಅವಿರತ ಚಲನೆಯಲ್ಲಿರುವ ಮನುಷ್ಯನ ಚಲನಶೀಲತೆ, ಇಲ್ಲವೆ ತಪಸ್ವಿಯ ಅಥವಾ ನಿಷ್ಕ್ರಿಯವಾದಿಯ ನಿಷ್ಕ್ರಿಯ ಪ್ರಕಾಶ, ಕ್ರಿಯೆಯಲ್ಲಿ ಆಸಕ್ತಿಯುಳ್ಳವನ ಭಾವೋದ್ವೇಗದ ವ್ಯಕ್ತಿತ್ವ, ತತ್ವಜ್ಞಾನಿ ಋಷಿಯ ಉದಾಸೀನ ಅವ್ಯೈಯಕ್ತಿಕತೆ ಇವುಗಳಲ್ಲಾವುದೂ ದೈವೀ ಆದರ್ಶವಲ್ಲ. ಜಗತ್ತಿನ ವ್ಯಾಪಾರಗಳಲ್ಲಿ ಆಸಕ್ತಿಯುಳ್ಳ ಮನುಷ್ಯ ಮತ್ತು ತಪಸ್ವಿ ಅಥವಾ ನಿಷ್ಕ್ರಿಯವಾದಿ ಇವರ ನಡುವೆ ಮೇಲೆ ಹೇಳಿದ ಎರಡು ವಿರೋಧೀ ಮಾನದಂಡಗಳಿವೆ, ಅವರಲ್ಲಿ ಒಬ್ಬನು 'ಕ್ಷರ'ದ ಕ್ರಿಯೆಯಲ್ಲಿ ಮಗ್ನನಾದವನು, ಇನ್ನೊಬ್ಬ 'ಅಕ್ಷರ'ದ ಶಾಂತಿಯಲ್ಲಿ ಇಡಿಯಾಗಿ ವಾಸಿಸಲು ಹೆಣಗುವವನು. ಆದರೆ ಸಂಪೂರ್ಣ ದೈವೀ ಆದರ್ಶ ಪುರುಷೋತ್ತಮನ ಸ್ವಭಾವದಿಂದ ಸಾಗಿ ಹೋಗುತ್ತದೆ, ಅದು ಈ ವಿರೋಧಕ್ಕೆ ಅತೀತವಾಗಿರುತ್ತದೆ ಮತ್ತು ಎಲ್ಲ ದೈವೀ ಸಾಧ್ಯತೆಗಳಲ್ಲಿ ರಾಜಿ ಉಂಟು ಮಾಡುತ್ತದೆ.

ಅವಿರತ ಚಲನೆಯಲ್ಲಿರುವ ಮನುಷ್ಯ, ವಿಶ್ವಂಭರ ಸ್ವಭಾವದ ಮೂರು ಗುಣಗಳ ಲೀಲೆ, ಮನಸ್ಸಿನ, ಹೃದಯದ ಹಾಗೂ ದೇಹದ ಈ ಮಾನವ ಚಟುವಟಿಕೆ ಇವುಗಳ ನೆರವೇರಿಕೆಯ ಮೇಲೆ ಅವಲಂಬಿಸಿರದ ಯಾವುದೇ ಆದರ್ಶದೊಂದಿಗೆ, ತೃಪ್ತಿ ಕಂಡುಕೊಳ್ಳುವುದಿಲ್ಲ. ಆ ಚಟುವಟಿಕೆಯ ಅತ್ಯುಚ್ಚ ನೆರವೇರಿಕೆಯೆಂದರೆ ಮಾನವ

ಪರಿಪೂರ್ಣತೆಯನ್ನು ಮಾನವನಲ್ಲಿರುವ ದೈವೀ ಸಾಧ್ಯತೆಯನ್ನು ಕುರಿತು ನನ್ನ ವಿಚಾರವಿದೆ ಎಂದು ಅವನು ಹೇಳಬಹುದು; ಬುದ್ಧಿಯನ್ನು, ಹೃದಯವನ್ನು, ನೈತಿಕ ಸತ್ತೆಯನ್ನು ತೃಪ್ತಿಗೊಳಿಸುವ ಯಾವುದೋ ಆದರ್ಶ, ತನ್ನ ಕ್ರಿಯೆಯಲ್ಲಿ ನಮ್ಮ ಮಾನವ ಸ್ವಭಾವದ ಯಾವುದೋ ಒಂದು ಆದರ್ಶ ಇವು ಮಾತ್ರ ಮಾನವ ಸತ್ತೆಯನ್ನು ತೃಪ್ತಿಪಡಿಸಬಹುದು. ಮನಸ್ಸು, ಪ್ರಾಣ ಹಾಗೂ ದೇಹಗಳ ಕಾರ್ಯಗತಿಗಳಲ್ಲಿ ಅವನು ಅರಸಬಹುದಾದ ಏನೋ ಒಂದಿರಬೇಕು. ಏಕೆಂದರೆ ಅದು ಅವನ ಸ್ವಭಾವ, ಅವನ ಧರ್ಮ ಮತ್ತು ಅವನ ಸ್ವಭಾವದ ಹೊರಗಿರುವುದರಲ್ಲಿ ಅವನು ನೆರವೇರಿಕೆ ಕಂಡುಕೊಳ್ಳುವುದು ಹೇಗೆ? ಏಕೆಂದರೆ ಅವನ ಸ್ವಭಾವಕ್ಕೆ ಪ್ರತಿಯೊಂದೂ ಬಂಧನಕ್ಕೊಳಗಾಗಿದೆ ಮತ್ತು ಅದು ತನ್ನೊಳಗೆ ಪರಿಪೂರ್ಣತೆಯನ್ನು ಅರಸಬೇಕು. ನಮ್ಮ ಮಾನವ ಸ್ವಭಾವಕ್ಕನುಗುಣವಾಗಿ ನಮ್ಮ ಮಾನವ ಪರಿಪೂರ್ಣತೆ ಇರುತ್ತದೆ ಮತ್ತು ಪ್ರತಿಯೊಬ್ಬ ಮನುಷ್ಯ ತನ್ನ ವ್ಯಕ್ತಿವಿಶಿಷ್ಟತೆಗೆ (ಸ್ವ-ಧರ್ಮಕ್ಕೆ) ಸರಿಹೋಗುವಂತಹ ರೀತಿಯಲ್ಲಿ ಅದಕ್ಕಾಗಿ ಶ್ರಮಿಸಬೇಕು, ಆದರೆ ಜೀವನದಲ್ಲಿ, ಕ್ರಿಯೆಯಲ್ಲಿ ಅದನ್ನು ಕೈಕೊಳ್ಳಬೇಕು, ಜೀವನ ಹಾಗೂ ಕ್ರಿಯೆಗಳ ಹೊರಗಲ್ಲ. ಹೌದು ಅದರಲ್ಲಿ ಸತ್ಯವಿದೆ ಎಂದು ಗೀತೆ ಹೇಳುತ್ತದೆ. ಮನುಷ್ಯನಲ್ಲಿ ಭಗವಂತನ ನೆರವೇರಿಕೆ, ಜೀವನದಲ್ಲಿ ಅವನ ನೆರವೇರಿಕೆ ಆ ಆದರ್ಶ ಪರಿಪೂರ್ಣತೆಯ ಒಂದು ಭಾಗ. ಆದರೆ ಅದನ್ನು ನೀವು ಕೇವಲ ಬಾಹ್ಯದಲ್ಲಿ, ಜೀವನದಲ್ಲಿ, ಕ್ರಿಯೆಯ ತತ್ವದಲ್ಲಿ ಅರಸಿದರೆ ಎಂದಿಗೂ ಕಂಡುಕೊಳ್ಳಲಾರಿರಿ. ಏಕೆಂದರೆ ನೀವು ಆಗ ಕೇವಲ ನಿಮ್ಮ ಸ್ವಭಾವದ ಪ್ರಕಾರ ಕಾರ್ಯ ಮಾಡುತ್ತೀರಿ, ಅದು ಪರಿಪೂರ್ಣತೆಗಾಗಿ ತನ್ನಲ್ಲೇ ಒಂದು ನಿಯಮ, ಆದರೆ ಅದರ ಜೊತೆಗೆ-ಇದು ಅಪರಿಪೂರ್ಣತೆಯ ಒಂದು ನಿಯಮ-ಅದರ ವಿಧಾನಗಳಿಗೆ, ದ್ವಂದ್ವಗಳಾದ ಇಷ್ಟಾನಿಷ್ಟಗಳು, ಸುಖ-ದುಃಖಗಳು ಮತ್ತು ವಿಶೇಷವಾಗಿ ಆಸೆಯ ತತ್ವದೊಂದಿಗಿರುವ ವಿಧಾನ ಹಾಗೂ ಅದರ ಕಡುಕೋಪ, ದುಃಖ ಹಾಗೂ ಹಂಬಲ ಇವೆಲ್ಲವುಗಳ ಪಾಶಕ್ಕೆ ನೀವು ಸತತ ಅಧೀನರಾಗಿರುತ್ತೀರಿ-ತಳಮಳ, ಎಲ್ಲವನ್ನೂ ನುಂಗಿ ಹಾಕುವ ಆಸೆಯ ತತ್ವ, ಹಾಗೂ ತಣಿಸಲಾಗದ ಅಗ್ನಿ ಆದ ಅದು ಜಗತ್ತಿನಲ್ಲಿ ನಿಮ್ಮ ಕಾರ್ಯದ ಮೇಲೆ ಮುತ್ತಿಗೆ ಹಾಕುತ್ತದೆ, ಜ್ಞಾನದ ಚಿರಕಾಲ ವೈರಿಯಾದ ಅದು ನಿಮ್ಮ ಸ್ವಭಾವದ ಮೇಲೆ ಮುಸುಕನ್ನು ಎಳೆಯುತ್ತದೆ. ಅದು ಅಗ್ನಿಯನ್ನು ಹೊಗೆ, ಕನ್ನಡಿಯನ್ನು ಧೂಳು ಮುಚ್ಚಿದ ಹಾಗಿರುತ್ತದೆ. ಆತ್ಮದ ಸ್ಥಿರ, ಸ್ಪಷ್ಟ, ಪ್ರಕಾಶಮಯ ಸತ್ಯದಲ್ಲಿ ಜೀವಿಸುವುದಕ್ಕಾಗಿ ನೀವು ಅದನ್ನು ಸಂಹಾರ ಮಾಡಬೇಕಾಗುತ್ತದೆ. ಇಂದ್ರಿಯಗಳು,



ಮನಸ್ಸು, ಮತ್ತು ಬುದ್ಧಿ ಇವು ಅಪರಿಪೂರ್ಣತೆಗೆ ಚಿರಕಾಲ ಆಸನ ಒದಗಿಸುತ್ತವೆ, ಆದಾಗ್ಯೂ ಈ ಇಂದ್ರಿಯ, ಮನಸ್ಸು ಹಾಗೂ ಬುದ್ಧಿ, ನಿಮ್ನತರ ಸ್ವಭಾವದ ಲೀಲೆ ಇವುಗಳೊಳಗೆ ಪರಿಪೂರ್ಣತೆಗಾಗಿ ನೀವು ಕೈಕೊಳ್ಳುವ ಶೋಧವನ್ನು ಮಿತಿಗೊಳಪಡಿಸುತ್ತೀರಿ ! ಆ ಪ್ರಯತ್ನ ವ್ಯರ್ಥ್ಯ. ನಿಮ್ಮ ಸ್ವಭಾವದ ಚಲನಶೀಲ ಭಾಗವು ನೈಷ್ಕರ್ಮ್ಯವನ್ನು ಜೊತೆಗೆ ಕೂಡಿಸಿಕೊಳ್ಳುವುದನ್ನು ಅರಸಬೇಕು ; ಈ ನಿಮ್ನತರ ಸ್ವಭಾವದಾಚೆಗೆ ಮೂರು ಗುಣಗಳ ಮೇಲಿರುವ, ಆತ್ಮದ ಉಚ್ಚತರ ತತ್ವದ ಮೇಲೆ ಸ್ಥಾಪಿತವಾದುದರತ್ತ ನಿಮ್ಮನ್ನು ನೀವು ಮೇಲಕ್ಕೆತ್ತರಿಸಿಕೊಳ್ಳಬೇಕು. ನಿಮ್ಮ ಆತ್ಮದ ಶಾಂತಿಯನ್ನು ಸಿದ್ಧಿಸಿಕೊಂಡಾಗ ಮಾತ್ರ ಮುಕ್ತ ಹಾಗೂ ದೈವಿಕವಾದ ಕ್ರಿಯೆಯನ್ನು ಕೈಕೊಳ್ಳಲು ನೀವು ಸಮರ್ಥರಾಗುತ್ತೀರಿ.

ನೈಷ್ಕರ್ಮ್ಯವಾದಿ ಸನ್ಯಾಸಿ ಇನ್ನೊಂದೆಡೆಗೆ ಜೀವನ ಹಾಗೂ ಕ್ರಿಯೆ ಪ್ರವೇಶಿಸುವಲ್ಲಿ ಪರಿಪೂರ್ಣತೆಯ ಸಾಧ್ಯತೆಯನ್ನು ಕಾಣುವುದಿಲ್ಲ. ಅವು ಬಂಧನಕ್ಕೆ ಹಾಗೂ ಅಪರಿಪೂರ್ಣತೆಗೆ ಸ್ಥಾನ ಮಾಡಿಕೊಡುತ್ತವೆ ಅಲ್ಲವೆ ? ಎಲ್ಲ ಕಾರ್ಯ ಅದರ ಸ್ವರೂಪದಲ್ಲಿ ಅಪರಿಪೂರ್ಣ ಆಗಿರುತ್ತದೆಯಲ್ಲವೆ? ಹೊಗೆಯನ್ನು ಹುಟ್ಟಿಸುವ ಬೆಂಕಿಯ ಹಾಗೆ ಕ್ರಿಯೆಯ ತತ್ವವೇ ಸ್ವತಃ ರಾಜಸಿಕವಾಗಿರುವುದಿಲ್ಲವೆ? ಕ್ರಿಯೆ ಆಸೆಯ ತಂದೆ, ಜ್ಞಾನವನ್ನು ಮಬ್ಬಾಗಿಸುವ ಪರಿಣಾಮವನ್ನುಂಟುಮಾಡುವ ಕಾರಣ ; ಹಂಬಲ, ಯಶಸ್ಸು ಹಾಗೂ ವಿಫಲತೆಗಳಲ್ಲಿ ಸುತ್ತು ಹೊಡೆಸುವಂತಹದು, ಅದರ ಸುಖ-ದುಃಖಗಳ ತೂಗಾಟ ಹಾಗೂ ಸದ್ಗುಣ-ಪಾಪಗಳ ದ್ವಂದ್ವ ಇರುವುದಲ್ಲವೆ? ದೇವರು ಜಗತ್ತಿನಲ್ಲಿರಬಹುದು, ಆದರೆ ಅವನು ಜಗತ್ತಿಗೆ ಸೇರಿದವನಲ್ಲ, ಅವನು ಸನ್ಯಾಸದ ದೇವರು, ಆದರೆ ಕರ್ಮಗಳ ದೈವೀಪ್ರಭು ಇಲ್ಲವೆ ಕಾರಣನಾಗಿರುವುದಿಲ್ಲ, ನಮ್ಮ ಕರ್ಮಗಳ ಪ್ರಭು ಆಸೆ, ಮತ್ತು ಕರ್ಮಗಳಿಗೆ ಕಾರಣ ಅಜ್ಞಾನ. ಕ್ಷರವಾಗಿರುವ ಜಗತ್ತು ಒಂದು ರೂಪದಲ್ಲಿ ಭಗವಂತನ ಲೀಲೆಯ ಪ್ರಕಟಣೆಯಾಗಿದೆ, ಅದು ಪ್ರಕೃತಿಯ ಅಜ್ಞಾನದೊಂದಿಗೆ ಅಪರಿಪೂರ್ಣ ಲೀಲೆ, ಅದು ಪ್ರಕಟಣೆಗಿಂತ ಹೆಚ್ಚಾಗಿ ಮಬ್ಬುಗೊಳಿಸುವುದಾಗಿದೆ. ಜಗತ್ತಿನ ಸ್ವರೂಪದತ್ತ ನಮ್ಮ ಮೊದಲನೋಟ ಬೀರಿದಾಗ ಅದು ನಿಶ್ಚಿತವಾಗಿ ಸ್ಪಷ್ಟವಾಗಿದೆ ; ಜಗತ್ತಿನ ಪೂರ್ತಿ ಅನುಭವ ನಮಗೆ ಯಾವಾಗಲೂ ಅದನ್ನೇ ಕಲಿಸಿಕೊಡುವುದಿಲ್ಲವೆ? ಆಸೆಯ ಹಾಗೂ ಕ್ರಿಯೆಯ ಪ್ರಚೋದನೆಯಿಂದ, ಕೊನೆಗೆ ಅವು ಮುಗಿದು ಹೋಗುವವರೆಗೆ, ಇಲ್ಲವೆ ಅವುಗಳನ್ನು ಎಸೆದುಬಿಡುವವರೆಗೆ, ಆತ್ಮವು ಸತತ ಜನ್ಮತಾಳುವಂತೆ ಅದನ್ನು ಬಂಧನಕ್ಕೀಡು ಮಾಡುವ

ಅಜ್ಞಾನದ ಚಕ್ರ ಅದಲ್ಲವೆ? ಆಸೆಯನ್ನಷ್ಟೇ ಅಲ್ಲ , ಆದರೆ ಕ್ರಿಯೆಯನ್ನೂ ಕೂಡ ಎಸೆದು ಬಿಡಬೇಕು; ನಿಶ್ಚಲನೀರವತೆಯಲ್ಲಿ ಆಸೀನವಾದ ಆತ್ಮ ನಿಶ್ಚಲ, ಕ್ರಿಯಾರಹಿತ, ಕ್ಷೋಭೆರಹಿತ ಬ್ರಹ್ಮನ್‌ನಲ್ಲಿ ಸಾಗಿಹೋಗುವುದು. ಅವೈಯಕ್ತೀಕರಣಗೊಳಿಸುವ ನೈಷ್ಕರ್ಮ್ಯವಾದಿಯ ಆಕ್ಷೇಪಣೆಗೆ ಗೀತೆ ಲೌಕಿಕ, ಚಲನಶೀಲ ಮನುಷ್ಯನಿಗೆ ತಿಳಿಸಿಕೊಡುವುದಕ್ಕಿಂತಲೂ ಹೆಚ್ಚಿನ ಶ್ರಮವಹಿಸಿ ಉತ್ತರ ನೀಡುತ್ತದೆ. ಈ ನೈಷ್ಕರ್ಮ್ಯ ಸಿದ್ಧಾಂತಕ್ಕೆ ಹೆಚ್ಚು ಸಾಮರ್ಥ್ಯವುಳ್ಳ ಉಚ್ಚತರ ಸತ್ಯವನ್ನು ಕುರಿತು ಹೆಚ್ಚಿನ ಹಿಡಿತವಿದೆ, ಆದರೆ ಈ ಸತ್ಯ ಇನ್ನೂ ಅತ್ಯುನ್ನತ ಇಡೀ ಸತ್ಯವಲ್ಲ , ಮಾನವ ಕುಲವನ್ನು ಅದರ ಗುರಿಯತ್ತ ಮುನ್ನಡೆಸುವುದಕ್ಕೆ, ಪ್ರತ್ಯೇಕವಾದ ಲೌಕಿಕದ ಚಲನಶೀಲತೆಯ ದೋಷಕ್ಕಿಂತ ನೈಷ್ಕರ್ಮ್ಯ ಸಿದ್ಧಾಂತವನ್ನು ವಿಶ್ವಂಭರ, ಸಂಪೂರ್ಣ, ಮಾನವ ಜೀವನದ ಅತ್ಯುಚ್ಚ ಆದರ್ಶ ಎಂದು ಪ್ರಸಾರ ಮಾಡುವುದು ಹೆಚ್ಚು ಗೊಂದಲದ್ದು , ವಿಪತ್ಕಾರಕವಾದದ್ದು ಆಗುವುದು. ಏಕಮುಖವಾದ, ಬಲವತ್ತರವಾದ ಸತ್ಯವನ್ನು ಅದೇ ಇಡೀ ಸತ್ಯವೆಂದು ಮುಂದಿಡುವುದು ಹೆಚ್ಚಿನ (ಜ್ಞಾನದ) ಪ್ರಕಾಶವನ್ನು ಸೃಷ್ಟಿ ಮಾಡುವುದು, ಆದರೆ ಹಾಗೆಯೇ ಅದು ಬಲವತ್ತರವಾದ ಗೊಂದಲವನ್ನೂ ಉಂಟು ಮಾಡುವುದು, ಏಕೆಂದರೆ ಸತ್ಯದ ಬಲವತ್ತರವಾದ ಅಂಶವೇ ದೋಷದಲ್ಲಿರುವ ಅಂಶದ ಬಲವನ್ನು ಹೆಚ್ಚಿಸುತ್ತದೆ. ಲೌಕಿಕರ ಚಲನಶೀಲತೆಯ ದೋಷವು ಅಜ್ಞಾನವನ್ನು ಮುಂದೂಡುತ್ತ ಹೋಗಬಹುದು ಮತ್ತು ಪರಿಪೂರ್ಣತೆಯನ್ನು ಕಂಡುಕೊಳ್ಳಲಾಗದು-ದರಲ್ಲಿ ಅದನ್ನು ಶೋಧಿಸಲು ತೊಡಗುವುದರ ಮೂಲಕ ಮೂನವ ಜನಾಂಗದ ಮುನ್ನಡೆಗೆ ಹಿನ್ನಡೆ ಉಂಟುಮಾಡಬಹುದು. ಆದರೆ ನೈಷ್ಕರ್ಮ್ಯ ಸಿದ್ಧಾಂತದ ಆದರ್ಶದಲ್ಲಿರುವ ದೋಷ ಅದರ ತತ್ವದಲ್ಲಿ ಜಗತ್ತಿನ ನಾಶಮಾಡುವ ತತ್ವವನ್ನಿರಿಸಿಕೊಂಡಿದೆ, ನಾನು ಅದನ್ನನುಸರಿಸಿ ಕಾರ್ಯ ಕೈಕೊಂಡರೆ ಜನರು ನಾಶವಾಗುವರು, ಗೊಂದಲವನ್ನುಂಟು ಮಾಡುವುದಕ್ಕೆ ನಾನು ಕಾರಣನಾಗುವೆನು ಎಂದು ಶ್ರೀಕೃಷ್ಣ ಹೇಳುತ್ತಾನೆ : ಮಾನವ ವ್ಯಕ್ತಿಯೊಬ್ಬನ ದೋಷ, ಅವನು ದೈವೀ ಮನುಷ್ಯನಾಗಿದ್ದಾಗಲೂ ಕೂಡ, ಇಡೀ ಮಾನವ ಜನಾಂಗವನ್ನು ನಾಶಮಾಡಲಾರದು, ವಿಸ್ತಾರವಾಗಿ ಹರಡಿಕೊಳ್ಳುವ ಗೊಂದಲವನ್ನು ಅದು ಉಂಟುಮಾಡಬಲ್ಲದು ; ಆ ಗೊಂದಲವು ಅದರ ಸ್ವರೂಪದಲ್ಲಿ ಮಾನವ ಜೀವನದ ತತ್ವವನ್ನು ನಾಶಮಾಡುವಂತಿರಬಹುದು ಮತ್ತು ನೆಲೆಗೊಂಡು ಮುನ್ನಡೆಯುತ್ತಿದ್ದ ಮಾನವ ಜೀವನಕ್ಕೆ ಕ್ಷೋಭೆಯನ್ನುಂಟು ಮಾಡಬಹುದು.

ಆದ್ದರಿಂದ ಮನುಷ್ಯನಲ್ಲಿರುವ ನೈಷ್ಕರ್ಮ್ಯವಾದಿ ಪ್ರವೃತ್ತಿ ತನ್ನ ಅಪರಿಪೂರ್ಣತೆಯನ್ನು



ಅರಿತುಕೊಳ್ಳುವಂತಾಗಬೇಕು, ಮತ್ತು ಸಮಭಾವದಲ್ಲಿ ಅದರೊಡನಿರುವ ಅವಿರತ ಚಲನಶೀಲ ಪ್ರವೃತ್ತಿಯ ಹಿಂದೆ ಇರುವ ಸತ್ಯವನ್ನು ಒಪ್ಪಿಕೊಳ್ಳಬೇಕು-ಆ ಸತ್ಯವೆಂದರೆ ಭಗವಂತ ಮನುಷ್ಯನಲ್ಲಿ ನೆರವೇರಿಕೆ ಕಂಡುಕೊಳ್ಳುವುದು, ಮಾನವ ಕುಲದ ಎಲ್ಲ ಕ್ರಿಯೆಯಲ್ಲಿ ದೈವೀ ಸಾನ್ನಿಧ್ಯವಿರುವುದು. ಭಗವಂತ ನಿಶ್ಚಲನೀರವತೆಯಲ್ಲಿ ಇರುವನಷ್ಟೇ ಅಲ್ಲ, ಆದರೆ ಅವನು ಕ್ರಿಯೆಯಲ್ಲೂ ಇದ್ದಾನೆ. ಪ್ರಕೃತಿಯ ಪ್ರಭಾವಕ್ಕೊಳಗಾಗದ ಭಾವಶೂನ್ಯ ನೈಷ್ಕರ್ಮ್ಯ ಮತ್ತು ತನ್ನನ್ನು ಪ್ರಕೃತಿಗೆ ಕೊಟ್ಟುಕೊಳ್ಳುವ ಆತ್ಮದ ಅವಿರತ ಚಲನಶೀಲತೆ ಇವುಗಳಿಂದಾಗಿ ವಿಶ್ವಯಜ್ಞ, ಪುರುಷಯಜ್ಞ ಕಾರ್ಯರೂಪಕ್ಕೆ ಬರುತ್ತವೆ; ಇವು ಸತತ ಘರ್ಷಣೆಯಲ್ಲಿರುವ ನೈಜತೆ ಮತ್ತು ಮಿಥ್ಯೆಗಳಲ್ಲ , ಎರಡು ವಿರೋಧೀ ನೈಜತೆಗಳಲ್ಲ , ಒಂದು ಮೇಲ್ಮಟ್ಟದ್ದು ಇನ್ನೊಂದು ಕೆಳಮಟ್ಟದ್ದು ಎಂದಲ್ಲ , ಒಂದು ಇನ್ನೊಂದಕ್ಕೆ ಮಾರಕವಲ್ಲ , ಇವು ದೈವೀ ಪ್ರಕಟಣೆಯ ಜೋಡಿ ಪದಗಳು. ಅವುಗಳ ನೆರವೇರಿಕೆಗೆ ಕೇವಲ 'ಅಕ್ಷರ' ಮಾತ್ರ ಸಾಧನವಲ್ಲ , ಅತ್ಯುಚ್ಚ ರಹಸ್ಯವೂ ಅಲ್ಲ. ಇಲ್ಲಿ ಸರ್ವೋಚ್ಚ ಸತ್ತೆ, ಜಗತ್ತುಗಳ ಪ್ರಭು, ಅವತಾರಿ ಪುರುಷನಾದ ಶ್ರೀಕೃಷ್ಣ ಪ್ರತಿನಿಧಿಸುವ ಪುರುಷೋತ್ತಮನಲ್ಲಿ ಜೋಡಿ ನೆರವೇರಿಕೆಯನ್ನು ರಾಜಿಯನ್ನು ಅರಸಬೇಕು. ತನ್ನ ದೈವೀ ಸ್ವಭಾವದಲ್ಲಿ ಪ್ರವೇಶಿಸುವ ದೈವೀಕರಣಗೊಂಡ ಮನುಷ್ಯ ಶ್ರೀಕೃಷ್ಣನ ಹಾಗೆ ಕಾರ್ಯಕೈಕೊಳ್ಳುತ್ತಾನೆ, ಅವನು ನಿಷ್ಕ್ರಿಯೆಗೆ ತನ್ನನ್ನು ಕೊಟ್ಟುಕೊಳ್ಳುವುದಿಲ್ಲ. ಮನುಷ್ಯನ ಅಜ್ಞಾನದಲ್ಲಿ ಹಾಗೂ ಅವನ ಜ್ಞಾನದಲ್ಲಿ ಭಗವಂತ ಕಾರ್ಯನಿರತನಾಗಿದ್ದಾನೆ. ಅವನನ್ನು ಅರಿತುಕೊಳ್ಳುವುದು ನಮ್ಮ ಆತ್ಮದ ಅತ್ಯುಚ್ಚ ಹಿತರಕ್ಷಣೆಯಾಗಿದೆ, ಮತ್ತು ಅದರ ಪರಿಪೂರ್ಣತೆಗೆ ನಿಬಂಧನೆಯಾಗಿದೆ. ಆದರೆ ಅವನನ್ನು ಅರಿತುಕೊಳ್ಳುವುದು ಮತ್ತು ಸಿದ್ಧಿಸಿಕೊಳ್ಳುವುದಷ್ಟೇ ಎಲ್ಲವೂ ಅಲ್ಲ. ಅರಿತುಕೊಳ್ಳಬೇಕಾದ ರಹಸ್ಯವೆಂದರೆ ಸನಾತನ ಮತ್ತು ಜನ್ಮ ತಾಳದ ಭಗವಂತನ ರಹಸ್ಯ ಮತ್ತು ಭಗವಂತನ ಜನ್ಮ ಹಾಗೂ ಕ್ರಿಯೆಗಳ ರಹಸ್ಯ 'ಜನ್ಮ ಕರ್ಮ ಚ ಮೆ ದಿವ್ಯಮ್', ಆ ಜ್ಞಾನದಿಂದ ಮುಂದುವರಿಯುವ ಕರ್ಮ ಬಂಧನದಿಂದ ಮುಕ್ತವಾಗಿರುತ್ತದೆ. ''ನನ್ನನ್ನು ಹೀಗೆ ತಿಳಿದುಕೊಂಡವನು ಕರ್ಮಗಳಿಂದ ಬಂಧನಕ್ಕೆ ಒಳಗಾಗುವುದಿಲ್ಲ'' ಎಂದು ದಿವ್ಯ ಗುರು ಹೇಳುತ್ತಾನೆ. ಕರ್ಮಗಳ ಕಟ್ಟುಪಾಡುಗಳಿಂದ, ಆಸೆಯಿಂದ, ಪುನರ್ಜನ್ಮದ ಚಕ್ರದಿಂದ ಪಾರಾಗುವುದು ಗುರಿ ಹಾಗೂ ಆದರ್ಶವಾಗಿದ್ದರೆ ಆಗ ಈ ಜ್ಞಾನ ನಿಜವಾದದ್ದು ಹಾಗೂ ಅದರ ಮಾರ್ಗ ವಿಸ್ತಾರವಾದದ್ದು ಎಂದು ತಿಳಿಯಬೇಕು, ಏಕೆಂದರೆ ಗೀತೆ ''ಓ ಅರ್ಜುನ, ಸರಿಯಾದ ತತ್ವಗಳಲ್ಲಿ ನನ್ನ